ಜನಪದ ಸೇವಕ

ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೭ ಏಪ್ರಿಲ್-೨೦೦೭ ಸಂಚಿಕೆ-೯



ಇಂದಿನ ಮಹಿಳೆ ಮತ್ತು ಇಂದಿನ ಸಮಾಜ

ಜನಪದ ವಿಚಾರದಲ್ಲಿ

ಏಪ್ರಿಲ್-೨೦೦೭

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜಸ್ಟ್

ಏಪ್ರಿಲ್-೨೦೦೭
ಸಂಪುಟ-೭
ಸಂಚಿಕೆ-೯

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

☎ ೦೮೨೩೭ ೨೯೮೭೪೮
e-mail - janapada@yahoo.com

ಓ ಕವಿತೆ! ಇದೋ ನಿನಗೆ ನನ್ನ ದೂರು
ಏತಕ್ಕೆ ನನಗೆ ಈ ಗಡಿಪಾರು?
ನಾ ಮಾಡಿದಂಥ ಅಪರಾಧವೇನು?
ನೀ ಕಲಿಸಿದಂತೆ ನಾ ನುಡಿಯಲಿಲ್ಲವೇನು?

ನೀನೆನ್ನ ಮನಸೆಳೆದೆ ಮೊಟ್ಟಮೊದಲು
ತಾನಾಗಿ ನುಡಿದಿತ್ತು ತನ್ನ ತೊದಲು.
ಕಣ್ಣೆದುರು ಸುಳಿದಿತ್ತು ನೂರು ಕನಸು
ಮೈಮರೆತು ಮೆರೆದಿತ್ತು ನನ್ನ ಮನಸು.

ಒಂದೆಸಮ ಹಾಡಿದೆನು ಬಿಡುವಿಲ್ಲದೆ
ಒಂದೆಸಮ ಹಿಗ್ಗಿದೆನು ಎಣೆಯಿಲ್ಲದೆ.
ನೂರು ನೋವನು ನುಂಗಿ ನಲವನೆರೆದೆ
ಬಾಳಿ ಬದುಕುವೆನೆಂದು ಗೆಲುವನೊಲಿದೆ

ನುಡಿವ ನುಡಿ ತತ್ತರಿಸಿ ಕುಸಿಯುತಿಹುದು
ಅರಿವ ಮತಿ ಗತಿ ತಪ್ಪಿ ಕನಲುತಿಹುದು
ನೂರೆಂಟು ನೋವಿನಲಿ ನುಚ್ಚಾಗಿಹುದು
ಬೇಸರವೆ ಬಾಯ್ತೆರೆದು ನೊಣೆಯುತಿಹುದು

ಸೃಷ್ಟಿ ಕೈಬಿಟ್ಟಿಹಳು ದೂರಸರಿದು
ನಿತ್ಯ ಜೀವನವೋ ಬರಿದೋ ಬರಿದು
ಸುಳಿಯದಂತಿಹದು ಭಾವವೂ ಮುನಿದು
ಮುದವಿಲ್ಲದೀ ಬದುಕು ಇದ್ದರೂ ಇರದು

ಸಂಧಿಕಾಲದಲಿ ಸಂದಿಗ್ಧ ಚಿತ್ತ
ತೂಗಾಡುತಿದೆ ಬಿಡದೆ ಅತ್ತ ಇತ್ತ!
ಸ್ವಚ್ಛಂದದಲಿ ಚಂದವನೆ ಅರಸಿ
ತನ್ನಂದವನೆ ಕಾಣಲಿದೆ ಬಯಸಿ!

ಓ ಕವಿತೆ! ಸಾಕು ಈ ಕಠಿಣ ಶಿಕ್ಷೆ
ದೊರೆಯೆ ಮಾತೃಹೃದಯದ ಕೃಪಾರಕ್ಷೆ
ಮೈಮರೆತು ಹಾಡುವೆನು ಮತ್ತೆ ಹಿಗ್ಗಿ
ಸಾಗಿ ಬರೆ ಹೊಚ್ಚ ಹೊಸತೆನಿಪ ಸುಗ್ಗಿ.

– ಜಿ. ವರದರಾಜರಾವ್

ವಿಚಾರ ದೀಪ್ತಿ

ಸರ್ಕಾರಿ ನೌಕರರಿಗೆ ಮೂಲ ವೇತನ ಮತ್ತು ತುಟ್ಟಿಭತ್ಯೆಯನ್ನು ಭಾರಿ ಪ್ರಮಾಣದಲ್ಲಿ ನೀಡುವಂತೆ ವೇತನ ಆಯೋಗದವರು ನೀಡಿರುವ ವರದಿ ಅಸಮಂಜಸವಾಗಿದೆ.

ಸರ್ಕಾರಿ ನೌಕರರಲ್ಲಿ ಮನೆ ಮಾಡಿರುವ ಭ್ರಷ್ಟಾಚಾರ ಮತ್ತು ಲಂಚಗುಳಿತನದ ವಿರುದ್ಧ ಯಾವುದೇ ಬಿಗಿಕ್ರಮವನ್ನು ಕೈಗೊಳ್ಳದೆ ಪದೆ ಪದೆ ವೇತನವನ್ನೇ ಹೆಚ್ಚಿಸುತ್ತಾ ಹೋಗುವುದು ಪ್ರಜಾವಿರೋಧಿ ನೀತಿಯಾಗಿದೆ. ಏರುತ್ತಿರುವ ಬೆಲೆಗಳು ನೌಕರರಿಗೆ ಜೀವನ ನಡೆಸಲು ಕಷ್ಟಸಾಧ್ಯವಾದರೂ ನೌಕರರ ವೇತನ ಸರ್ಕಾರದ ಆದಾಯಕ್ಕೆ ಧಕ್ಕೆಯಾಗದಂತೆ ಹೆಚ್ಚಳಮಾಡುವುದು ಸೂಕ್ತವಾದೀತು. ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ ೦.೬ ರಷ್ಟಿರುವ ಸರ್ಕಾರಿ ಸಿಬ್ಬಂದಿಗಳಿಗೆ ರಾಜ್ಯದ ಬೊಕ್ಕಸದಿಂದ ಶೇ ೬೪ ರಷ್ಟು ಸಂಬಳ, ಸಾರಿಗೆಯೆಂದು ವ್ಯಯವಾಗುತ್ತಿರುವುದು ಅಭಿವೃದ್ಧಿಗೆ ತಡೆಯಾಗಿದೆ.

ಸರ್ಕಾರವು ನೌಕರರ ಭ್ರಷ್ಟಾಚಾರವನ್ನು ತಡೆಯದೆ ವೇತನವನ್ನು ಹೆಚ್ಚಿಸುವುದರಿಂದ ಸಾರ್ವಜನಿಕರ ಬೆವರಿನ ಹಣವು ಅಭಿವೃದ್ಧಿಯೋಜನೆಗಳಿಗೆ ವಿನಿಯೋಗವಾಗದೆ ಅಧಿಕಾರಿಗಳ ತಿಜೋರಿಗೆ ಸೇರಿ ದುರುಪಯೋಗವಾಗುತ್ತದೆ. ವೇತನ ಆಯೋಗವು ಕೇವಲ ವೇತನ ಹೆಚ್ಚಳವನ್ನು ಮಾತ್ರ ಶಿಫಾರಸು ಮಾಡಿ ನೌಕರರ ಭ್ರಷ್ಟಾಚಾರದ ಬಗ್ಗೆ ಮೌನವಹಿಸುವುದು ಖಂಡನೀಯ.

– ಅಗಸನಪುರ ಚಂದ್ರಶೇಖರಪ್ಪ

ಇಂದಿನ ಮಹಿಳೆ ಮತ್ತು ಇಂದಿನ ಸಮಾಜ

-ಸುರೇಂದ್ರ ಕೌಲಗಿ

"ರಕ್ಷಣಾ ಶಕ್ತಿ ಇರುವಂಥ ಸ್ತ್ರೀಯರೇ ಹೆಗಲ ಮೇಲೆ ಬಂದೂಕನ್ನು ಹೊರಹತ್ತಿದರೆ ಜಗತ್ತನ್ನು ಯಾರು ಬದುಕಿಸಿಯಾರು?

-ವಿನೋಬಾ

ಸ್ತ್ರೀ ಸ್ವಾತಂತ್ರ್ಯ ಮತ್ತು ಲಿಂಗ ಸಮಾನತೆಯ ಹೆಸರಿನಲ್ಲಿ ಇಂದಿನ ಸಮಾಜ, ಮಹಿಳೆಯನ್ನು ಖಾಸಗೀ ವಲಯದ ಮಾರುಕಟ್ಟೆಯಲ್ಲಿ ಮಾರಾಟದ ವಸ್ತುವನ್ನಾಗಿ ಮಾಡಿದೆ. ಯಾವುದೇ ಐಶಾರಾಮಿ ವಸ್ತುವಿನ ಜಾಹಿರಾತು ಇರಲಿ, ಸಿನಿಮಾ ಪ್ರಚಾರದ ಜಾಹಿರಾತು ಇರಲಿ ಆ ಜಾಹಿರಾತಿನಲ್ಲಿ ಆ ಜಾಹಿರಾತಿನ ವಸ್ತುವಿನ ಜೊತೆಗೆ ಅರೆನಗ್ನ ಯುವತಿಯ ಬಣ್ಣದ ಚಿತ್ರವಿಲ್ಲದೆ ಇರುವುದಿಲ್ಲ. ಅಂದರೆ ಆ ವಸ್ತುವಿನ ಉಪಯೋಗದಂತೆಯೇ ಮಹಿಳೆಯ ಉಪಯೋಗವೂ ಇದೆ ಎಂದರ್ಥ ಮಾಡಬಹುದಲ್ಲವೆ? ಆ ವಸ್ತು ನಿರ್ಜೀವ, ಮಹಿಳೆ ಜೀವನ ಸಂಕೇತ. ಹಾಗಾದರೆ ಆ ಜಾಹಿರಾತಿನ ಪ್ರಕಾರ ಚೇತನ, ಜಡ ಎರಡೂ ಒಂದೇ ಎಂದರ್ಥ ಮಾಡಬಹುದಲ್ಲವೆ? ಆ ವಸ್ತುವನ್ನು ನೀವು ಇಷ್ಟಪಟ್ಟರೆ ಖರೀದಿಸುವಂತೆ ಮಹಿಳೆಯನ್ನೂ ಇಷ್ಟ ಪಟ್ಟಲ್ಲಿ ಖರೀದಿಸಬಹುದೆಂದು ಎಂದರ್ಥ ಮಾಡಬಹುದಲ್ಲವೆ? ಆ ವಸ್ತುವನ್ನು ಯಾವ ಕೆಲಸಕ್ಕಾಗಿಯೂ ಬಳಸಿಕೊಳ್ಳುವಂತೆ ಮಹಿಳೆಯನ್ನೂ ಯಾವ ಕೆಲಸಕ್ಕಾದರೂ ಉಪಯೋಗಿಸಿಕೊಳ್ಳ ಬಹುದು ಎಂದರ್ಥ ಮಾಡಬಹುದಲ್ಲವೆ? ಆ ವಸ್ತುವಿನ ಸಾರ್ಥಕ್ಯದ ನಂತರ ಅದನ್ನು ಎಸೆದು ಬಿಡುವಂತೆ ಮಹಿಳೆಯನ್ನೂ ಅವಳ ಉಪಯೋಗದ ನಂತರ ಎಸೆದು ಬಿಡಬಹುದು ಎಂದರ್ಥ ಮಾಡಬಹುದಲ್ಲವೆ? ಈ ಪ್ರಶ್ನೆಗಳು ಸಾಮಾನ್ಯ ಜಾಹಿರಾತಿನ ಫಲವಾಗಿ ಮೂಡಿ ಬರುವಂಥವು. ಇನ್ನು ಮಹಿಳೆಯ ಹೆಗಲ ಮೇಲಿನ ಕೋವಿಯ ವಿಷಯ ಬಂದಾಗ, ಮಹಿಳೆಯೇ ಸ್ವತಃ ಸುರಾಪಾನ ಮಾರುವ ವಿಷಯ ಬಂದಾಗ, ಮಹಿಳೆಯೇ ಸ್ವತಃ ಲೈಂಗಿಕ ಕ್ಷೇತ್ರದಲ್ಲಿಯೂ ಸಮಾನತೆಯನ್ನು ಅರಸುತ್ತ ಹೊರಟಾಗ, ಮಹಿಳೆಯೇ ಕಾಂಚನದ ಬೆನ್ನು ಹತ್ತಿ ತನ್ನ ಸಂಸಾರ ಸುಖವನ್ನು ಉದಾಸೀನ ಮಾಡ ಹೊರಟಾಗ ಸಾಮಾಜಿಕ - ಆರ್ಥಿಕ ಪ್ರಶ್ನೆಗಳು ಬಂದಾಗ ಇಂದಿನ ಸಮಾಜ ಮಹಿಳೆಯ ಬಗ್ಗೆ ಎಷ್ಟು ಜವಾಬ್ದಾರಿಯಿಂದ ಇದೆ ಹಾಗೂ ಇಂದಿನ ಮಹಿಳೆ ಇಂದಿನ ಸಮಾಜದ ಬಗ್ಗೆ ಎಷ್ಟು ಜವಾಬ್ದಾರಿಯಿಂದ ಇದ್ದಾಳೆ ಎಂಬಂಥ ಗಂಭೀರವಾದ ವಿಚಾರಗಳು ಜನಮಾನಸದ ಭಿತ್ತಿಯ ಮೇಲೆ ಮೂಡಿ ಬರಬೇಕಲ್ಲವೆ? ಆದರೆ ಹಾಗಾಗುತ್ತಿಲ್ಲವೆಂಬುದೇ ಚಿಂತೆಯ ಸಂಗತಿಯಾಗಿದೆ. ಈಗ ತಾನೆ ಮಾರ್ಚ್

ಲರಂದು ಆಚರಿಸಲ್ಪಟ್ಟ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯ ವೈಖರಿಯನ್ನು ನೋಡಿದಾಗ ಈ ಮಾತಿನ ಸತ್ಯಾಸತ್ಯತೆ ಗೊತ್ತಾಗುತ್ತದೆ. ಪ್ರತಿಯೊಂದು ವೇದಿಕೆಯ ಮೇಲಿಂದ ಮಾಡಿದ ಭಾಷಣಗಳೆಲ್ಲವೂ ಮಹಿಳೆ ಉಪಭೋಗದ ವಸ್ತುವೆಂದರ್ಥದ ಧಾಟಿಯಲ್ಲಿದ್ದವೇ ಹೊರತು ಅವಳ ನೈಜ ಮತ್ತು ಆಂತರಿಕ ಸಾಮರ್ಥ್ಯದ ವಿಕಸನಕ್ಕೆ ಅಗತ್ಯವಾದ ಪೂರಕ ಸಾಮಾಜಿಕ ಪರಿಸರದ ಚಿಂತನೆಗಳಾಗಿರಲಿಲ್ಲ. ಮಹಿಳೆ ಹೇಗೆ ಸಮಾಜದ ಸಾಂಸ್ಕೃತಿಕ ಮತ್ತು ನೈತಿಕ ನೆಲೆಗಟ್ಟಿನ ಆಧಾರವಾಗಿದ್ದಾಳೆ, ಅದನ್ನು ಅವಳು ಹೇಗೆ ಇನ್ನೂ ಸುಭದ್ರಗೊಳಿಸಬಹುದೆಂಬ ಚಿಂತನೆಗಳಿರಲಿಲ್ಲ. ಸಮಾಜದ ಇನ್ನೊಂದು ಭಾಗವಾದ ಪುರುಷನ ಹೊಣೆಗಾರಿಕೆಯೇನು ಎಂಬ ಚಿಂತನೆಯಿರಲಿಲ್ಲ. ಮಹಿಳೆಯನ್ನು ಹೊಗಳುವ, ವೈಭವೀಕರಿಸುವ ಮಾತುಗಳು ಕೇಳಿಬಂದವೇ ಹೊರತು ಇಂದು ಮಹಿಳೆಯನ್ನು ಮಾರಾಟದ ಹಾಗೂ ಉಪಭೋಗದ ವಸ್ತುವಿನ ಮಟ್ಟಕ್ಕೆ ಇಳಿಸಿರುವ ಪುರುಷನ ಪಾತ್ರವನ್ನು ಖಂಡಿಸುವ ಮಾತಾಗಲೀ, ಅವನ ಸ್ವಾರ್ಥ ಬುದ್ಧಿಯನ್ನು, ಹೀನ ಪ್ರವೃತ್ತಿಯನ್ನು ಹೀಗೆಳೆಯುವ ಮಾತುಗಳಾಗಲೀ ಕೇಳಿಬರಲಿಲ್ಲ.

ಸಮುದ್ರವೇ ತನ್ನ ಉಪ್ಪನ್ನು ಕಳೆದುಕೊಂಡರೆ ಅದಕ್ಕೆ ಆ ಉಪ್ಪನ್ನು ತಂದು ಕೊಡುವವರ್‍ಯಾರು? ಇಂದಿನ ಸಮಾಜದಲ್ಲಿ ಮಹಿಳೆಯೇ ತನ್ನ ಸ್ತ್ರೀತ್ವವನ್ನು ಕಳೆದುಕೊಂಡರೆ ಅವಳಿಗೆ ಆ ಸ್ತ್ರೀತ್ವವನ್ನು ತಂದು ಕೊಡುವವರ್‍ಯಾರು? ಮಹಿಳೆ ಮತ್ತು ಸಮಾಜದ ಸಂಬಂಧ ಸಮುದ್ರ ಮತ್ತು ಅದರಲ್ಲಿಯ ಅಲೆಗಳ ಸಂಬಂಧದಂತಿದೆ. ಅಂದರೆ ಸಮುದ್ರವು ಅಲೆಗಳದ್ದೊ, ಅಲೆಗಳು ಸಮುದ್ರದ್ದೊ ಎಂಬ ಪ್ರಶ್ನೆಗೆ ಉತ್ತರ ಸಿಗದಷ್ಟೆ ಸಂಕೀರ್ಣವಾಗಿದೆ. ಸಮಾಜ ಮತ್ತು ಮಹಿಳೆಯ ಸಂಬಂಧ ಅಲೆಗಳನ್ನು ಮರೆತು ಸಮುದ್ರವನ್ನು ಹೇಗೆ ಕಲ್ಪಿಸಿಕೊಳ್ಳಲಾಗುವುದಿಲ್ಲವೊ ಹಾಗೆಯೇ ಮಹಿಳೆಯರಿಲ್ಲದ ಸಮಾಜವನ್ನು ಊಹಿಸಿಕೊಳ್ಳಲಾಗುವುದಿಲ್ಲ.

ಸಮಾಜದ ನಿರ್ಮಾಣಕ್ಕೆ, ನಿರ್ಮಾಣದ ನಂತರ ಅದರ ಉಳಿವಿಕೆಗೆ ಉಳಿವಿಕೆಯ ನಂತರ ಅದರ ವಿಕಾಸಕ್ಕೆ ಮಹಿಳೆಯರು ಅಗತ್ಯವೆಂಬ ಮಾತು ಸನಾತನವಾದುದು. ಸೂರ್ಯ- ಚಂದ್ರರಿರುವರೆಗೂ ಇರುವ ಮಾತು.

ಇಪ್ಪತ್ತನೇ ಶತಮಾನದವರೆಗೆ ಪುರುಷ ಪ್ರಧಾನವಾಗಿದ್ದ ಸಮಾಜ ಇಪ್ಪತ್ತೊಂದನೇ ಶತಮಾನದ ಉದಯದೊಂದಿಗೆ ಹೊಸ ಮಗ್ಗಲು ಹೊರಳಿತು. ಪುರುಷ ಮತ್ತು ಮಹಿಳೆಯರ ಸಹಭಾಗಿತ್ವದಿಂದ ಉಂಟಾದ ಸಮಾಜವು ಇನ್ನು ಮುಂದೆ ಪುರುಷ ಪ್ರಧಾನವೂ ಆಗಿರದೆ, ಸ್ತ್ರೀ ಪ್ರಧಾನವೂ ಆಗಿರದೆ ಸ್ತ್ರೀ-ಪುರುಷರಿಬ್ಬರಿಗೂ ಪ್ರಾಧಾನ್ಯತೆಯುಳ್ಳ ಸಮಾಜವಾಗಿರುತ್ತದೆ. ಎಂಬ ವಿಚಾರದ ಶಕೆ ಪ್ರಾರಂಭವಾಯಿತು. ಅಂದರೆ ಪುರುಷರು ಸ್ತ್ರೀಯರಾಗಬೇಕು, ಸ್ತ್ರೀಯರು ಪುರುಷರಾಗಬೇಕು ಮತ್ತು ಇಬ್ಬರೂ ಪರಿಪೂರ್ಣರಗಬೇಕೆಂಬ ವಿಚಾರವು

ಪ್ರಧಾನವಾಗಬೇಕೆಂಬ ಆಶಯದ ಯುಗ ಪ್ರಾರಂಭವಾಯಿತು ಆದರೆ ವಾಸ್ತವದಲ್ಲಿ ಆಗಿರುವುದೇನು? ಮಹಿಳೆಯರು ತಮ್ಮೆಲ್ಲ ಸ್ತ್ರೀತ್ವದ, ತಾಯ್ತನದ, ಸೊದರೀತ್ವದ ಗುಣವಿಶೇಷಗಳೊಂದಿಗೆ ಪುರುಷರಲ್ಲಿರುವಂಥ ಪೌರುಷದ ಗುಣಗಳನ್ನು ತಮ್ಮಲ್ಲಿ ಬೆಳೆಸಿಕೊಳ್ಳುತ್ತಾ ಅಹಿಂಸಾ ಶಕ್ತಿಯ ರೂಪಕವಾಗಬೇಕಾಗಿತ್ತು. ಸಮಾಜದ ಒಟ್ಟಾರೆ ಸ್ವಾಸ್ಥ್ಯವನ್ನು ಕಾಪಡಬೇಕಿತ್ತು. ಬದಲಿಗೆ ಇಂದು ಮಹಿಳೆ ಪುರುಷರಲ್ಲಿ ಸುಪ್ತವಾಗಿರುವ ಕಾಮವಾಸನೆಯ ಸಮ್ಮೋಹಕ್ಕೆ ದಾಸನನ್ನಾಗಿ ಮಾಡುವ, ಕ್ರೋಧಕ್ಕೆ ಅಧೀನ ಪಡಿಸುವ ಮತ್ತು ಅವನ ಬುದ್ಧಿಯನ್ನು ನಾಶಪಡಿಸುವ ಹಿಂಸಾಶಕ್ತಿಯಾಗಿದ್ದಾಳೆ. ಹಣ, ಆಭರಣ, ವಸ್ತ್ರಗಳ ಆಶೆಗೆ ಮಹಿಳೆ ತನ್ನ ಮಾನವನ್ನು ಮಾರಾಟಕ್ಕಿಟ್ಟಿದ್ದಾಳೆ. ತನ್ನ ಗರ್ಭವನ್ನು ಪರಪುರುಷನ ವೀರ್ಯಕ್ಕೆ ಬಾಡಿಗೆಗೆ ಕೊಟ್ಟು ತಾಯ್ತನವನ್ನು ಮಾರುತ್ತಿದ್ದಾಳೆ. ಇಂಥ ಘಟನೆಗಳು ಕೊಲ್ಕತ್ತಾದಲ್ಲಿ ಸಾಮಾನ್ಯವಾಗಿವೆ. ಅಲ್ಲಿ ಅನೇಕ ಮಹಿಳೆಯರು ಈ ಬಗ್ಗೆ ತಮ್ಮ ಸಿದ್ಧತೆಯನ್ನು ತಿಳಿಸಿ ಪತ್ರಿಕೆಗಳಲ್ಲಿ ಜಾಹಿರಾತು ಕೊಡುತ್ತಿದ್ದಾರೆ. ಇತ್ತೀಚಿಗೆ ಇಂಗ್ಲಿಷ್ ಪತ್ರಿಕೆಯೊಂದರಲ್ಲಿ 'ಸೌಂದರ್ಯದ ಹಿಂದೆ ಇರುವ ಕಾಡು ಪ್ರಾಣಿ' Beast of Beauty ಎಂಬ ಲೇಖನ ಪ್ರಕಟಗೊಂಡಿದೆ. ಹೇಗೆ ಇಂದಿನ ಯುವತಿಯರು ತಮ್ಮ ಮುಖದ ಸೌಂದರ್ಯದ ವೃದ್ಧಿಗಾಗಿ ಎಂಥೆಂಥ ಶಸ್ತ್ರಕ್ರಿಯೆಗಳನ್ನು ಅಪಾರ ಹಣ ಖರ್ಚುಮಾಡಿ ಮಾಡಿಸಿಕೊಳ್ಳುತ್ತಾರೆ ಎಂಬುದರ ವಿವರಣೆಯನ್ನು ಕೊಡಲಾಗಿದೆ. ಇಂಥ ಆಸುರಿ ಆಶೆ ನಮ್ಮ ಮಹಿಳೆಯರಲ್ಲಿ ಮೊಳೆಯಲು ಕಾರಣವೇನು ಮತ್ತು ಕಾರಣರಾರು? ಕಾರಣವನ್ನು ತಿಳಿಯುವುದು ಕಷ್ಟವೇನಲ್ಲ. ಇಂದಿನ ಮಹಿಳೆ ತನ್ನನ್ನು ತಾನು ಒಂದು ದೇಹವೆಂದು ಮಾತ್ರ ತಿಳಿದಿದ್ದಾಳೆಯೆ ಹೊರತು ತನ್ನ ದೇಹದೊಳಗಿರುವ ಅದ್ಭುತ ಆತ್ಮಶಕ್ತಿ ತಾನೆಂದು ತಿಳಿದಿಲ್ಲ. ಇನ್ನು ಕಾರಣರಾರು ಎಂಬ ಪ್ರಶ್ನೆಗೂ ಉತ್ತರವನ್ನು ತಿಳಿಯುವುದು ಕಷ್ಟವೇನಲ್ಲ. ಉತ್ತರ ಅದೇ, ಲಾಲಸಾವಶವಾಗಿರುವ ಇಡೀ ಸಮಾಜ. ಇಲ್ಲಿ ಇಡೀ ಸಮಾಜವೆಂದು ಒಂದೇ ಮಾತನ್ನು ಹೇಳುವುದರ ಬದಲಾಗಿ ವಿವರವಾಗಿ ಹೇಳುವುದು ಸೂಕ್ತವೆನಿಸುತ್ತದೆ. ಸಮಾಜದ ವಿವಿಧ ಭಾಗಗಳ ವಿವಿಧ ವರ್ಗಗಳ, ವಿವಿಧ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಜನರು. ಅಂದರೆ ವಿಜ್ಞಾನಿಗಳು, ತಂತ್ರಜ್ಞಾನಿಗಳು, ಕಲಾಕಾರರು, ಸಾಹಿತಿಗಳು, ಅಧ್ಯಾಪಕರು, ರಾಜಕಾರಣಿಗಳು. ವೈದ್ಯರು, ಕೈಗಾರಿಕೋದ್ಯಮಿಗಳು, ಹಣವಂತರು, ಪತ್ರಿಕೋದ್ಯಮಿಗಳು, ದೃಶ್ಯಮಾಧ್ಯಮದವರು, ಶಿಕ್ಷಿತರು ಮತ್ತು ಸಮಾಜ ವ್ಯವಸ್ಥೆಯಲ್ಲಿ ಆಯಕಟ್ಟಿನ ಸ್ಥಾನದಲ್ಲಿರುವವರು ಹಾಗೂ ಸ್ವತಃ ಸ್ತ್ರೀಯರು. ಸ್ವಾತಂತ್ರ್ಯದ ಏಳು ದಶಕಗಳಲ್ಲಿ ಕೆಲವೊಂದು ವ್ಯತ್ಯಾಸಗಳಾಗಿವೆ ಅವುಗಳನ್ನು ನಾನು ಗೌರವಿಸುತ್ತೇನೆ ಆದರೆ ನನಗೆ ಅಳು ಬರುವಂಥ ಎಷ್ಟೋ ಪರಿವರ್ತನೆಗಳೂ ಆಗಿವೆ. ಭೋಗವಿಲಾಸದ ಸಾಧನಗಳು ಹೆಚ್ಚುತ್ತಲಿವೆ. ಭೋಗವೃತ್ತಿಗೆ ಸಮಾಜ ತುತ್ತಾಗುತ್ತಲಿದೆ ಎಂದು

ಅನಿಸುವುದು ಕೂಡ ಇಲ್ಲ. ಅನಿಸಿದರೆ ಏನಾದರೂ ಪರಹಾರ ಸಿಗುತ್ತಿತ್ತು ಎಂದೆಲ್ಲಾ ವಿನೋಬಾ ತಮ್ಮ ನೋವನ್ನು ತೋಡಿಕೊಂಡಿದ್ದಾರೆ. ಅಂದರೆ ಇಡೀ ಸಮಾಜವು ಅನೈತಿಕತೆಯ ತಾಳಕ್ಕೆ ಕುಣಿಯುತ್ತಿದೆ. ಇಂಥ ವಿಚಾರಗಳ ಬಗ್ಗೆ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ಗಂಭೀರವಾದ ಚರ್ಚೆ ಏಕೆ ನಡೆಯಲಿಲ್ಲ. ಏಕೆಂದರೆ ಸಾಮಾಜಿಕ ಮೌಲ್ಯಗಳ ಅಧಃಪತನದ ಬಗ್ಗೆ ಯಾರಿಗೂ ಏನೂ ತೀವ್ರವಾಗಿ ಅನಿಸುತ್ತಿಲ್ಲ. ಈಗ ಈ ಪರಿಸ್ಥಿತಿಯನ್ನು ಇತ್ತೀಚಿಗಿನ ಸುನಾಮಿ ಅಲೆಗಳೊಂದಿಗೆ ಹೋಲಿಸಬಹುದು. ಎಲ್ಲ ನದಿಗಳ ನೀರನ್ನು ತನ್ನಲ್ಲಿ ಸೇರಿಸಿಕೊಂಡರೂ ತನ್ನ ಮರ್ಯಾದೆಯನ್ನು ಬಿಡದ ಸಾಗರ, ಅದೇ ತನ್ನ ಒಡಲೊಳಗಾದ ಭೂಕಂಪನದಿಂದ ಎದ್ದ ಭೀಕರ ಅಲೆಗಳನ್ನು ಅದು ನಿಗ್ರಹಿಸಲು ಅಸಮರ್ಥವಾಯಿತು. ಹಾಗೆಯೇ ಇಂದಿನ ಸಮಾಜ ಮತ್ತು ಇಂದಿನ ಮಹಿಳೆ ನೈತಿಕತೆ ಮತ್ತು ಸಂಸ್ಕೃತಿ ಎಂಬ ಗಡಿಯನ್ನು ಉಲ್ಲಂಘಿಸಿ ಹೊರಬಂದಿರುವುದರಿಂದ ಸಮಾಜದಲ್ಲಿ ಎಲ್ಲ ಬಗೆಯ ಗ್ಲಾನಿಗಳ ಸುನಾಮಿ ಅಲೆಗಳೆದ್ದಿವೆ. ಅಲೆಗಳನ್ನೇನೋ ಎಬ್ಬಿಸಿಯಾಗಿದೆ. ಆದರೆ ಅವುಗಳ ಹೊಡೆತವನ್ನು ಎದುರಿಸುವ ಶಕ್ತಿ ಇಂದಿನ ಸಮಾಜಕ್ಕೆ ಇಲ್ಲವಾಗಿದೆ. ಸಮಾಜ ನೈತಿಕತೆಯ ಗಡಿಯನ್ನು ದಾಟಿದೆ ಎಂಬುದಕ್ಕೆ ಜ್ವಲಂತ ಉದಾಹರಣೆ. ಈಗ ಶಾಲಾ ಮಕ್ಕಳಿಗೆ ಲೈಂಗಿಕ ವಿಷಯವನ್ನು ಬೋಧನೆ ಮಾಡಬೇಕೆಂದು ತೀರ್ಮಾನಕ್ಕೆ ಸರ್ಕಾರ ಮತ್ತು ಸಾಮಾಜಿಕ ಚಿಂತಕರು ಬರುತ್ತಿರುವುದು. ಮೇಲ್ನೋಟಕ್ಕೆ ಇದರ ಹಿಂದಿರುವ ಉದ್ದೇಶ್ಯ ಸೂಕ್ತವೆಂದೆನಿಸಿದರೂ ಸರ್ಕಾರದ ಅನೇಕ ಯೋಜನೆಗಳು ಅನುಷ್ಠಾನದ ಹಂತದಲ್ಲಿ ಎಷ್ಟು ಭೀಕರವಾಗಿರುತ್ತದೆ ಎಂಬುದು ಎಲ್ಲರಿಗೂ ತಿಳಿದ ವಿಷಯವೇ. ಅಂಥದೇ ದುರವಸ್ಥೆ ಈ ಕಾರ್ಯಕ್ರಮಕ್ಕೆ ಒದಗಿದರೆ ಅದಕ್ಕೆ ಯಾರು ಜವಾಬ್ದಾರರು? ವಯಸ್ಸಿಗೆ ಬರುವ ಮಕ್ಕಳಿಗೆ ಮಾರ್ಗದರ್ಶನ ಮಾಡಲು ತಾಯಿ-ತಂದೆಗಳೇ ಯೋಗ್ಯರು, ಬೇರೆಯವರಲ್ಲ.

ಇಂದು ಭಾರತದ ತುಂಬೆಲ್ಲಾ ಏಡ್ಸ್ ರೋಗ ವ್ಯಾಪಿಸಿಕೊಂಡಿದೆ. ಈಗ ಏಡ್ಸ್ ರೋಗದ ತಡೆಗೆ ಅನೇಕ ಉಪಾಯಗಳ ಪ್ರಚಾರವೇನೋ ಆಗುತ್ತಿದೆ. ಏಡ್ಸ್ ವಿರುದ್ಧದ ಹೋರಾಟಕ್ಕಾಗಿ ಸರ್ಕಾರಗಳು ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಿವೆ. ಸದ್ಯಕ್ಕೆ ಏಡ್ಸ್ ರೋಗದ ಹಬ್ಬುವಿಕೆ ಕಡಿಮೆಯಾಗುವ ಯಾವ ಸೂಚನೆಗಳೂ ಕಾಣ ಬರುತ್ತಿಲ್ಲ. ಬದಲಿಗೆ ಅದು ದಿನಗಳು ಉರುಳಿದಂತೆ ಹೆಚ್ಚಾಗುತ್ತಲಿದೆ. ಏಡ್ಸ್ ರೋಗ ಕಾಣಿಸಿಕೊಳ್ಳಲು ಕಾರಣವೇನು? ಅದು ಮಹಿಳೆ ಮತ್ತು ಪುರುಷರಲ್ಲಿಯ ಸ್ವೇಚ್ಛಾಚಾರದ ಸ್ವಭಾವವಲ್ಲವೆ? ಈ ಕಾರಣವನ್ನು ಕೆಲವರು ನಿರಾಕರಿಸುತ್ತಾ ಏಡ್ಸ್‌ಗೆ ಇನ್ನಿತರ ಅನೇಕ ಕಾರಣಗಳನ್ನು ಹೇಳಬಹುದು. ಈ ಕಾರಣಗಳು ಎಂಥವೆಂದರೆ ಮನುಷ್ಯನಿಗೆ ಅವನಿಗೆ ಅರಿವಿಲ್ಲದೆಯೆ ಮತ್ತು ಬೇರೆಯವರ ಅಜಾಗರೂಕತೆಯಿಂದ ಬರುವಂಥವವು. ಕಾರಣಗಳು ಎಂಥವೇ

ಇರಲಿ ಆ ಕಾರಣಗಳ ಹಿಂದೆ ಮನುಷ್ಯನ ದೌರ್ಬಲ್ಯಗಳು, ಹೊಣಗೇಡಿತನಗಳು ಮುಖ್ಯ ಎಂಬುದು ಗೊತ್ತಾಗದೇ ಇರುವುದಿಲ್ಲ. ಕನ್ನಡದ ಒಂದು ಪ್ರಸಿದ್ಧ ವಾರಪತ್ರಿಕೆಯಲ್ಲಿ ಏಡ್ಸ್ ಕುರಿತಾದ ಲೇಖನದಲ್ಲಿಯ ಈ ಸಾಲುಗಳನ್ನು ಓದಿ ಇಂದು ಶ್ರೀಮಂತ ಮತ್ತು ಮೇಲು ಮಧ್ಯಮವರ್ಗದ ಮಹಿಳೆಯರಲ್ಲಿ ಹೈಟೆಕ್ ವೇಶ್ಯಾವಾಟಿಕೆ ನಡೆಸುವವರಿದ್ದಾರೆ. ಗಂಟೆಗೆ ಸಾವಿರಗಟ್ಟಲೆ ಸಂಪಾದನೆ ಮಾಡುವವರಿದ್ದಾರೆ ಇವರಲ್ಲಿ ಕೆಲವರು ವಿಲಾಸಕ್ಕೊಸ್ಕರ ಲೈಂಗಿಕ ಕ್ರೀಡೆಯಲ್ಲಿ ತೊಡಗುವವರೂ ಇದ್ದಾರೆ. ಈ ವಾಕ್ಯಗಳು ಧ್ವನಿಸುವ ಅರ್ಥ ಮಹಿಳೆಯರು ಮತ್ತು ಪುರುಷರಲ್ಲಿಯ ದೌರ್ಬಲ್ಯಗಳ ಕುರಿತಾಗಿಲ್ಲವೆ? ಇದೇ ಪತ್ರಿಕೆಯು ಪ್ರಕಟಿಸಿರುವ ಏಡ್ಸ್ ಕುರಿತಾದ ಅಂಕಿ ಸಂಖ್ಯೆಗಳನ್ನು ನೋಡಿ ವಿಶ್ವದಾದ್ಯಂತ ಸುಮಾರು ನಲವತ್ತು ಮಿಲಿಯನ್ ಮಂದಿ ಹೆಚ್.ಐ.ವಿ. ಸೊಂಕು ಪೀಡಿತರಿದ್ದಾರೆ. ಪ್ರತಿವರ್ಷವೂ ಅಂಕಿ ಅಂಶಗಳು ದಿಗಿಲು ಹುಟ್ಟಿಸುತ್ತವೆ. ಭಾರತದಲ್ಲಿ ೫-೭ ದಶಲಕ್ಷ ಜನರು ಹೆಚ್.ಐ.ವಿ. ಸೊಂಕು ಪೀಡಿತರಾಗಿದ್ದಾರೆ. ಕರ್ನಾಟಕದಲ್ಲಿ ಈಗ ಐದು ಲಕ್ಷ ಜನರಿದ್ದಾರೆ. ಈ ಅಂಕಿಗಳು ಏಡ್ಸ್ ಸಮಸ್ಯೆಯ ಭೀಕರತೆಯನ್ನು ತೋರಿಸುವುದರ ಜೊತೆಗೆ ನಮ್ಮಿ ಸಮಾಜ ನೈತಿಕತೆಯ ವಿಷಯದಲ್ಲಿ ಎಷ್ಟೋಂದು ದುರ್ಬಲವಾಗಿದೆ ಎಂಬುದನ್ನು ತೋರಿಸುತ್ತದೆ. ಇಲ್ಲಿ ಗಮನಿಸಬೇಕಾದ ಸಂಗತಿ ಏನೆಂದರೆ ಲೈಂಗಿಕತೆಗೂ ನೈತಿಕತೆಗೂ ಅವಿನಾಭಾವ ಸಂಭಂದವಿದೆ. ನೈತಿಕತೆ ಕುಸಿದಷ್ಟು ಲೈಂಗಿಕತೆ ಏರುತ್ತದೆ ಲೈಂಗಿಕ ಶಕ್ತಿ ಮನುಷ್ಯರಲ್ಲಿ ಹೆಚ್ಚಿದಷ್ಟು ಮಹಿಳೆ ವಾಣಿಜ್ಯ ವಸ್ತುವಾಗುತ್ತಾ ಹೋಗುತ್ತಾಳೆ. ತನ್ನ ತನವನ್ನು ಕಳೆದುಕೊಳ್ಳುತ್ತಾಳೆ. ಗಾಂಧೀಜಿ ಒಂದು ಕಡೆ ಹೇಳುವಂತೆ ಎಷ್ಟೋ ಅಹಲ್ಯೆಯರು ಕಲ್ಲಾಗಿದ್ದಾರೆ ತಮ್ಮ ತಮೋಗುಣದ ಕಾರಣದಿಂದ. ಅಂದರೆ ಸಮಾಜದ ನೈತಿಕ ಆರೋಗ್ಯವನ್ನು ಕಾಪಾಡಬಲ್ಲಂಥ, ಸಾಂಸ್ಕೃತಿಕ ಬೆಳವಣಿಗೆಯನ್ನು ಘೋಷಿಸಬಲ್ಲಂಥ, ಸಮಾಜಕ್ಕೆ ನೇತೃತ್ವಕೊಡಬಲ್ಲಂಥ, ಸಮಾಜದಲ್ಲಿ ಅಹಿಂಸೆಯನ್ನು ಸ್ಥಾಪಿಸಬಲ್ಲಂಥ, ಒಳ್ಳೆಯ ತಾಯಂದಿರಾಗಬಲ್ಲಂಥ, ಸತ್ಯಾಗ್ರಹಿಯಾಗಬಲ್ಲಂಥ, ಅನೇಕ ಮಹಿಳೆಯರು ಇಂದು ಇಂದಿನ ಸಮಾಜದ ತಪ್ಪು ಹೆಜ್ಜೆಗಳಿಂದಾಗಿ ನಿಜವಾದ ಅರ್ಥದಲ್ಲಿ ಶಿಲೆಗೆಸಮಾನವಾಗಿ ಜಡಜೀವಿಗಳಾಗಿದ್ದಾರೆ, ಅವರು ನವನಾಗರಿಕತೆಯ ಗಾಳಿಯಲ್ಲಿ ತರಗೆಲೆಗಳಂತೆ ತೂರಿಕೊಡು ಹೋಗುತ್ತಿದ್ದಾರೆ. ಭಾರತೀಯ ನಾಗರಿಕತೆಯಲ್ಲಿಯ ಸ್ತ್ರೀಯರ ಜವಾಬ್ದಾರಿಯನ್ನು ಮರೆಯುತ್ತಿದ್ದಾರೆ ಅವರು ಸ್ತ್ರೀ ಸ್ವಾತಂತ್ರ್ಯ ಮತ್ತು ಸಮಾನತೆಯ ಹೆಸರಿನಲ್ಲಿ ತಮ್ಮನ್ನು ತಾವು ಅಸಮಾಜಿಕ ಚಟುವಟಿಕೆಗಳಿಗೆ ಮಾರಿಕೊಳ್ಳುತ್ತಿದ್ದಾರೆ. ವಾಸನೆಯ ಪ್ರವಾಹದಲ್ಲಿ ಕೊಚ್ಚಿಹೋಗುತ್ತಿದ್ದಾರೆ. "ಎಲ್ಲಿ ಅತ್ಯಂತ ಹೀನ ಜನರು ಹೋಗುತ್ತಾರೆಯೋ ಮತ್ತು ಎಲ್ಲಿ ಎಲ್ಲ ಪ್ರಕಾರದ ದುರ್ವ್ಯವಹಾರ ನಡೆಯುತ್ತದೆಯೊ ಅಂಥಲ್ಲಿ ಸ್ತ್ರೀಯರು ಏನು ಮಾಡಿಯಾರು

ಎಂಬ ಸಂಶಯ ಬೇಡ. ಅಲ್ಲಿ ಸ್ತ್ರೀಯರೆ ಕೆಲಸ ಮಾಡಬಲ್ಲರು. ಅತ್ಯಂತ ಪತಿತರ ಉದ್ಧಾರಕ್ಕೆ ನಮ್ಮಲ್ಲಿರುವ ಅತ್ಯಂತ ಉಚ್ಚ ಮಟ್ಟದ ಸ್ತ್ರೀಯರನ್ನೇ ಕಳುಹಿಸಬೇಕು. ಅವರು ಮಾಡಿದ ಕೆಲಸವನ್ನು ಇಡೀ ಭಾರತವೇ ನೋಡಿತು" ಎಂದು ಗಾಂಧೀ-ವಿನೋಬಾರ ಆಶಯವಾಗಿದ್ದಿತು. ಇಂಥ ಕ್ರಮದ ಕಡೆಗೆ ನಮ್ಮ ದೇಶದ ಮಹಿಳಾ ಸಂಘಟನೆಗಳು ಗಮನಹರಿಸಿವೆಯೆ? ಇಂದು ಸ್ತ್ರೀಯರೇ ಪುರುಷರ ಮಾನವನ್ನು ಕಾಯಬೇಕಾದ ಪರಿಸ್ಥಿತಿ ಬಂದಿದೆ ಇಂಥ ಆಹ್ವಾನವನ್ನು ಇಂದಿನ ಮಹಿಳೆ ಸ್ವೀಕರಿಸಲು ಮಾನಸಿಕವಾಗಿ ಸಿದ್ಧವಾಗಿದ್ದಾಳೆಯೆ? ಸಾವಿರಾರು ತಂದೆಯರಿಗಿಂತ ಒಬ್ಬ ತಾಯಿ ಶ್ರೇಷ್ಠವಾಗಿದ್ದಾಳೆ ಎಂಬ ಮಾತು ಯಾರಿಗೆ ತಾನೆ ತಿಳಿದಿಲ್ಲ?

ಆದ್ದರಿಂದ ಇಂದಿನ ಸಮಾಜ ಮತ್ತು ಇಂದಿನ ಮಹಿಳೆ ತಮ್ಮ-ತಮ್ಮ ಹೊಣೆಗಾರಿಕೆಯನ್ನು ಸರಿಯಾಗಿ ನಿರ್ವಹಿಸುವ ಕಾಲ ಬಂದಿದೆ. ಅದು ಮಿಂಚಿ ಹೋಗುವ ಮುನ್ನ ಎಚ್ಚೆತ್ತುಕೊಳ್ಳಬೇಕು.

* * *

ನನ್ನ ಭಾರತ, ನನ್ನ ಕನಸು

– ಮಹಾಶ್ವೇತಾದೇವಿ

(ಫ್ರಾಂಕ್‌ಫರ್ಟಿನ ಪುಸ್ತಕ-ಜಾತ್ರೆ ೨೦೦೬ರಲ್ಲಿ ಭಾರತದ ಸಾಂಸ್ಕೃತಿಕ ಪ್ರತಿನಿಧಿಯಾಗಿ ಒಂದು ವಿಶೇಷ ಉಪನ್ಯಾಸವನ್ನು ನೀಡಲು ಭಾರತ ಸಾಹಿತ್ಯದ ಅಧ್ವರ್ಯು ಶ್ರೀಮತಿ ಮಹಾಶ್ವೇತಾದೇವಿಯವರನ್ನು ಆಹ್ವಾನಿಸಲಾಗಿತ್ತು. ನೆರೆದಿದ್ದ ಅಂತಾರಾಷ್ಟ್ರೀಯ ಸಭಿಕರ ಎದಿರು ಮ್ಯಾಗ್‌ಸೆಸೆ ಮತ್ತು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತೆ ಶ್ರೀಮತಿ ಮಹಾಶ್ವೇತಾದೇವಿಯವರು 'ಕನಸು ಪ್ರತಿಯೊಬ್ಬನ ಹಕ್ಕು' ಎಂಬ ವಿಷಯವಾಗಿ ಒಂದು ರೋಚಕವಾದ ಉಪನ್ಯಾಸವನ್ನು ನೀಡಿದರು. ಗಣ್ಯ ಅತಿಥಿಗಳಿಗೆ ಗೌರವಸಮರ್ಪಣೆ ಕಾರ್ಯಕ್ರಮದಲ್ಲಿ ಅವರು ರಾಷ್ಟ್ರೀಯ ಪುಸ್ತಕ ಪ್ರಾಧಿಕಾರದಿಂದ ವಿಶೇಷ ಲೇಖಕಿಯಾಗಿ ಭಾಗಿಯಾಗಿದ್ದರು. ಅವರ ಉಪನ್ಯಾಸದ ಆಯ್ದ ಭಾಗಗಳನ್ನು ಇಲ್ಲಿ ನೀಡಲಾಗಿದೆ.)

ಎಂಭತ್ತರ ವಯಸ್ಸನ್ನು ದಾಟಿರುವ ನಾನು ಆಗಾಗ ನೆರಳಿಗೆ ಸರಿಯುತ್ತೇನೆ. ಕೆಲವೊಮ್ಮೆ ಧೈರ್ಯವಹಿಸಿ ಬಿಸಿಲಿಗೂ ಬರುತ್ತೇನೆ. ತಾಯಿಯಾಗಿ ಚಿಕ್ಕವಳಿದ್ದಾಗ ಕೆಲವೊಮ್ಮೆ ನಾನು ಅಜ್ಜಿಯಾಗುತ್ತಿದ್ದೆ!. ನನ್ನ ಮಗನನ್ನು ನಗಿಸಲು!. ಕಣ್ಣುಕಾಣಿಸದಂತೆ, ಕಿವಿಕೇಳದಂತೆ ನಟಿಸುತ್ತಿದ್ದೆ. ಕೈಗಳನ್ನು ಕಣ್ಣುಕಟ್ಟು ಆಟದ ಕುರುಡನಂತೆ ಗಾಳಿಯಲ್ಲಿ ಆಡಿಸುತ್ತಿದ್ದೆ ಅಥವಾ ಅಣಕು ಮರೆವಿನ ಆಟ ಆಡುತ್ತಿದ್ದೆ. ಬೇಕಾದ ಎಲ್ಲ ವಿಷಯಗಳನ್ನೂ ಮರೆತುಬಿಡುವುದು. ಈಗಷ್ಟೆ ನಡೆದ ಸಂಗತಿಗಳೂ ನೆನಪಾಗುತ್ತಿಲ್ಲವೆಬಂತೆ! ಈ ಪರಿಯ ಆಟಗಳೆಲ್ಲಾ ತಮಾಷೆಗಾಗಿ. ಈಗ ಅದೆಲ್ಲಾ ತಮಾಷೆಯಾಗಿ ಉಳಿದಿಲ್ಲ. ಮುಂದೆ ಸಾಗಿದಂತೆ, ಜೀವನ ತಾನೇ ಮರುಕಳಿಸುತ್ತಿದೆ. ನಾನೇ ನನ್ನನ್ನು ಮರುಕಳಿಸುತ್ತಿದ್ದೇನೆ. ಏನು, ಏನಾಗಿದೆ, ಏನಾಗಬಹುದಿತ್ತು ಎಲ್ಲವನ್ನೂ ನೆನಪಿಗೆ ತಂದುಕೊಳ್ಳುತ್ತಿದ್ದೇನೆ, ನಿಮಗಾಗಿ.

ನೋಡಿ! ಆ ಮರವನ್ನು, ಆ ಕಾಡು, ಬೆಳೆದು ನಿಂತ ಹೊಲಗಳು, ಬಿಸಿಲಿನಲ್ಲಿ ಹೊಳೆಯತ್ತಾ ಹರಿಯುತ್ತಿರುವ ಝುರಿ, ಚಿಮ್ಮುತ್ತಾ ಕಾಡಿನೆಡೆಗೆ ಓಡುತ್ತಿರುವ ಜಿಂಕೆಗಳು, ಮಕ್ಕಳೊಂದಿಗೆ ಕೊಡಗಳಲ್ಲಿ ನೀರು ಮೊಗೆಯುತ್ತಿರುವ ತಾಯಂದಿರು. ಹಿಂದೆ ದೂರದಲ್ಲಿ ಅವರ ಮನೆಗಳು, ಭೂಮಿಯನ್ನು ಸ್ಪರ್ಶಿಸಲು ಯತ್ನಿಸುತ್ತಿರುವ ಸೂರ್ಯ, ಬೆಳೆಗಳಿಗೆ ನೀರುಣಿಸುತ್ತಿರುವ ರೈತರು. ಎಂಥಾ ಹರಡಿಕೊಂಡಿರುವ ಕಾಡು, ಎಷ್ಟು ಹಸಿರು ಗುಡ್ಡಗಳು.

ಕನಸು ಕಾಣುವುದು ಎಂದರೇನು? ಎಂದು ತಿಳಿಯುವವರೆಗೆ ಏನೂ ಆಗುವುದಿಲ್ಲ. ವ್ಯವಸ್ಥೆ ಇರುವುದೇ ಧ್ವಂಸಮಾಡಲು. ಅದು ಕನಸು ಕಾಣುವ

ಒಂದೊಂದು ಮೆದುಳಿನ ನರಕೋಶವನ್ನೂ ದೂರದಿಂದಲೇ ಹೊಸಕಿಹಾಕಿಬಿಡುತ್ತದೆ. ಆದರೂ ಕೆಲವು ಕನಸುಗಳು ಹೇಗೋ ತಪ್ಪಿಸಿಕೊಂಡುಬಿಡುತ್ತವೆ. ಹಾಗೆ ಬಂಧನದಿಂದ ತಪ್ಪಿಸಿಕೊಂಡ ಕನಸುಗಳೇ ನನ್ನ ಸ್ವತ್ತು. ಕನಸು ಕಾಣುವ ಸ್ವಾತಂತ್ರ್ಯ ಮಾತ್ರವೇ ಮನುಕುಲವನ್ನು ಉಳಿಸಬಲ್ಲದು. ಲೋಕದಲ್ಲಿ ನಡೆಯುತ್ತಿರುವಂತೆ ನೀವು ಕೂಡ ಕನಸು ಕಾಣುವ ಸ್ವಾತಂತ್ರ್ಯವನ್ನು ಹತ್ತಿಕ್ಕಿದರೆ, ಸಮಾಜದ ವಿನಾಶಕ್ಕೆ ಕಾರಣರಾಗುತ್ತೀರಿ. ಹೌದು! 'ಕನಸುವ' ಹಕ್ಕು!. ಮೂಲಭೂತಹಕ್ಕುಗಳಲ್ಲಿ ಇದೇ ಮೊದಲಾಗಬೇಕು.

ಮಧ್ಯಮವರ್ಗದ ಮನೋಭಾವ ನನಗೆ ಹಿಡಿಸುವುದಿಲ್ಲ. ಬರೀ ಕೃತಕ. ಎಲ್ಲವನ್ನೂ ಅದುಮಿಡಲಾಗಿದೆ.

ನನ್ನ ಹಿನ್ನೆಲೆಯನ್ನು ಗಮನಿಸಿದರೆ ನಾನು ಈಗ ಇರುವ ರೀತಿಯೇ ಒಂದು ಅನಿರೀಕ್ಷತ ವಿದ್ಯಮಾನ. ಮಕ್ಕಳಲ್ಲಿ ನಾನೇ ಹಿರಿಯಳು. ನಿಮಗೆ ಅನಿಸಿದೆಯೋ ಇಲ್ಲವೋ ಗೊತ್ತಿಲ್ಲ, ಆದರೆ ಪ್ರತಿ ಹೆಣ್ಣಿನ ಮೊದಲ ಲೈಂಗಿಕಾನುಭೂತಿ ಅವಳ ಮನೆಯಲ್ಲೇ ವ್ಯಕ್ತವಾಗುತ್ತದೆ. ಚಿಕ್ಕವಯಸ್ಸಿನಿಂದಲೇ ನನ್ನ ಶಾರೀರಿಕ ಆಕರ್ಷಣೆ ಪ್ರಬಲವಾಗಿತ್ತು. ಹಾಗೆಂದು ನಾನು ಹೇಳಲ್ಪಟ್ಟಿದ್ದೆ ಮತ್ತು ಅದು ಹಾಗೆಂದು ನನಗೂ ತಿಳಿದಿತ್ತು, ಅನ್ನಿಸಿತ್ತೂ ಕೂಡ. ಆಗೆಲ್ಲಾ ನಾವು ಠಾಗೂರ್‌ರವರಿಂದ ಬಹಳ ಪ್ರಭಾವಿತರಾಗಿದ್ದೆವು. ನಾನು ಶಾಂತಿನಿಕೇತನದಲ್ಲಿದ್ದೆ ಪ್ರೀತಿಯಲ್ಲಿ ಮುಳುಗಿದ್ದೆ. ನಾನು ಮಾಡುವುದರಲ್ಲೆಲ್ಲಾ ಉಲ್ಲಾಸವಿರುತ್ತಿತ್ತು. ಆ ರೀತಿಯ ಅನೇಕ ಸಂಗತಿಗಳಿವೆ. ೧೩ರ ರಿಂದ ೧೮ನೇ ವಯಸ್ಸಿನಲಿ ನನ್ನ ದೂರದ ದಾಯಾದಿ ಹುಡುಗನೊಬ್ಬನೊಂದಿಗೆ ನಾನು ಉತ್ಕಟ ಪ್ರೇಮಪಾಶದಲ್ಲಿದ್ದೆ. ಅವನ ಕುಟುಂಬದಲ್ಲಿ ಬಂದಿದ್ದ ಆತ್ಮಹತ್ಯಾ ಪ್ರವೃತ್ತಿಗೆ ಅವನೂ ಒಳಗಾದ. ಪ್ರೇಮಿಸಿ ನನ್ನನ್ನು ಪಡೆಯಾಲಾರದೆ ಅವನು ಸತ್ತನೆಂದು ಎಲ್ಲರೂ ನನ್ನನ್ನು ತೆಗಳಿದರು. ಅದು ನಿಜವಲ್ಲ. ಆಗ ನಾನು ಕಮ್ಯೂನಿಸ್ಟ್ ಪಾರ್ಟಿಯ ಒಡನಾಟದಲ್ಲಿದ್ದೆ. ಅವನು ಹಾಗೆ ಚಿಕ್ಕವಯಸ್ಸಿನಲ್ಲೇ ಸತ್ತದ್ದು ದೊಡ್ಡ ನಷ್ಟ ಎನಿಸಿತು. ನಾನು ಕುಗ್ಗಿಹೋಗಿದ್ದೆ. ಇಡೀ ಕುಟುಂಬವೇ ನನ್ನನ್ನು ಜರೆಯಿತು. ೧೬ವರ್ಷ ವಯಸ್ಸಾದ ಹಾಗೆ ನನ್ನ ಪಾಲಕರು ಅದರಲ್ಲೂ ಸಂಬಂಧಿಗಳು ಹತಾಷೆಯಿಂದ 'ಈ ಹುಡುಗಿಗೆ ಏನು ಮಾಡುವುದು, ಹುಡುಗಿ ಬಹಳ ಚೆಲ್ಲು, ಅವಳಿಗೆ ಅವಳ ಆಕರ್ಶಕ ಶರೀರದ ಬಗ್ಗೆ ಗೊತ್ತಿಲ್ಲ' ಎನ್ನುತ್ತಿದ್ದರು. ಹಾಗೆಲ್ಲಾ ಇರುವುದು ಅಸಭ್ಯತೆಯಾಗಿತ್ತು.

ಹೀಗಿದ್ದಾಗ ಬರವಣಿಗೆಯ ಲೋಕ ನನ್ನದಾಯಿತು. ಅಲ್ಲೇ ಉಳಿದೆ, ಬದುಕಿದೆ. ಹಿಂದೆ, ಮುಂದೆ ಚಲಿಸುತ್ತಾ.

ನಾನಕರ ಒಂದು ಕಥೆಯಿದೆ. ಅವರ ತಂದೆ ಅವನನ್ನು ಅಂಗಡಿಯಲ್ಲಿ

ವ್ಯಾಪಾರಮಾಡಲು ಕೂರಿಸಿದ್ದರು. ನಾನಕ ಕೊಟ್ಟ.. ಕೊಟ್ಟ.. ಎಣಿಸುತ್ತಾ.. ದಸ್(ಹತ್ತು), ಗ್ಯಾರಾ(ಹನ್ನೊಂದು), ಬಾರಾ(ಹನ್ನೆರಡು), ತೇರಾ(ಹದಿಮೂರು ಅಥವಾ ನಿನ್ನದು), ತೇರಾ.. ತೇರಾ... ಹೌದು! ನಾನಕ ಎಲ್ಲವನ್ನೂ ಕೊಟ್ಟುಬಿಟ್ಟಿದ್ದ. ಎಲ್ಲವೂ ನಿನ್ನದೇ. ನನ್ನೊಂದಿಗೂ ಹಾಗೆ, ಎಲ್ಲವೂ ತೇರಾ.. ತೇರಾ... ಯಾವುದೂ ಗಾಢವಾಗಿ ತಟ್ಟುವುದಿಲ್ಲ. ಭೌತಿಕ ವಸ್ತುಗಳು ನನ್ನನ್ನು ಸೆಳೆಯಲಾರವು. ನಾನು ಹೊರಗಿನವಳಾಗಿಯೇ ಇರುತ್ತೇನೆ. ಯಾವಾಗಲೂ ಒಳಗಿನವಳಾಗಿ ಬಳಿಯಲ್ಲೇ ಇರಲಾರೆ. ಸಹಜ ಮಾನವೀಯ ಕಕ್ಕುಲತೆ, ಸ್ವಚ್ಛ ಸಹಾನುಭೂತಿ, ಕೆಲ ಗೆಳೆತನ, ಹಲ ಅಪರೂಪ ಸಂಗತಿಗಳು ನನ್ನನ್ನು ಸೋಕುತ್ತವೆ, ಆಗಲೂ ನಾನು ಹೊರಗೆ ಒಳಗೆ ಎರಡೂ ಬದಿಯಲ್ಲಿರುತ್ತೇನೆ. ಬಾಲ್ಯದ ಕೆಲವು ನೆನಪುಗಳು, ಚಿಕ್ಕವಳಿದ್ದಾಗ ಢಾಕಾದ ದೊಡ್ಡಮನೆಯ ಕಿಟಕಿಯ ಬಳಿ ಒಬ್ಬಳೇ ಕುಳಿತಾಗ, ಜೋರಾಗಿ ಮಳೆ ಸುರಿಯುತ್ತಿದೆ, ಟಪ ಟಪ ಹನಿ ಎಲೆಗಳ ಮೇಲೆ, ಎಂಥ ಚಂದ! ನನಗೆ ಎಷ್ಟು ಇಷ್ಟ! ನನಗೆ ಹೂಗಳನ್ನು ಕೊಯ್ಯುವುದು ಕಂಡರಾಗದು. ಹೂಗಳನ್ನು ಗಿಡದಲ್ಲಿ ಅವಷ್ಟಕ್ಕೆ ಬಿಡಬೇಕು. ಪ್ರಕೃತಿ ನನಗೆ ಯಾವಾಗಲೂ ಪ್ರಿಯ.

ಏಕೋಏನೋ ಬಹಳ ಚಿಕ್ಕವಳಿದ್ದಾಗಿನಿಂದ ನಾನು ಏನುಮಾಡಿದರೂ ಅದು ನಿರಾಕರಣ ಯೋಗ್ಯವಾಗಿತ್ತು, ಮಾಡಬಾರದಂಥದಾಗಿತ್ತು. ನಾನು ಹೊರಗೆ ಹೋಗಿ ಮಳೆಯಲ್ಲಿ ನೆನೆಯುತ್ತಿದ್ದೆ, ಕುಣಿಯುತ್ತಿದ್ದೆ, ಹುಡುಗರೊಂದಿಗೆ ಆಡುತ್ತಿದ್ದೆ. ಹದಿಮೂರನೆ ವಯಸ್ಸಿನಿಂದಲೇ 'ಅದು ಮಾಡಬೇಡ, ಇದು ಮಾಡಬೇಡ, ನೀನು ದೊಡ್ಡವಳಾಗಿದ್ದೀಯ' ಎಂಬ ಮಾತುಗಳು ಕೇಳತೊಡಗಿದವು. ಸಹಜವಾದ ಋತುಚಕ್ರದ ಅವಧಿಯಲ್ಲೂ 'ಅದನ್ನು ಮುಟ್ಟಬಾರದು, ಇದನ್ನು ಮುಟ್ಟಬಾರದು' ಎಂದು ಹೇಳುತ್ತಿದ್ದರು. ಅದಕ್ಕೂ 'ಬಾರದು' ಎಂಬುದಕ್ಕೂ ಏನು ಸಂಬಂಧ? ಅಷ್ಟೊತ್ತಿಗಾಗಲೆ ನಾನು 'ಗುಡ್ ಅರ್ಥ್' ಪುಸ್ತವನ್ನು ಓದಿದ್ದೆ. ಅದರಲ್ಲಿ ಅವಳಿಗೆ ಮಗುವಾಗುತ್ತದೆ. ಅವಳು ಮಗುವನ್ನೆತ್ತಿಕೊಂಡು ಸೀದಾ ಮನೆಗೆ ಬರುತ್ತಾಳೆ, ಅಡುಗೆ ಮುಂತಾಗಿ ಎಲ್ಲವನ್ನೂ ಮಾಡುತ್ತಾಳೆ. ಇದೆಲ್ಲಾ ಪ್ರಕೃತಿ ಸಹಜವಾದ ಪ್ರಕ್ರಿಯೆ. ಅದಕ್ಕಾಗಿ ಯಾರಾದರೂ ಏಕೆ ತಡೆಯಲ್ಪಡಬೇಕು? ಏತಕ್ಕಾಗಿ ಇಷ್ಟೆಲ್ಲ ರಂಪ? ಎಂದಿಗೂ ಸಹಜತೆಯೇ ನನಗೆ ಸಮ್ಮತವಾಯಿತು.

ಚಿಕ್ಕವಳಿದ್ದಾಗಿನಿಂದ ವಯಸ್ಸಾದವರ ಮಾತುಕತೆಗಳನ್ನು ಬಹಳ ಆಸಕ್ತಿಯಿಂದ ಕೇಳುತ್ತಿದ್ದೆ. ಅವರ ದುಃಖಭರಿತ ಜೀವನ... ನಾನು ಎಂದಿಗೂ ಮರೆಯಲಾರೆ. ಒಮ್ಮೆ ಒಬ್ಬ ಹೆಂಗಸಿನ ಕಥೆ ಬರೆದೆ. ಅವಳನ್ನು ಒಬ್ಬ ಶಪಿಸಲ್ಪಟ್ಟ ವಿಧವೆಯಾಗಿ ನೋಡಲಾಗುತ್ತಿತ್ತು. ಅವಳಂಥ ಎಲ್ಲ ವಿಧವೆಯರಂತೆ ಅವಳ ಪಾಡೂ ಆಗಿತ್ತು. ರೂಪವತಿಯಾಗಿದ್ದು ಚಿಕ್ಕ ವಯಸ್ಸಿನಲ್ಲೇ ವಿಧವೆಯಾದ ಅವಳು ಕಾಮುಕರ ದೃಷ್ಟಿಯಿಂದ ತಪ್ಪಿಸಿಕೊಳ್ಳುವುದು ಅಸಾಧ್ಯವಾಗಿತ್ತು. ಕೆಟ್ಟ ಹೆಸರು

ಮಾತ್ರ ಅವಳದಾಗಿತ್ತು. ನಾನು ಅಂತಹ ಪೀಡನೆಗೊಳಗಾದ ಹೆಂಗಸನ್ನು ನೋಡಿದ್ದೆ. ಅವಳು ಒಂಟಿಯಾಗಿ, ಊರಾಚೆ ಒಂದು ಸಣ್ಣ ಜೋಪಡಿಯಲ್ಲಿ ಇರುತ್ತಿದ್ದಳು. ಅವಳು ಬಹಿಷ್ಕೃತೆಯಾಗಿ ತನ್ನಷ್ಟಕ್ಕೆ ತಾನು ಇದ್ದರೂ ಜನ ಅವಳನ್ನು ಹಾಗಿರಲು ಬಿಡುತ್ತಿರಲಿಲ್ಲ. ಅವಳನ್ನು ಪಂಚಾಯತಿಯಲ್ಲಿ "ಏನು? ನಾವು ನಿನ್ನನ್ನು ಒಂಟಿಯಾಗಿ ಕಾಡಿಗೆ ಅಟ್ಟುಬಿಡೋಣವೆ" ಎಂದು ಕೇಳಲಾಯಿತು. ಆಗ ಅವಳು ಜಮೀನ್ದಾರನಿಗೆ "ನೀವು ನನ್ನನ್ನು ಸುಡುಗಾಡಿಗೆ ಅಟ್ಟಿದರೂ ನನ್ನ ಬಾಗಿಲು ಬಡಿಯುವವರು ಇದ್ದೇಇರುತ್ತಾರೆ. ನಾನು ಬಾಗಿಲು ತೆರೆಯಲೇಬೇಕಾದೀತು. ಅವರೆಲ್ಲ ಯಾರೆಂದು ನಿಮಗೂ ಗೊತ್ತು" ಎಂದಳು. ಅವರಲ್ಲಿ ಜಮೀನ್ದಾರನೂ ಒಬ್ಬನಾಗಿದ್ದ. ಯಾರೊಬ್ಬರೂ ಅವಳಿಗೆ ಸ್ವಲ್ಪ ಆಹಾರ ಬೇಕೇನೋ, ಅನ್ನ ಬೇಕೇನೋ ಎಂದು ಯಾರಿಗೂ ಅನ್ನಿಸುತ್ತಿರಲಿಲ್ಲ. ಉದಾರ ಮನಸ್ಸಿನ ನನ್ನ ಅಜ್ಜಿ ಆ ಹೆಂಗಸನ್ನು ಕರೆದು ಅಕ್ಕಿ, ತರಕಾರಿ ಮುಂತಾದ ಪದಾರ್ಥಗಳನ್ನು ಕೊಟ್ಟು ಅವಳನ್ನು ಆಗಾಗ ಬಂದು ಹೋಗುವಂತೆ ಹೇಳುತ್ತಿದ್ದಳು. ಆಗ ನನ್ನ ತಾಯಿಗೆ ಇನ್ನು ಮದುವೆಯಾಗಿರಲಿಲ್ಲ. ನನ್ನ ಅಜ್ಜಿ ತನ್ನ ಹೆಣ್ಣುಮಕ್ಕಳನ್ನು ಕೂಗಿ ಕೈಲಾಗದ ಆ ಹೆಂಗಸಿನೊಂದಿಗೆ ಹೋಗಿ ಪದಾರ್ಥಗಳನ್ನು ಅವಳ ಮನೆಗೆ ಸಾಗಿಸಲು ಸಹಾಯ ಮಾಡಲು ಹೇಳುತ್ತಿದ್ದಳು. ನನ್ನ ಅಜ್ಜಿಯ ಹಿರಿಯ ಭಾವನಿಗೆ ಇದು ಸರಿಕಾಣುತ್ತಿರಲಿಲ್ಲ. ಅವರು ನನ್ನ ಅಜ್ಜಿಯನ್ನು ಆಕ್ಷೇಪಿಸುತ್ತಿದ್ದರು. ಆಗೆಲ್ಲಾ ನನ್ನ ಅಜ್ಜಿ ಆ ಹೆಂಗಸಿನ ಪರವಾಗಿ 'ಮತ್ತೇನು ಮಾಡಬೇಕು? ಅವಳೇನು ಊರು ಬಿಟ್ಟು ಹೋಗಲು ಸಾಧ್ಯವೇ? ಎಲ್ಲಿಗೆತಾನೆ ಹೋದಾಳು? ಅವಳ ಹೊಟ್ಟೆಗೇನೂ ಬೇಡವೆ? ಏನೂ ತೊಂದರೆಯಿಲ್ಲ, ಗಂಡಸರು ಅವಳ ಮನೆಗೆ ಹೋಗುತ್ತಲೇ ಇರುತ್ತಾರೆ. ಈ ದಿನ ಕೆಲ ಹೆಂಗಸರು ಹೋಗುತ್ತಿದ್ದಾರೆ ಅಷ್ಟೆ' ಎನ್ನುತ್ತಿದ್ದಳು. ಪಾಪ ಆ ನಿರ್ಗತಿಕ ವಿಧವೆಯ ಪಾಡು ಹೇಳತೀರದು.

ಬರವಣಿಗೆಯ ಏರ್ಪಾಡು ಬಹಳ ಕುತೂಹಲವಾಗಿರುತ್ತದೆ. ಶಿಶುಪ್ರಾಸಗಳು, ನುಡಿಗಟ್ಟುಗಳು, ಅನೇಕ ಕಥೆಗಳು ಹೀಗೆ ಏನೇನೋ ಒಡಗೂಡಿ ರೂಪಗೊಂಡಿರುತ್ತದೆ. ಅವೆಲ್ಲವೂ ನನ್ನಲ್ಲಿ ಒಂದು ಭಾಗವಾಗಿಬಿಟ್ಟಿವೆ. ವಿವಿಧ ಬುಡಕಟ್ಟುಗಳ ಹಾಗೂ ಬೇರೆ ಬೇರೆ ಜನಾಂಗಗಳಿಗೆ ಸೇರಿದ ವಿಶಾಲ ಜನಸಮುದಾಯದ ಒಂದು ಒಳನೋಟ ನನಗೆ ದೊರೆತಿದೆ. ಇದಲ್ಲದೆ ಪತ್ರಿಕೆಗಳಿಗೆ ಆಗಾಗ ಶೋಧನಾ ರೂಪದ ಲೇಖನಗಳನ್ನು ಬರೆದಿದ್ದೇನೆ. ನಾನು ಆಗಾಗ ಹೇಳುವಂತೆ ನನ್ನ ಲೋಕ ಅಗತ್ಯ ಮತ್ತು ಅನಗತ್ಯ ಸಂಗತಿಗಳ ನಡುವೆ ಹಂಚಿಹೋಗಿದೆ. ಅಗತ್ಯವಾದುದರಲ್ಲೇ ನನಗೆ ಹೆಚ್ಚು ಆಸಕ್ತಿ. ಅನಗತ್ಯವಾದುದರಿಂದ ನನಗೆ ಉಪಯೋಗವಿಲ್ಲ. ಒಂದು ಕಾಲದಲ್ಲಿ ನಾನು ಮಾಡುತ್ತಿದ್ದ ಮನೆಸುತ್ತಿನ ಕೆಲಸದ ಬಗ್ಗೆ ಕೇಳಿದರೆ ನಿಮಗೆ ಆಶ್ಚರ್ಯವಾಗುತ್ತದೆ. ರಾಶಿಗಟ್ಟಲೆ ಬಟ್ಟೆ

ಒಗೆಯುವುದು, ಪಾತ್ರೆ ತೊಳೆಯುವುದು, ಮಣಗಟ್ಟಲೆ ಅಡುಗೆ ಎಲ್ಲವನ್ನೂ ಮಾಡಿದ್ದೇನೆ.

ನನ್ನ ಕಥೆಯ ಪಾತ್ರಧಾರಿಗಳು ಬಳಸುವ ಪದಗಳು ಅವರದೇ ಆಗಿರುತ್ತವೆ. ನನ್ನ ಕೃತಿಗಳ ಸಂಪಾದಕರು ಹೇಳುತ್ತಲೇ ಇರುತ್ತಾರೆ 'ನೀವು ಇತರ ಬೆಂಗಾಲಿ ಲೇಖಕರಿಗಿಂತ ವಿಭಿನ್ನವಾದ ಅನೇಕ ಪದಗಳನ್ನು ಬಳಸಿರುತ್ತೀರಿ. ಅದಕ್ಕಾಗಿ ನೀವು ಬಳಸುವ ಪದಗಳ ಒಂದು ಪದಕೋಶವನ್ನು ವಿಶೇಷವಾಗಿ ರಚಿಸಬೇಕಾಗುತ್ತದೋ ಏನೋ!'. ನಾನು ಬರೆದದ್ದು ನಿಮಗೆ ಮಾತ್ರ ತಿಳಿದರೆ ನನ್ನ ಉದ್ದೇಶ ವಿಫಲವಾದಂತೆ. ಅದು ಸಾಮಾನ್ಯ ಓದುಗನಿಗೆ ತಲುಪಬೇಕು. ನಾನು ಬರೆಯುವುದೇ ಅದಕ್ಕೆ. ವ್ಯಾಪಕ ಪ್ರಸಾರಕ್ಕಾಗಿ. ಈಗೀಗ ಬಹಳಷ್ಟು ಮಂದಿಗೆ ಈ ಸಮಸ್ಯೆಯಿದೆ. ಜನರೊದಿಗೆ ಸಂವಹನ ಸಾಧ್ಯವಾಗುತ್ತಿಲ್ಲ.

ಪ್ರತಿದಿನ ಅನ್ಯಾಯ ಮತ್ತು ಶೋಷಣೆಗೊಳಗಾಗುತ್ತಿರುವ ಮುಖ್ಯವಾಹಿನಿಯಿಂದ ಹೊರದಬ್ಬಲ್ಪಟ್ಟ ಹಾಗೂ ಅಲ್ಪಸಂಖ್ಯಾತ ಜನರ ಪರವಾಗಿ ೧೯೮೦ರಿಂದ ನಾನು ದನಿಯೆತ್ತುತ್ತಿದ್ದೇನೆ. ಈ ಸ್ಥಳೀಯ ಅಥವಾ ಬುಡಕಟ್ಟು ಜನರು ಮತ್ತು ಭೂರಹಿತ ಗ್ರಾಮೀಣ ಜನರು ನಗರಗಳಲ್ಲಿ ಕೂಲಿ ಕಾರ್ಮಿಕರಾಗಿ ರಸ್ತೆಬದಿಗಳಲ್ಲಿ ಜೀವನ ಸಾಗಿಸುತ್ತಿದ್ದಾರೆ. ಪತ್ರಿಕಾ ವರದಿಗಳ ಮೂಲಕ, ದೂರುಗಳ ಮೂಲಕ, ನ್ಯಾಯಾಲಯದ ಮೊಕದ್ದಮೆಗಳ ಮೂಲಕ, ಸಂಬಂಧಪಟ್ಟವರಿಗೆ ಪತ್ರಗಳ ಮೂಲಕ, ಸಂಘಟನೆಗಳ ಜೊತೆ ಸಕ್ರಿಯವಾಗಿ ಭಾಗಿಯಾಗುವುದರ ಮೂಲಕ, ನಿರ್ಗತಿಕರಾದ ಜನ ತಾವೇ ನಿರೂಪಿಸುವ ಸತ್ಯಾಂಶಗಳನ್ನೊಳಗೊಂಡ ನಾನೇ ಸಂಪಾದಿಸುವ 'ಬೋರ್ತಿಕಾ' ಎಂಬ ತಳಮಟ್ಟದ ಪತ್ರಿಕೆಗಳಿಂದ ಮತ್ತು ಅಂತಿಮವಾಗಿ ನನ್ನ ಕಥೆಗಳ ಮೂಲಕ ನಾನು ಈ ನಿರ್ಲಕ್ಷಿತ ಭಾರತೀಯ ಜನಸಮುದಾಯದ ಘೋರ ವಾಸ್ತವವನ್ನು ರಾಷ್ಟ್ರದ ಗಮನಕ್ಕೆ ತಂದಿದ್ದೇನೆ. ಅವರ ಮರೆತುಹೋಗಿರುವ ಮತ್ತು ಕಣ್ಣಿಗೆ ಕಾಣದ ಚರಿತ್ರೆ ದೇಶದ ಅಧಿಕೃತ ಚರಿತ್ರೆಯಲ್ಲಿ ದಾಖಲಾಗಬೇಕು. ನಾನು ಪದೇ ಪದೇ ಹೇಳುವಂತೆ ನಮಗೆ ದೊರೆತ ಸ್ವಾತಂತ್ರ್ಯ ನಿಜವಾದ್ದುದಲ್ಲ. ಈ ನಿರ್ಗತಿಕ ಜನರಿಗೆ ಇನ್ನೂ ಸ್ವಾತಂತ್ರ್ಯ ಸಿಕ್ಕಿಲ್ಲ. ಅವರೆಲ್ಲರು ಇನ್ನೂ ತಮ್ಮ ಮೂಲಭೂತ ಹಕ್ಕುಗಳಿಂದ ವಂಚಿತರಾಗೇ ಇದ್ದಾರೆ.

ಇಂತಹ ಸಂದರ್ಭದಲ್ಲಿ ಯಾವೊಬ್ಬನ ಸಂಸ್ಕೃತಿಯನ್ನು ಉಳಿಸುವುದು, ರಕ್ಷಿಸುವುದು ಹೇಗೆ? ಯಾವ ಸಂಸ್ಕೃತಿಯನ್ನು ನಾವು ಉಳಿಸಬೇಕು? ೨೧ನೇ ಶತಮಾನದ ಭಾರತೀಯ ಸಂಸ್ಕೃತಿ ಎಂದರೇನು? ಯಾವ ಸಂಸ್ಕೃತಿ? ಯಾವ ಭಾರತ? ಖಾದಿ ಸೀರೆ ಎಷ್ಟು ಭಾರತೀಯವೋ, ಮಿನಿ ಸ್ಕರ್ಟ್ ಮತ್ತು ತೋಳಿಲ್ಲದ ರವಿಕೆಯೂ ಅಷ್ಟೇ ಭಾರತೀಯವಾಗಿದೆ. ಎತ್ತಿನ ಗಾಡಿ ಭಾರತವಾಗಿದೆ ಹಾಗೆಯೆ

ಅತ್ಯಾಧುನಿಕ ಟೊಯೋಟಾ, ಮರ್ಸಿಡಿಸ್ ಕಾರೂ ಕೂಡ. ಅನಕ್ಷರತೆ ತಾಂಡವವಾಡುತ್ತದೆ ಆದರೆ ಅದೇ ಭಾರತ ವೈದ್ಯಕೀಯ, ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಮುಂಚೂಣಿಯಲ್ಲಿರುವ ಜನರನ್ನೂ ಸೃಷ್ಟಿಸುತ್ತದೆ. ಎಳೆಯ ಮಕ್ಕಳು ಕಲ್ಪನಾತೀತವಾದ ಕಷ್ಟಕರ ಸನ್ನಿವೇಶದಲ್ಲಿ ಬಾಲಕಾರ್ಮಿಕರಾಗಿ ಶೋಷಿಸಲ್ಪಡುತ್ತಾರೆ ಇದು ಒಂದು ಭಾರತ, ಹಾಗೇಯೇ ಅದೇ ವಯಸ್ಸಿನ ಮಕ್ಕಳು ಹವಾನಿಯಂತ್ರಿತ ಶಾಲೆಗಳಲ್ಲಿ ಊಟದ ಸಮಯದಲ್ಲಿ ತಮ್ಮ ಮೊಬೈಲ್ ಫೋನ್‌ಗಳಲ್ಲಿ ಮಾತಾಡುತ್ತಾರೆ ಇದೂ ಭಾರತವೇ! ಸತ್ಯಂ ಶಿವಂ ಸುಂದರಂ - ಇದು ಭಾರತ. ಚೋಲಿಕೆ ಪೀಛೆ ಕ್ಯಾ ಹೈ - ಇದೂ ಭಾರತ. ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳು, ಬೃಹತ್ ವ್ಯಾಪಾರೀ ಸಂಕೀರ್ಣಗಳೂ ಭಾರತ. ರಸ್ತೆ ಬದಿಯ ಹಾವಾಡಿಗ, ಸಾಧು ಮಹರ್ಷಿಗಳೂ ಭಾರತವೇ.

ಭಾರತೀಯ ಸಂಸ್ಕೃತಿ ಹಲವು ವಿಚಾರಗಳ, ಹಲವು ನೂಲಿನಿಂದ ಕೂಡಿದ ನೇಯ್ಗೆ. ಇದೊಂದು ಅನಂತವಾದ ಹಾಸು, ಅಂತೆಯೇ ಅದರ ವಿವಿಧ ವಿನ್ಯಾಸಗಳೂ ಕೂಡ. ಹಲವೆಡೆ ಗಾಢ, ಹಲವೆಡೆ ತಿಳಿ, ಕೆಲವೆಡೆ ಕೇಸರಿ, ಕೆಲವೆಡೆ ಭತ್ತದ ಗದ್ದೆಯ ಹಸಿರು, ಕೆಲವೆಡೆ ರಕ್ತದ ಕೆಂಪು, ಒಮ್ಮೆ ಹಿಮಾಲಯದ ತಣ್ಣನೆಯ ತೊರೆಯಲ್ಲಿ ತೊಳೆದಿಟ್ಟಂತೆ, ಇನ್ನೊಂದೆಡೆ ಕಲ್ಲಂಗಡಿ ಚೂರಿನ ಕೆಂಪು, ಮತ್ತೊಂದೆಡೆ ಬಂಗಾಲದ ಶರತ್ಕಾಲದ ಆಗಸದಂತೆ ನೀಲಿ, ಅಲ್ಲೆಲ್ಲೋ ಕಸ್ತೂರಿಮೃಗದ ಕಣ್ಣಿನ ಕಡು ನೇರಳೆ, ಮತ್ತೆಲ್ಲೋ ನವ ವಧುವಿನ ಹಣೆಬೊಟ್ಟಿನ ಕೆಂಪು, ಇನ್ನೆಲ್ಲೋ ಉರ್ದುವಿನಿಂದ ಬಂದ ಎಳೆಗಳು, ಇನ್ನೊಂದೆಡೆ ಬಂಗಾಳಿ, ಅಸ್ಸಾಮಿ, ಕನ್ನಡ, ಮರಾಠಿ ಹೀಗೆ. ಎಲ್ಲೋ ಕೆಲವೆಡೆ ಬಟ್ಟೆ ಎಳದಾಡಲ್ಪಟ್ಟಿದೆ. ಕೆಲವು ಎಳೆಗಳು ಹರಿದಿವೆ. ಆದರೂ ಅಖಂಡವಾಗಿದೆ. ಎಲ್ಲವೂ ಹಿಡಿದಿಡಲ್ಪಟ್ಟಿದೆ.

ಇಡೀ ವಿನ್ಯಾಸ ಬದಲಾಗುತ್ತಿರುತ್ತದೆ. ಅದು ಹರಿದಾಡುತ್ತದೆ, ಏರಪೇರಾಗುತ್ತದೆ, ಪುನಃ ಒಗ್ಗೂಡುತ್ತದೆ, ಕಲೋಚಿತವಾಗಿ ರೂಪುಗೊಳ್ಳುತ್ತದೆ. ನನಗೆ ಇಡೀ ರಚನೆ ಒಂದು ತರೆನಾದ ಭಾರತವಾಗಿ ಕಾಣಿಸುತ್ತದೆ. ನಿಮಗೆ ಮತ್ತೊಂದು ತೆರನಾದ ಭಾರತವಾಗಿ ಕಾಣಿಸುತ್ತದೆ. ನೆರಳು-ಬೆಳಕಿನ ಆಟದಂತೆ. ಪುರಾತತ್ವ ಮತ್ತು ಆಧುನಿಕತೆ ಮುಖಾಮುಖಿಯಾಗುತ್ತವೆ; ಮೂಢನಂಬಿಕೆ ಹಾಗೂ ದಂತಕಥೆಗಳು; ರವೀಂದ್ರ ಸಂಗೀತ ಹಾಗೂ ರ್‍ಯಾಪ್ ಸಂಗೀತ; ಸೂಫಿ, ಶಿಯಾ ಮತ್ತು ಸುನ್ನಿ; ಜಾತಿ ವ್ಯವಸ್ಥೆ ಮತ್ತು ಕಂಪ್ಯೂಟರ್‌ಗಳು; ಚಿತ್ರರಂಗ ಹಾಗೂ ರಂಗಭೂಮಿ; ಗಾಯನ ಮತ್ತು ನೃತ್ಯ; ಪಠ್ಯ ಮತ್ತು ಕಥಾಹಂದರ; ನಗೆ ಮತ್ತು ಕಣ್ಣೀರು; ಸರ್ಕಾರಿ ಮತ್ತು ಸರ್ಕಾರವಿರೋಧಿ; ಮೀಸಲಾತಿ ಮತ್ತು ಹಿಸ್ಸೆ; ಹೋರಾಟ ಮತ್ತು ಬಂಧನ; ಹಂಬರ್ಗರ್ ಮತ್ತು ಹರಿ ಓಂ ಹರಿ; ಸಂಸ್ಕೃತ ಮತ್ತು ಎಸ್.ಎಂ.ಎಸ್; ಮಳೆಯ ವಾಸನೆ ಮತ್ತು ಸಾಗರದ ಅಬ್ಬರ; ಸಿಂಧೂ ಕಣಿವೆಯಿಂದ

ಬ್ಲೂಟೂತ್ ಮೊಬೈಲ್‌ವರೆಗೆ ಭಾರತ ಎಲ್ಲವನ್ನೂ ಕಂಡಿದೆ. ಎಲ್ಲವನ್ನೂ ತನ್ನಲ್ಲಿ ಹಾಗೂ ತನ್ನ ಸಂಸ್ಕೃತಿಯಲ್ಲಿ ಅಡಗಿಸಿಕೊಂಡಿದೆ. ಭಾರತದಲ್ಲಿ ಎಲ್ಲ ಆಚರಣೆಗಳಿಗೆ, ಎಲ್ಲ ಭಾಷೆಗಳಿಗೆ ಮತ್ತು ಎಲ್ಲ ಜನರಿಗೆ ಆಸರೆ ಇದೆ. ಮತಾಂಧತೆಯ ಬಿಕ್ಕಟ್ಟಿನ ನಡುವೆಯೂ; ಮೂಲಭೂತವಾದದ ನಡುವೆಯೂ; ಹಿಂದುಳಿದಿರುವ ಗ್ರಾಮಜೀವನದ ನಡುವೆಯೂ; ನೆರವೇರದ ಅಭಿವೃದ್ಧಿ ಯೋಜನೆಗಳ ನಡುವೆಯೂ; ಏಡ್ಸ್, ತ್ಸುನಾಮಿ, ಭೂಕಂಪ, ಬರ, ಪ್ರವಾಹಗಳ ಭಯದ ನಡುವೆಯೂ; ರೈತಾಪಿ ಜನರ ಆತ್ಮಹತ್ಯೆ, ಪೋಲೀಸರ ದೌರ್ಜನ್ಯ, ಉದ್ದಿಮೆಗಳಿಂದ ಪರಿಸರದ ಹಾನಿ, ಬಹುರಾಷ್ಟ್ರೀಯ ಕಂಪನಿಗಳಿಂದ ವ್ಯವಸಾಯೀ ಭೂಮಿಯ ಕಬಳಿಕೆ; ಹೀಗೆ ಇತಿಹಾಸ ಮತ್ತು ಸಂದರ್ಭಗಳಿಂದ ಜರ್ಝರಿತವಾಗಿದ್ದರೂ ಭಾರತ ಇನ್ನೂ ಇದೆ. ಅದರ ಸಂಸ್ಕೃತಿಯೂ ಇದೆ. ಹಾಗಾಗಿಯೇ ನಾವು, ನಾವೆಲ್ಲಾ ಇದ್ದೇವೆ. ಭಾರತ ಬದುಕುವುದನ್ನು ಕಲಿತಿದೆ. ಹೊಂದಿಕೊಳ್ಳುವುದನ್ನೂ, ಹಳೆಯದರೊಂದಿಗೆ ಹೊಸದನ್ನೂ, ಹೊಸ ಸಹಸ್ರಮಾನದ ಉದಯಕಾಲದಲ್ಲಿ ಜೊತೆ ಜೊತೆಯಾಗಿ ಕೈಹಿಡಿದು ಸಣ್ಣಗೆ ಸಿಳ್ಳೆಹಾಕುತ್ತಾ ನಡೆಯುವುದನ್ನೂ ಕಲಿತಿದೆ. ಇದು ನಿಜವಾಗಿಯೂ ಜಪಾನಿ ಜೋಡು, ಇಂಗ್ಲಿಷ್ ಶರಾಯಿ, ರಷ್ಯಾದ ಕೆಂಪನೆಯ ಟೋಪಿಯನ್ನು ಧರಿಸುವ ಕಾಲ; ಆದರೆ ಹೃದಯ, ಮನಸ್ಸು ಮಾತ್ರ ಭಾರತೀಯವಾಗಿರುವ, ಎಂದೆಂದೂ ಭಾರತೀಯವಾಗೇ ಉಳಿಯಲಿದೆ.

ನಾವು ಭವಿಷ್ಯದೆಡೆಗೆ ಸಾಗುತ್ತಿರುವಂತೆಯೇ, ಇಲ್ಲಿ ನೆರೆದಿರುವ ಪ್ರಸಿದ್ಧರಮುಂದೆ ನನ್ನ ದೇಶದ ಸಂಸ್ಕೃತಿಯ ಬಗ್ಗೆ ಮಾತನಾಡಲು ನನ್ನನ್ನು ಆಹ್ವಾನಿಸಿರುವ ಈ ಗೌರವಾನ್ವಿತ ಸಂದರ್ಭದಲ್ಲಿ, ನಾನು ನನ್ನ ದೇಶ ತಲುಪಬೇಕಾದ ನೆಲೆಯ ಬಗ್ಗೆ ನನ್ನ ಕನಸನ್ನು ಹಂಚಿಕೊಳ್ಳಲು ಬಯಸುತ್ತೇನೆ. ನಾನು ಈಗಾಗಲೆ 'ಕನಸುವ' ಹಕ್ಕಿನ ಬಗ್ಗೆ ಹೇಳಿದ್ದೇನೆ ಮತ್ತು ಈಗ ಅದನ್ನು ಚಲಾಯಿಸಲು ಬಯಸುತ್ತೇನೆ.

ನನ್ನ ಕಲ್ಪನೆಯ ಭಾರತಕ್ಕೆ 'ಹಿಂದುಳಿದ' ಎಂಬ ಹಣೆಪಟ್ಟಿಯಿರುವುದಿಲ್ಲ ಅಥವಾ ಹಚ್ಚಲೂ ಸಾಧ್ಯವಿಲ್ಲ. ನಾನು ಮೂರನೇ ವಿಶ್ವ ಎಂಬುದು ಮೊದಲನೇ ವಿಶ್ವ, ಏಕೈಕ ವಿಶ್ವ ಎಂದಾಗಬೇಕು ಎಂದು ಆಶಿಸುತ್ತೇನೆ. ಮಕ್ಕಳೆಲ್ಲಾ ವಿದ್ಯಾವಂತರಾಗಬೇಕು ಎಂದು ಆಶಿಸುತ್ತೇನೆ. ಮಹಿಳೆಯರು ಹೊರ ಪ್ರಪಂಚಕ್ಕೆ ಬರಬೇಕೆಂದು ಆಶಿಸುತ್ತೇನೆ. ಸಾಮಾನ್ಯನಿಗೂ ನ್ಯಾಯದೊರೆಯಬೇಕೆಂದು ಆಶಿಸುತ್ತೇನೆ. ರೈತರು ಬಾಳಬೇಕೆಂದು ಬಯಸುತ್ತೇನೆ. ಬಡವರಿಗೆ ತಲೆಯ ಮೇಲೊಂದು ಸೂರು, ಎಲ್ಲರಿಗೂ ಜೀವನದ ಭರವಸೆ ಇರಬೇಕೆಂದು ಬಯಸುತ್ತೇನೆ. ಸಾಲ ಮತ್ತು ಬಡತನ ತೊಲಗಬೇಕೆಂದು ಇಚ್ಛಿಸುತ್ತೇನೆ. 'ಹಸಿವೆ' ಎಂಬುದು ಒಂದು ಅನಿಷ್ಟ ಪದವಾಗಿ ಯಾರಬಾಯಲ್ಲೂ ಸುಳಿಯಬಾರದೆಂದು ಆಶಿಸುತ್ತೇನೆ.

ಪರಿಸರವನ್ನು ಪ್ರೀತಿಸಿ, ರಕ್ಷಿಸಿ, ಉಳಿಸುವಂತಾಗಲಿ. ಭೂಮಿ ಪುನಃ ಜೀವಂತವಾಗಲಿ, ತಿಳಿನೀರು ಹರಿಯಲಿ, ಹುಲಿಗಳು ನೆಲಸಲಿ. ಸ್ವಾವಲಂಬನೆ, ಆತ್ಮಗೌರವ ಮೂಡಲಿ. ಮೂಢನಂಬಿಕೆಗಳಿಂದ ಮುಕ್ತಿ ದೊರೆಯಲಿ. ಎಲ್ಲರಿಗೂ ಯೋಗ್ಯವಾದ ವೈದ್ಯಕೀಯ ಸೌಕರ್ಯ ಸಿಕ್ಕಲಿ. ಪ್ರತಿಯೊಬ್ಬನಿಗೂ ಒಳ್ಳೆಯ ನೀರು, ಗಾಳಿ, ಬೆಳಕು ಮತ್ತು ಆಶ್ರಯ ದೊರೆಯಲಿ. ದೇಶದ ಪ್ರತಿಯೊಂದು ಭಾಷೆಯಲ್ಲೂ ಹೆಚ್ಚು ಹೆಚ್ಚು ಪುಸ್ತಕಗಳು ಬರಲಿ. ಮಾತುಗಳು ಮೂಡಲಿ. ಕಥೆಗಳು ಕಟ್ಟಲಿ. ಜನ ಓದಲಿ. ಓದಲು ಕಲಿಯಲಿ. ತಮ್ಮ ಹೆಸರುಗಳನ್ನು ಓದುವವರೆಗೂ ಅಕ್ಷರಗಳನ್ನು ತಿದ್ದಲಿ. ತಮ್ಮ ವಿಳಾಸಗಳನ್ನು ಬರೆಯಲಿ. ತಾವೇ ಸ್ವತಃ ಬರೆಯುವುದನ್ನು ಕಲಿಯಲಿ. 'ನನಗೆ ಗೊತ್ತು, ನಾನು ಸಾಧಿಸಬಲ್ಲೆ, ನಾನು ಸಾಧಿಸಿಯೇ ತೀರುವೆನು' ಹೌದು ಜ್ಞಾನದ ಬೆಳಕಿನಿಂದ ಅಜ್ಞಾನದ ಅಂಧಕಾರವನ್ನು ಓಡಿಸೋಣ. ದ್ವೇಷವನ್ನು ತಿಳಿವಿನಿಂದ ಅಳಿಸೋಣ. ಲೇಖನಿ ಎಂಬ ಕತ್ತಿಯಿಂದ ಕೆಡಕನ್ನು ಕೊಲ್ಲೋಣ.

ಸಂಸ್ಕೃತಿ ನಮ್ಮನ್ನು ನಮ್ಮ ಮೂಲದೊಂದಿಗೆ, ನಮ್ಮ ಇತಿಹಾಸದೊಂದಿಗೆ, ನಮ್ಮ ರೂಢಿಗಳೊಂದಿಗೆ, ನಮ್ಮ ಪರಂಪರೆಯೊಂದಿಗೆ ಹತ್ತಿರದ ಸಂಬಂಧವಿಟ್ಟುಕೊಂಡೇ ನಮ್ಮನ್ನು ಭವಿಷ್ಯದೆಡೆಗೆ ಒಯ್ಯುತ್ತದೆ. ಸಂಸ್ಕೃತಿ ನಮ್ಮನ್ನು ಒಂದೇ ನೆಗೆತಕ್ಕೆ ಚಂದ್ರನ ಮೇಲೆ ನಿಲ್ಲಿಸಬಲ್ಲದು ಆದರೆ ಅದಕ್ಕಿಂತ ಮೊದಲು ಅದು ನಮಗೆ ನಮ್ಮನ್ನು ನಾವೇ ಅರ್ಥಮಾಡಿಕೊಳ್ಳಲು ನೆರವಾಗಬೇಕು. ಒಬ್ಬರೊನ್ನೊಬ್ಬರು ಸರಿಯಾಗಿ ಅರಿತುಕೊಳ್ಳಲು ಉಪಯೋಗವಾಗಬೇಕು. ಸಂಸ್ಕೃತಿ ಮತ್ತೊಮ್ಮೆ ನಮಗೆ ಸಹಬಾಳ್ವೆ ಮತ್ತು ನೈಜ ಜಾತ್ಯಾತೀತೆಯನ್ನು ಕಲಿಸಬೇಕು.

ನಾನು ನನ್ನ ಮಟ್ಟಿಗೆ ಈ ಸಂಸ್ಕೃತಿಯ ಚಿತ್ರಣವನ್ನು ಕೊಡಲು ಪ್ರಯತ್ನಿಸಿದ್ದೇನೆ. ವಿಭಿನ್ನತೆಯಿಂದ ಕೂಡಿದ ಭಾರತದ ಪೂರ್ವ-ಪಶ್ಚಿಮ, ಉತ್ತರ-ದಕ್ಷಿಣದುದ್ದಕ್ಕೂ ಸಮ್ಮತವಾಗುವ ಸಂಸ್ಕೃತಿಯ ವ್ಯಾಖ್ಯೆಯನ್ನು ನಾನು ಹೇಗೆ ನೀಡಲಿ. ಎಲ್ಲವೂ ಎಷ್ಟು ನಿರಾತಂಕ, ಎಷ್ಟು ಸಹನಶೀಲ, ಎಷ್ಟು ಕಠಿಣ, ಎಷ್ಟು ವೈಭವಯುತ, ಎಷ್ಟು ದಾರುಣ, ಎಷ್ಟು ಸಹೃದಯಿ, ಅಷ್ಟೇ ಅನರ್ಥಕಾರಿ. ಕೊನೆಗೂ ಅದೆಷ್ಟೋ ಭಾರತಗಳಿವೆ. ನಾನು ಪದೇ ಪದೇ ಹೇಳುವಂತೆ ಎಲ್ಲವೂ ಸಮಾನಾಂತರ ಹಾಗು ಏಕಕಾಲಿಕ.

ನಮ್ಮಷ್ಟೇ ಪುರಾತನವಾದ ಯಾವುದೇ ಸಂಸ್ಕೃತಿ ಇನ್ನೂ ಉಳಿದು ಬಂದಿರಬೇಕಾದಲ್ಲಿ ಅದರಲ್ಲಿ ಎಲ್ಲರಿಗೂ ಸಮ್ಮತವಾದ ಮೂಲಭೂತ ವಿಚಾರವೊಂದಿರಲೇಬೇಕು. ಅದು ಮಾನವೀಯತೆ. ಘನತೆವೆತ್ತ ಮಾನವನಾಗಿ ಬಾಳುವ ಮತ್ತೊಬ್ಬನ ಹಕ್ಕನ್ನು ಗೌರವಿಸುವುದು. ನನ್ನ ಜೀವನ ಮತ್ತು ಬರವಣಿಗೆಯಲ್ಲಿ ಅದಕ್ಕಾಗಿ ನನ್ನ ಹೋರಾಟ ಮತ್ತು ಅದೇ ನನ್ನ ಕನಸು.

ಅನು-ಸುಘೋಷ್ ಕೌಲಗಿ

***

ಜನಪದ ವ್ಯಕ್ತಿ

ಕಲಾತಪಸ್ವಿ ಕೆ. ವೆಂಕಟಪ್ಪ

– ಪಿ.ಆರ್.ತಿಪ್ಪೇಸ್ವಾಮಿ

ಪ್ರಸಿದ್ಧ ಕಲಾವಿದರಾಗಿದ್ದ ಕೆ.ವೆಂಕಟಪ್ಪನವರನ್ನು ಗೌರವಿಸುವ, ಅವರ ಕಲಾಕೃತಿಗಳನ್ನು ವೀಕ್ಷಿಸುವ ಸದವಕಾಶ ೧೯೬೭ರಲ್ಲೊಮ್ಮೆ ನಮ್ಮ ಜನರಿಗೆ ಒದಗಿತ್ತು. ಅವರಿದ್ದಲ್ಲೇ ಸನ್ಮಾನ ಸಮಾರಂಭವೊಂದನ್ನು ಕೇಂದ್ರ ಲಲಿತಕಲಾ ಅಕೆಡಮಿ ಏರ್ಪಡಿಸಿತ್ತು. ಇದರ ಅಂಗವಾಗಿ, ಇತರ ವೇಳೆಯಲ್ಲಿ ವೀಕ್ಷಿಸಲು ದುರ್ಲಭವಾದ, ಅವರ ಅಪೂರ್ವ ಚಿತ್ರಕಲಾಕೃತಿಗಳನ್ನೂ ಶಿಲ್ಪ ಕೃತಿಗಳನ್ನೂ ಪ್ರದರ್ಶಿಸಿ, ಕಲಾಭಿಮಾನಿಗಳಿಗೆ ಒಂದು ರಸದೌತಣವನ್ನು ಒದಗಿಸಲಾಗಿತ್ತು. ಬೆಂಗಳೂರಿನ ಮಲ್ಲೇಶ್ವರಂ ೧೮ನೇ ಅಡ್ಡರಸ್ತೆಯಲ್ಲಿ ಅವರ ಮನೆಯಲ್ಲೆ ಆಕರ್ಷಕ ಪ್ರದರ್ಶನವೂ ಸರಳ ಸಮಾರಂಭವೂ ಏರ್ಪಟ್ಟಿದ್ದವು.

ವೆಂಕಟಪ್ಪನವರು ತಮ್ಮ ಬದುಕಿನಲ್ಲಿ ಯಾವ ರೀತಿಯ ಅಚ್ಚುಕಟ್ಟನ್ನು ಕಾಪಾಡಿಕೊಂಡಿ ಬಂದಿದ್ದರು ಎಂಬುದಕ್ಕೆ ಅಲ್ಲಿಯ ವಾತಾವರಣವೇ ಸಾಕ್ಷಿಯಾಗಿತ್ತು. ಅಲ್ಲಿ ಅವರ ಅಪೂರ್ವ ಕಲಾಕೃತಿಗಳನ್ನು ಪ್ರದರ್ಶಿಸಲಾಗಿತ್ತು. ಜಲವರ್ಣದ ಇಪ್ಪತ್ತೆರಡು ಪ್ರಕೃತಿ ಚಿತ್ರಗಳನ್ನೂ ನಾಲ್ಕು ವೀಣೆಗಳನ್ನೂ ಆಳೆತ್ತರದ ನಾಲ್ಕು ಪ್ಲಾಸ್ಟರ್ ಉಬ್ಬುಚಿತ್ರಗಳನ್ನೂ (ರಿಲೀಫ್) ಕ್ರಮವಾಗಿ ಜೋಡಿಸಲಾಗಿತ್ತು. ಇವುಗಳ ಜೊತೆಗೆ ವೆಂಕಟಪ್ಪನವರಿಗೆ ಆಪ್ತರಾಗಿದ್ದ ಕಲ್ಕತ್ತ ಕಲಾ ಶಾಲೆಯ ಪ್ರಿನ್ಸಿಪಾಲ್ ಹಾರ್ವೇ ಮತ್ತು ಪರ್ಸಿ ಬ್ರೌನರವೇ ಅಲ್ಲದೆ ಮತ್ತೆ ಕೆಲವರ ಉಬ್ಬುಚಿತ್ರಗಳ ಛಾಯಾಚಿತ್ರಗಳನ್ನೂ ಅಲ್ಲಿ ಇರಿಸಲಾಗಿತ್ತು. ಇವೇ ಅಲ್ಲದೆ ದಂತದ ಫಲಕದ ಮೇಲೆ ಜಲವರ್ಣದಲ್ಲಿ ಬಿಡಿಸಿದ ಕೃಷ್ಣರಾಜ ಒಡೆಯರ ಮತ್ತು ಕಲಾಗುರು ಅಬನೀಂದ್ರನಾಥ ಠಾಕೂರರ ರೂಪ ಚಿತ್ರವನ್ನೂ ಅಲ್ಲಿ ವೀಕ್ಷಿಸಬಹುದಾಗಿತ್ತು.

ಕೆ.ವೆಂಕಟಪ್ಪನವರು ಅನೇಕ ಕ್ಷೇತ್ರಗಳಲ್ಲಿ ಕೈ ಆಡಿಸಿದ್ದರು. ಪ್ರತಿಯೊಂದರಲ್ಲೂ ಅಮೋಘ ಕೃತಿಗಳನ್ನು ರಚಿಸಿದ್ದರು. ವರ್ಣಚಿತ್ರ, ಶಿಲ್ಪ, ಪ್ಲಾಸ್ಟರ್ ಉಬ್ಬು ಚಿತ್ರ ಕೆಲಸ, ತಾಮ್ರದ ತಗಡಿನ ಮೇಲೆ ಉಬ್ಬುಚಿತ್ರ ಕೆಲಸ, ವೀಣೆಗಳ ರಚನೆ, ವೀಣಾವಾದನ–ಇವುಗಳಲ್ಲೆಲ್ಲ ಅವರು ಸಿದ್ಧಹಸ್ತರಾಗಿದ್ದರು. ಇವುಗಳಲ್ಲಿ ಯಾವ ಒಂದರಲ್ಲೇ ಆದರೂ ಅವರಷ್ಟು ಪ್ರಾವೀಣ್ಯ ಪಡೆದವರು ದೊಡ್ಡ ಕಲಾವಿದ ಎಂದು ಮೆರೆಯಬಹುದಿತ್ತು. ಆದರೆ ವೆಂಕಟಪ್ಪನವರು ಎಲೆಮರೆಯ ಹೂವಿನಂತಿದ್ದರು.

ಜಲವರ್ಣ ಚಿತ್ರರಚನೆಯಲ್ಲಿ ಇವರಷ್ಟು ಸಿದ್ಧಿ ಪಡೆದವರು ವಿರಳ. ಈ

ಮಾಧ್ಯಮ ಕಷ್ಟಸಾಧ್ಯವಾದ ಕಲೆಗಾರಿಕೆ. ಒಮ್ಮೆ ವರ್ಣಗಳನ್ನು ಬಳಸಿದರೆ ಮತ್ತೆ ಮೇಲಿಂದ ಮೇಲೆ ತೈಲವರ್ಣಗಳಂತೆ ಬಳಸುವಂತಿಲ್ಲ. ಪ್ರಕೃತಿ ಚಿತ್ರರಚನಾ ಪ್ರಕಾರದಲ್ಲಿ ವೆಂಕಟಪ್ಪನವರು ತಮ್ಮ ಪ್ರಾವೀಣ್ಯವನ್ನು ಮೆರೆದಿದ್ದಾರೆ. ವರ್ಣ ಸ್ವಚ್ಛತೆ ಅವರ ಪ್ರತಿಯೊಂದು ಕೃತಿಯಲ್ಲೂ ಎದ್ದು ತೋರುವ ವಿಶೇಷ ಗುಣ. ನೀಲಗಿರಿ, ಕೊಡೈಕೆನಾಲ್ ಮತ್ತು ಚಾಮುಂಡಿ ಬೆಟ್ಟಗಳ ನಿಸರ್ಗ ದೃಶ್ಯಗಳನ್ನು ಆಯಾ ಋತುಗಳಿಗೆ ತಕ್ಕಂತೆ ರಚಿಸಿದ್ದಾರೆ. ಪ್ರತಿಯೊಂದು ಕೃತಿಯಲ್ಲೂ ಅವರು ಅತಿ ಸೂಕ್ಷ್ಮ ರೇಖಾವಿನ್ಯಾಸ ಮತ್ತು ವರ್ಣವೈಖರಿಗಳನ್ನು ಕಾಪಾಡಿಕೊಂಡು ಬಂದಿದ್ದಾರೆ. ಬಿಳಿ ವರ್ಣವನ್ನು ಬಳಸದೆಯೇ ಕೃತಿ ರಚಿಸುವ ಚಮತ್ಕಾರ ಇವರದು. ರಾತ್ರಿಯ, ಸಂಜೆಯ ಸೂಬಗಿನ, ಬೆಳದಿಂಗಳ, ಪ್ರಕೃತಿಯ ಪ್ರತಿರೂಪಗಳನ್ನು ಸೃಜಿಸಿದ್ದಾರೆ. ಈ ಕೃತಿಗಳಲ್ಲಿಯ ಜಲ, ಮೋಡ, ಬಂಡೆ, ಗಿಡ, ಮರ, ಬಳ್ಳಿ, ಹೂ, ಮಳೆ, ಮಂಜು, ನೆಳಲು, ಬಿಸಿಲು, ಬೆಳದಿಂಗಳು, ಸಂಜೆ, ಮುಂಜಾವು ಮುಂತಾದವನ್ನು ಬಹು ಸ್ವಾಭಾವಿಕ ವರ್ಣಗಳಲ್ಲಿ ನಿರೂಪಿಸಿದ್ದಾರೆ. ಇಲ್ಲಿಯ ಕುಂಚವೈಭವಕ್ಕೆ ಕಲಾವಿದರ ಬಹುದಿನದ ಅಪಾರ ಅನುಭವ ಸಾಧನಗಳೇ ಕಾರಣ ಎನ್ನಬೇಕು. ಪ್ರತಿಯೊಂದು ಚಿತ್ರವೂ ಅವರ ತಪಸ್ಸಿನ ಪ್ರಸಾದವಾಗಿ ಕಲಾಭಿಮಾನಿಗಳನ್ನು ಚಕಿತಗೊಳಿಸುತ್ತದೆ.

ಕೆ.ವೆಂಕಟಪ್ಪನವರು ಜಲವರ್ಣ ಪ್ರಕೃತಿ ಚಿತ್ರಗಳ ಜೊತೆಗೆ ದಂತದ ಫಲಕದ ಮೇಲೆ ಜಲವರ್ಣದಲ್ಲಿ ರೂಪಚಿತ್ರ ಹಾಗೂ ಕಾವ್ಯ ಕಥಾಚಿತ್ರಗಳನ್ನೂ ರಚಿಸಿದ್ದಾರೆ. ನಾಲ್ವಡಿ ಕೃಷ್ಣರಾಜ ಒಡೆಯರ ಇಂಥ ಎರಡು ದಂತಫಲಕ ಕೃತಿಗಳಲ್ಲಿಯ ಕಲೆಗಾರಿಕೆ, ಕುಂಚಕೌಶಲ ಕೌತುಕಪಡುವಂತಿದೆ. ಸೂಕ್ಷ್ಮದರ್ಶಿಯಿಂದ ನೋಡಿದರೂ ಅಲ್ಲಿಯ ವರ್ಣಗಳ, ರೇಖೆಗಳ ಜೀವಾಳ ವ್ಯಕ್ತವಾಗದಿರದು. ಈ ಕೃತಿಗಳ ಕಣ್ಣುಗಳಲ್ಲಿ ಜೀವ ತುಂಬಲು ಇವರು ಬಳಸಿರುವ ಸೂಕ್ಷ್ಮ ವರ್ಣಗಳು ಆಶ್ಚರ್ಯಪಡುವಂಥವು. ದಂತದ ಫಲಕದ ಮೇಲೆ ನೀರು–ಬಣ್ಣಗಳನ್ನು ನಿಲ್ಲಿಸುವುದೇ ಸಾಹಸದ, ಶ್ರಮದ, ಜಾಣ್ಮೆಯ ಕೆಲಸ.

ಪ್ಲಾಸ್ಟರಿನ ಉಬ್ಬುಚಿತ್ರ ಕೆಲಸದಲ್ಲಿ ಇವರು ಚಿತ್ರಕಲೆಯಷ್ಟೇ ಅದ್ವಿತೀಯವಾದ ಪ್ರೌಢಿಮೆಯನ್ನು ತೋರಿರುವುದು ದೊಡ್ಡ ಸಾಧನೆ ಎನ್ನಬೇಕು. ಇದು ವರ್ಣರಹಿತ ಕಲೆ. ಆದರೂ ವರ್ಣಗಳ ಪ್ರಭಾವವನ್ನೇ ತರಬೇಕು. ಅವುಗಳ ರಚನೆಯಲ್ಲಿ ಉಬ್ಬುತಗ್ಗುಗಳ ಕೌಶಲ ಬಹು ಮುಖ್ಯವಾದುದು. ಅದು ಎಷ್ಟು ಸೂಕ್ಷ್ಮವಾಗಿರುತ್ತದೋ ಎಷ್ಟು ತೆಳುವಾಗಿರುತ್ತದೋ ಅಷ್ಟರಮಟ್ಟಿಗೆ ಶಿಲ್ಪಿಯ ಕಲಾತಜ್ಞತೆ ವ್ಯಕ್ತವಾಗುತ್ತದೆ ; ಕಲಾರಚನೆ ಅಷ್ಟರಮಟ್ಟಿಗೆ ಕಷ್ಟವಾಗುತ್ತದೆ. ಉಡುಪು ಹಾಗೂ ಚರ್ಮಗಳ ವ್ಯತ್ಯಾಸವನ್ನು ತೋರಿಸಬೇಕಾಗುತ್ತದೆ. ವೆಂಕಟಪ್ಪನವರ ನಾಲ್ಕು ದೊಡ್ಡ ಉಬ್ಬುಚಿತ್ರ ಕೃತಿಗಳು ಪ್ರೇಕ್ಷಕರ ದೃಷ್ಟಿಯನ್ನು ಸೆಳೆಯುತ್ತವೆ. ಅಂದಿನ ಪ್ರದರ್ಶನದಲ್ಲಿ ಅರಣ್ಯದ ನಡುವೆ ಗುಹೆಯೊಂದರಲ್ಲಿ ತನ್ನ ಗುರು ದ್ರೋಣಾಚಾರ್ಯರ ಪ್ರತಿಮೆಯನ್ನು ಇಟ್ಟುಕೊಂಡು ಧನುರ್ವಿದ್ಯಾಭ್ಯಾಸದಲ್ಲಿ ತೊಡಗಿರುವ ಏಕಲವ್ಯನ ಶ್ರದ್ಧಾಸಕ್ತಿಗಳು

ಅನುಪಮವಾಗಿ ವ್ಯಕ್ತವಾಗುವಂತಿರುವ ಕೃತಿ ಒಂದೆಡೆ ಇದ್ದರೆ, ಅದರ ಪಕ್ಕದಲ್ಲೇ ಇದ್ದ, ಅದೇ ಮಹಾಭಾರತದಿಂದ ಆರಿಸಿಕೊಂಡ ದೃಶ್ಯದಲ್ಲಿ ಕೌರವಪಾಂಡವರಿಗೆ ದ್ರೋಣಾಚಾರ್ಯರು ಬಿಲ್ಲುವಿದ್ಯೆಯ ಶಿಕ್ಷಣ ಕೊಡುತ್ತಿರುವ ಅಸದೃಶವಾದ ರಮ್ಯಚಿತ್ರವಿತ್ತು. ಅವುಗಳ ಪಕ್ಕದಲ್ಲೇ ಶಿವತಾಂಡವದ ಅಪೂರ್ವ ಕೃತಿ ಆಕರ್ಷಕವಾದ ಭಂಗಿಯಲ್ಲಿ ಹೃದಯವನ್ನು ಸೆಳೆಯುತ್ತಿತ್ತು. ಇವೆಲ್ಲಕ್ಕಿಂತಲೂ ಮಿಗಿಲೆನಿಸಿದ 'ಶಕುಂತಲೆಯ ಬೀಳ್ಕೊಡುಗೆ' ದೃಶ್ಯ ಅಸಾಧಾರಣವಾದುದು. ತನ್ನ ಪತಿಯ ರಾಜಗೃಹಕ್ಕೆ ತೆರಳುತ್ತಿರುವ ಶಕುಂತಲೆಯ ಮುಖದಲ್ಲಿ ಮೂರು ಭಾವಗಳನ್ನು ಕಲಾವಿದರು ತಂದಿದ್ದಾರೆ. ತನ್ನ ಪತಿಯನ್ನು ಸೇರುವ ಸಂತೋಷ ಒಂದು ಕಡೆಯಾದರೆ, ತನ್ನ ಆಪ್ತೇಷ್ಟರನ್ನು ಬಿಟ್ಟು ತೆರಳುವ ವೇದನೆ ಮತ್ತೊಂದು ಕಡೆ. ಹೊಸ ಜನ ಹೊಸ ಸ್ಥಳಗಳ ಅನುಭವವನ್ನು ಪಡೆಯುವ ಕುತೂಹಲಜನಕ ಸಂಕೋಚ ಒಂದು ಕಡೆ. ಹೀಗೆಯೇ ಸಿದ್ಧಾರ್ಥನ ನಿರ್ಗಮನದ ದೃಶ್ಯದಲ್ಲಿಯೂ ಶಾಂತಭಾವ ಅಪೂರ್ವವಾಗಿ ವ್ಯಕ್ತಪಟ್ಟಿದೆ. ಪ್ರತಿಮೆಗಳ ಪೈಕಿ 'ರವೀಂದ್ರ'ರ ಕೃತಿ ವಿಶಿಷ್ಟವಾದುದು. ೧೯೨೨ರಲ್ಲಿ ರವೀಂದ್ರರು ಮೈಸೂರಿಗೆ ಬಂದಿದ್ದರು. ಅವರ ಐದು-ಆರು ಭಂಗಿಗಳ ಭಾವಚಿತ್ರಗಳ ನೆರವಿನಿಂದ ರಚಿಸಿದ ಕೃತಿ ಇದು. ಮಹಾಕವಿಯ ಕೂದಲ ಎಳೆಯನ್ನೂ ಭಾವಪೂರ್ಣ ಮುಖಮುದ್ರೆಯನ್ನೂ ಮೂಡಿಸಿರುವುದರಲ್ಲಿ ಶಿಲ್ಪಿ ತಮ್ಮ ಪ್ರತಿಭೆಯನ್ನು ಬೆಳಗಿಸಿದ್ದಾರೆ.

ವೆಂಕಟಪ್ಪನವರು ತಮ್ಮ ಕಲಾಕೃತಿಗಳಿಗೆ ವಸ್ತುವನ್ನು ಆರಿಸಿಕೊಳ್ಳುವಲ್ಲಿ ಸಾಮಾನ್ಯರ ಬದುಕನ್ನು ನಿರ್ಲಕ್ಷಿಸಿಲ್ಲ. ಅವರ 'ಮಾಣಿ' ಈ ದೃಷ್ಟಿಯಿಂದ ಒಂದು ಅಪರೂಪದ ಕೃತಿ. ಆ ಮುಗ್ಧ ಬಾಲಕನ ಸಹಜ ಭಾವನೆಗಳನ್ನು ಶಿಲ್ಪಿಗಳು ಅತ್ಯಂತ ಸಹಜತೆಯಿಂದ ತಂದಿದ್ದಾರೆ. ಕಿವಿಯ ಸುತ್ತುಮುರಿ, ಬೋಳುತಲೆಯ ನಡುವೆ ಬತ್ತಿಯಂತಿರುವ ಪುಡಿಜುಟ್ಟು – ಹೀಗೆ ವಿಚಿತ್ರವಾಗಿ ತೋರುವ ಈ ಕೃತಿಯನ್ನು ಯಾರೂ ಮರೆಯುವಂತಿಲ್ಲ. ಅಲ್ಲಿಯೇ ನೆಲದ ಮೇಲೆ ಯಾರೋ ಅಜಾಗರೂಕತೆಯಿಂದ ತುಳಿದು ಭಿನ್ನವಾದ 'ಸಿದ್ಧಾರ್ಥ' ಅತ್ಯಂತ ಮೋಹಕವಾದ ತಾಮ್ರದ ಉಬ್ಬುಚಿತ್ರ ಕೃತಿ. ಅದನ್ನು ಅಲ್ಲಿಯೇ ಹಾಗೆಯೇ ಇರಿಸಲಾಗಿತ್ತು.

ನಾವು ಕೆಲವರು ೧೯೬೦ರಲ್ಲಿ ಕೆ.ವಿ.ಯವರನ್ನು (ಕೆ.ವೆಂಕಟಪ್ಪನವರನ್ನು ಹೀಗೆ ಕರೆಯುವ ವಾಡಿಕೆಯಿತ್ತು) ಸಂದರ್ಶಿಸಿದಾಗ ಅವರು ಹಾಸಿಗೆ ಹಿಡಿದಿದ್ದರು. ಅನಾರೋಗ್ಯದಿಂದ ಅವರ ಶಕ್ತಿ ಕುಗ್ಗಿದಂತೆ ಕಂಡರೂ ಅವರ ಮುಖದ ತೇಜಸ್ಸು ಅಚ್ಚಳಿಯದೆ ಇತ್ತು. ಕಣ್ಣುಗಳಲ್ಲಿ ಅದೇ ಹೊಳಪು, ಅದೇ ಸೂಕ್ಷ್ಮ ದೃಷ್ಟಿ. ಸ್ಫುಟವಾಗಿ ಸ್ವಚ್ಛವಾಗಿ ಮಾತನಾಡುತ್ತಿದ್ದರು. ಎಪ್ಪತ್ತೈದರ ಗಡಿಯಲ್ಲಿದ್ದ ಅವರಿಗೆ ತಮ್ಮ ದೀರ್ಘವಯೋಮಾನದ ಬಹುಮುಖ ಕಲಾಸಾಧನೆಯ ತರುವಾಯ ವಿಶ್ರಾಂತಿ ಅಗತ್ಯವಾಯಿತೇನೋ ಎಂದೆನಿಸುತ್ತಿತ್ತು ನಮಗೆ. ಆದರೆ ಅವರು ಕೊನೆಯವರೆಗೂ ಕುಂಚವನ್ನು ಕೆಳಗಿಟ್ಟವರಲ್ಲ. ಅನೇಕ ವರ್ಷ ಅವರ ಸಹಪಾಠಿಯಾಗಿದ್ದ ವೀಣೆಯೂ ಆಗ ಮೌನ ತಾಳಿತ್ತು. ಮತ್ತೊಂದು ಕೊಠಡಿಯಲ್ಲಿ ವರ್ಣತೂಲಿಕೆಗಳೂ ಫಲಕಗಳೂ

ಚಿತ್ರರಚನೆಯ ಚೌಕಟ್ಟುಗಳೂ ನಿರ್ಜೀವವಾಗಿ ಬಿದ್ದಂತೆ ಕಾಣುತ್ತಿದ್ದವು. ಕಲಾಗಾರದಲ್ಲಿ ಆಳೆತ್ತರದ 'ಪ್ಲಾಸ್ಟರ್ ಆಫ್ ಪ್ಯಾರಿಸ್'ನ ನಾಲ್ಕು ದೊಡ್ಡ ದೊಡ್ಡ ಉಬ್ಬುಚಿತ್ರಗಳ ಮೇಲೆ ತೆಳುವಾದ ಬಾದಾಮಿಕಾಗದ ಹೊದಿಸಿದ್ದಿತು. ಮತ್ತೊಂದು ಕೋಣೆಯಲ್ಲಿ ಅವರ ಅಪೂರ್ವ ಶಿಲ್ಪಕೃತಿಗಳನ್ನು – ವೃತ್ತಾಕಾರದ ಸಿದ್ಧಾರ್ಥ, ರವೀಂದ್ರರು, ಮಾಣಿ – ತೆಳುವಾದ ಶುಭ್ರವಸ್ತ್ರದಲ್ಲಿ ಮುಚ್ಚಿದ್ದರು. ಕೆ.ವಿ.ಯವರ ಅಂದಿನ ಸಹಪಾಠಿಗಳೆಂದರೆ ಇವೇ. ವಿಶಾಲವಾದ ಸೌಧದಲ್ಲಿ ತಮ್ಮ ಕಲಾಕೃತಿಗಳ ನಡುವೆ ಏಕಾಂಗಿಯಾಗಿ ಇದ್ದ ಈ ಕಲಾತಪಸ್ವಿ ಜನಜಂಗುಳಿಯನ್ನಾಗಲಿ ಸುಖಭೋಗಗಳನ್ನಾಗಳಿ ಬಯಸಿದವರಲ್ಲ. ಕಲಾರಾಧನೆಯೊಂದನ್ನೇ ತಮ್ಮ ಜೀವನದ ಉಸಿರಾಗಿ, ತಮ್ಮ ಬಾಳಿನ ಸರ್ವಸ್ವವನ್ನಾಗಿ ಉಳಿಸಿಕೊಂಡು ಬಂದಿದ್ದರು.

ಅವರಾಗ ಕಲೆಯ ಬಗ್ಗೆ ಮಾತನಾಡುತ್ತ 'ಕಲೆಯಲ್ಲಿ ನಮ್ಮ ಜನಕ್ಕೆ ಅಭಿರುಚಿ ಕಡಿಮೆ' ಎಂದು ನುಡಿದು ದೃಷ್ಟಿಯನ್ನು ಒಂದು ಕಡೆ ಹೊರಳಿಸಿದರು. ಆ ಮಾತಿನ ಹಿಂದೆ ಅವರ ಬದುಕಿನಲ್ಲಿ ಕಂಡ ಸತ್ಯ ಅಡಗಿದಂತಿತ್ತು. ಈ ಕಲಾವಿದನ ಹಿರಿಮೆಯನ್ನು ಅರಿತೂ ನಮ್ಮ ಜನತೆ, ನಮ್ಮ ಸರ್ಕಾರ ಅವರನ್ನು ಔದಾಸೀನ್ಯದಿಂದ ಕಂಡವು. ನಾಡಿಗೆ ಅವರಿಂದ ಹೆಚ್ಚು ಕಲಾಸೇವೆಯ ಅವಕಾಶವಿಲ್ಲದಂತಾಯಿತು. ಆದರೂ ಕೆ.ವಿ.ಯವರ ಉಳಿದಿರುವ ಅಲ್ಪಸ್ವಲ್ಪ ಕೃತಿಗಳೇ ನಮ್ಮ ನಾಡಿನ ಅಮೂಲ್ಯ ಆಸ್ತಿಗಳಾಗಿವೆ.

ವೆಂಕಟಪ್ಪನವರಿಗೆ ಕಲೆಯಲ್ಲಿ ಆಸಕ್ತಿ ವಂಶಪಾರಂಪರ್ಯವಾಗಿ ಬಂದ ಆಸ್ತಿ. ಅವರ ತಾತ ಪ್ರಸಿದ್ಧ ಚಿತ್ರಕಾರರಾಗಿದ್ದ ಚಿತ್ರದುರ್ಗದ ವೆಂಕಟಪ್ಪ. ಕೆ.ವಿ.ಯವರ ತಂದೆಯ ಹೆಸರು ಕೃಷ್ಣಪ್ಪ. ಕೆ.ವೆಂಕಟಪ್ಪನವರ ವಂಶದವರು ರಾಜರ ಕಾಲದಲ್ಲಿ ದುರ್ಗದಿಂದ ಮೈಸೂರಿಗೆ ಬಂದು ಸೇರಿ ರಾಜಾಶ್ರಯ ಪಡೆದವರು. ವೆಂಕಟಪ್ಪನವರು ಚಾಮರಾಜೇಂದ್ರ ಕಲಾಶಾಲೆಯಲ್ಲಿ ರಾಮಕೃಷ್ಣನ್ ಅವರ ನೇತೃತ್ವದಲ್ಲಿ ಕಲಾಭ್ಯಾಸ ನಡೆಸಿ ತಮ್ಮ ಮುಂದಿನ ಕಲಾಸಾಧನೆಗೆ ಉತ್ತಮ ಬುನಾದಿಯನ್ನು ಹಾಕಿಕೊಂಡರು. ಹೊಸ ಅರಮನೆಯನ್ನು ಕಟ್ಟುವ ಕಾಲದಲ್ಲಿ ನೂರಾರು ಜನ ಕಲಾವಿದರು ಅಲ್ಲಿ ಕೆಲಸಮಾಡಬೇಕಾದ ಸಂದರ್ಭ ಬಂದಾಗ ವೆಂಕಟಪ್ಪನವರಿಗೂ ಅಲ್ಲಿ ಅವಕಾಶ ಸಿಕ್ಕಿತ್ತು. ಆಗಲೇ ನುರಿತ ಕಲಾವಿದರಂತೆ ಕೈಚಳಕ ತೋರುತ್ತಿದ್ದ ಈ ಬಾಲಕನೂ ತಮ್ಮಷ್ಟೇ ಶುಲ್ಕ ಪಡೆಯುತ್ತಿದ್ದುದನ್ನು ಕಂಡ ಕೆಲ ಹಿರಿಯ ಕಲಾವಿದರು ಗೊಣಗಾಡಿ 'ಮೀಸೆಹೊತ್ತ' ತಮಗೂ ಇನ್ನೂ ಮೀಸೆ ಚಿಗುರದ ಈ ಬಾಲಕನಿಗೂ ಸಮಾನ ಪುರಸ್ಕಾರವೇ? ಎಂದು ಅಂದು ಕೊಂಡರಂತೆ. 'ಕೆಲಸ ಮಾಡುವುದು ಮೀಸೆಯಲ್ಲ, ಹಸ್ತ!' ಎಂದು ಕೆ.ವಿ.ಯವರು ಚಾತುರ್ಯದಿಂದ ಉತ್ತರಿಸಿ ಅವರೆನ್ನೆಲ್ಲಾ ನಗಿಸಿದ್ದರಂತೆ.

ಒಮ್ಮೆ ಇವರ 'ಸಿಂಹ ಸಿಂಹಣಿ' ಎಂಬ ಚಿತ್ರವನ್ನು ಅರಮನೆಯ ಅಧಿಕಾರಿಗಳೊಬ್ಬರು ನೋಡಿ ಮಹಾರಾಜರ ದೃಷ್ಟಿಗೆ ತಂದಾಗ ಅವರು ಆ ಚಿತ್ರವನ್ನು ಆ ಹುಡುಗ ಬರೆದ ಕೃತಿಯೆಂದು ನಂಬಲಾಗಲಿಲ್ಲವಂತೆ! ಕೊನೆಗೆ

ಮಹಾರಾಜರೇ ಅವರನ್ನು ಕರೆಸಿ ಒಂದು ಸಣ್ಣ ಪರೀಕ್ಷೆ ನಡೆಸಿ, ಅವರ ಕಲಾಪ್ರತಿಭೆಯನ್ನು ಖಚಿತ ಮಾಡಿಕೊಂಡರು. ಅವರ ಕಲಾಕೌಶಲವನ್ನು ಮೆಚ್ಚಿ ನೂರು ರೂಪಾಯಿಗಳ ಬಹುಮಾನ ನೀಡಿ ಪ್ರೋತ್ಸಾಹಿಸಿದರು. ಹೀಗೆ ರಾಜದೃಷ್ಟಿಗೆ ಬಿದ್ದ ಅವರಿಗೆ ಮುಂದೆ ತಮ್ಮ ಹೆಚ್ಚಿನ ಕಲಾಭ್ಯಾಸಕ್ಕೆ ಅವಕಾಶಗಳು ಒದಗಿಬಂದವು. ನಾಲ್ವಡಿ ಕೃಷ್ಣರಾಜ ಒಡೆಯರು ಇವರ ಜಾಣ್ಮೆಯನ್ನು ತಕ್ಷಣವೇ ಗುರುತಿಸಿ ಹೆಚ್ಚಿನ ಕಲಾಶಿಕ್ಷಣಕ್ಕೆ ಇವರನ್ನು ಕಲ್ಕತ್ತಕ್ಕೆ ಕಳಿಸಲು ಅನುಕೂಲ ಮಾಡಿಕೊಟ್ಟರು. ಇವರಿಗೆ ಇಂಗ್ಲಿಷ್ ಶಿಕ್ಷಣ ಕೊಡಿಸಿದರು. ಈ ಮೊದಲೇ ಪಾಶ್ಚಾತ್ಯ ಕಲಾ ಸಂಪ್ರದಾಯವನ್ನು ಕೈಗೂಡಿಸಿಕೊಂಡು ಮದ್ರಾಸ್ ಚಿತ್ರಕಲಾ ಪರೀಕ್ಷೆಗಳಲ್ಲಿ ಡಿಪ್ಲೊಮಾ ಗಳಿಸಿದ್ದ ವೆಂಕಟಪ್ಪನವರು ಕೃಷ್ಣರಾಜ ಒಡೆಯರ ಪ್ರೋತ್ಸಾಹದಿಂದ ೧೯೦೮ರಲ್ಲಿ ಸರ್ಕಾರದ ವಿದ್ಯಾರ್ಥಿವೇತನ ಪಡೆದು ಕಲ್ಕತ್ತ ಕಲಾಶಾಲೆಯಲ್ಲಿ ಉನ್ನತ ಶಿಕ್ಷಣಕ್ಕೋಸ್ಕರ ಹೋದರು. ಅಲ್ಲಿ ಪರ್ಸಿ ಬ್ರೌನ್ ಹಾಗೂ ಡಾ.ಅವನೀಂದ್ರನಾಥ ಠಾಕೂರ್‌ರವರ ಮಾರ್ಗದರ್ಶನದಲ್ಲಿ ಕೆ.ವಿ.ಯವರ ಕಲಾಭ್ಯಾಸ ಮುಂದುವರಿಯಿತು. ಎರಡು ವರ್ಷಗಳಲ್ಲಿ ಹಿಂದಿರುಗಬೇಕಾಗಿದ್ದ ಅವರು ಆರೇಳು ವರ್ಷಗಳ ಕಾಲ ಅಲ್ಲಿಯೇ ನಿಂತು ಬೌದ್ಧ, ರಜಪೂತ ಮತ್ತು ಮೊಗಲ್ ಸಂಪ್ರದಾಯಗಳನ್ನು ಅಭ್ಯಾಸ ಮಾಡಿಕೊಂಡರು. ದೇಶದ ನಾನಾ ಚಿತ್ರಸಂಗ್ರಹಾಲಯಗಳನ್ನು ಸಂದರ್ಶಿಸಿದರು. ೧೯೧೦ರಲ್ಲಿ ಲಂಡನ್ನಿನಿಂದ ಮಿಸೆಸ್ ಹೆರಿಂಗ್‌ಹ್ಯಾಮ್ ತಮ್ಮ ೮೦ನೆಯ ವಯಸ್ಸಿನಲ್ಲಿ ಅಜಂತ ಗುಹಾಲಯಗಳ ಪ್ರಾಚೀನ ಭಿತ್ತಿಚಿತ್ರಕಲಾಭ್ಯಾಸವನ್ನು ನಡೆಸಲು ಭಾರತಕ್ಕೆ ಬಂದಿದ್ದರು. ಆ ಸಂದರ್ಭದಲ್ಲಿ ಅವರ ಜೊತೆಯಲ್ಲಿ ಅಧ್ಯಯನಕ್ಕೆ ಪರ್ಸಿ ಬ್ರೌನರು ತಮ್ಮ ನೆಚ್ಚಿನ ಶಿಷ್ಯರಲ್ಲಿ ಇಬ್ಬರಾದ ನಂದಲಾಲ್ ಬಸು ಮತ್ತು ವೆಂಕಟಪ್ಪನವರನ್ನು ಕಳಿಸಿದ್ದರು. ಹೆಚ್ಚಿನ ಶಿಲ್ಪಕಲಾ ಪರಿಚಯಕ್ಕಾಗಿ ಇಟಲಿಗೆ ತೆರಳುವ ಅವಕಾಶ ವೆಂಕಟಪ್ಪನವರಿಗೆ ಒಂದನೆಯ ಮಹಾಯುದ್ಧದಿಂದಾಗಿ ತಪ್ಪಿಹೋಯಿತು. ಅನಂತರ ೧೯೧೬ರಲ್ಲಿ ಮೈಸೂರಿಗೆ ಹಿಂದಿರುಗಿದ ಮೇಲೆ ಸಂಗೀತದ ವ್ಯಾಮೋಹ ಹೆಚ್ಚಾಗಿ ಕೃಷ್ಣರಾಜ ಒಡೆಯರ ಅಭಿಮತದಂತೆ ವೈಣಿಕಶಿಖಾಮಣಿ ವೀಣೆ ಶೇಷಣ್ಣನವರಲ್ಲಿ ಏಳು ವರ್ಷಗಳ ಕಾಲ ವೀಣಾಭ್ಯಾಸ ಮಾಡಿದರು. ಇದೇ ಸಂದರ್ಭದಲ್ಲಿ ಅವರ ಶ್ರೇಷ್ಠ ಕೃತಿ ವಿಶ್ವದ ಪ್ರಮುಖ ಸಂಚಿಕೆಗಳಲ್ಲಿ ಪ್ರಕಟವಾಗಿ ಕೆ.ವಿ.ಯವರಿಗೆ ಅಪಾರ ಯಶಸ್ಸು ತಂದುಕೊಟ್ಟಿತು. ಅವನೀಂದ್ರನಾಥರು ಬಿಟ್ಟುಕೊಟ್ಟ ಕಲ್ಕತ್ತ ಕಲಾಶಾಲೆಯ ಮುಖ್ಯ ಪ್ರಾಧ್ಯಾಪಕ ಸ್ಥಾನಕ್ಕೆ ಕರೆ ಬಂದದ್ದು ಇದೇ ಕಾಲದಲ್ಲಿ. ಆದರೆ ವೆಂಕಟಪ್ಪನವರು ಅದಕ್ಕೆ ಮನಗೊಡಲಿಲ್ಲ.

ಮೈಸೂರು ನಗರದಲ್ಲಿ ೧೯೨೩ರಲ್ಲಿ ಕೆ.ವಿ.ಯವರು ನಡೆಸಿದ ಜೀವನ ಅಪೂರ್ವವಾದುದು; ತಪಸ್ಸದೃಶವಾದದ್ದು. ಕೃಷ್ಣರಾಜ ಒಡೆಯರ ಅಪೇಕ್ಷೆಯಂತೆ ಅವರು ಅರಮನೆಯಲ್ಲಿ ಶಿಲ್ಪಕೃತಿಗಳ ರಚನೆಗೆ ತೊಡಗಿದರು. ಅರಸರು ಈ ಕಲಾವಿದರಿಗೆ ನೀಡಿದ ಪ್ರೋತ್ಸಾಹ ಚಿರಸ್ಮರಣೀಯವಾದದ್ದು. ಆಗ ರಚಿಸಿದ ಕೆಲವು ಉಬ್ಬುಚಿತ್ರಗಳು ಈಗಲೂ ಮೈಸೂರು ಅರಮನೆಯ ಗಾಜಿನ ಮಹಡಿಯ ದರ್ಬಾರು

ಭವನದ ಭಿತ್ತಿಯ ಮೇಲಿವೆ. ಇದೇ ಸಂದರ್ಭದಲ್ಲಿ ದೆಹಲಿಯ ವೈಸ್‌ರಾಯ್ ಭವನದ ಶೃಂಗಾರಕ್ಕೆ ಕರೆ ಬಂದರೂ ವೆಂಕಟಪ್ಪನವರು ಅದನ್ನು ಒಪ್ಪಿಕೊಳ್ಳದೆ ಕನ್ನಡ ನಾಡಿನಲ್ಲೇ ನಿಂತದ್ದು ಅವರ ನಾಡ ಪ್ರೇಮವನ್ನು ತೋರಿಸುತ್ತದೆ. ಮಹಾರಾಜರು ಕೆ.ವಿ.ಯವರಲ್ಲಿ ಆತ್ಮೀಯತೆಯಿಂದ ವರ್ತಿಸುತ್ತಿದ್ದರು. ಅವರು ಯಾವ ಕಟ್ಟುಪಾಡೂ ಇಲ್ಲದೆ ಸಾಧಾರಣ ಉಡುಪಿನಲ್ಲೇ ಮಹಾರಾಜರನ್ನು ಸಂದರ್ಶನಮಾಡುವ ಅವಕಾಶವಿತ್ತಿದ್ದರು. ವೆಂಕಟಪ್ಪನವರು ಸ್ವಲ್ಪ ಕಾಲ ಚಾಮುಂಡಿ ಬೆಟ್ಟದ ಮೇಲೆ ಬಾಡಿಗೆ ಮನೆಯಲ್ಲಿದ್ದು ಅನೇಕ ನಿಸರ್ಗ ದೃಶ್ಯಗಳ ಚಿತ್ರಗಳನ್ನು ರಚಿಸಿದರು. ನೀಲಗಿರಿಯಲ್ಲಿ ಕೆಲವು ಕಾಲ ನೆಲಸಿ ಅಲ್ಲಿಯ ನಿಸರ್ಗ ದೃಶ್ಯಗಳನ್ನು – ಬೇರೆ ಬೇರೆ ಋತುಗಳಲ್ಲಿ ಕಾಣುತ್ತಿದ್ದ ಹಾಗೆ – ಚಿತ್ರಿಸಿದರು. ಅವು ಇಂದೂ ಅನೇಕ ಕಲಾವಿದರಿಗೆ ಸ್ಫೂರ್ತಿ ನೀಡುತ್ತಿವೆ. ಮೈಸೂರಿನ ಜಗನ್ಮೋಹನ ಕಲಾಶಾಲೆಯಲ್ಲಿ ಇವರ 'ವೀಣಾ ಹುಚ್ಚು', 'ರಾಧಾ ಹರಿಣಿ', 'ಅರ್ಧನಾರೀಶ್ವರ', 'ಶಿವರಾತ್ರಿ', ಮತ್ತು 'ನೀಲಗಿರಿಯ ಪ್ರಕೃತಿ ಚಿತ್ರಗಳು' ಇಂದಿಗೂ ಕಲಾಭಿಮಾನಿಗಳನ್ನು ಆಕರ್ಷಿಸುತ್ತಿವೆ. ಇವರ ಇನ್ನೂ ಅನೇಕ ಕಲಾಕೃತಿಗಳು ಅಲ್ಲಲ್ಲಿ ಹಿತೈಷಿಗಳ ಮನೆಯಲ್ಲಿ ಹಂಚಿಹೋಗಿವೆ.

ಕೆ.ವಿ.ಯವರು ಹುಟ್ಟುಕಲಾವಿದರು. ಕಲಾವಿದರಿಗೆ ಸಹಜವಾದ ಏಕಾಂತ ಪ್ರಿಯತೆ ಅವರಲ್ಲಿ ಮನೆಮಾಡಿಕೊಂಡಿತ್ತು. ಸಂಜೆಯ ವೇಳೆ ಗಾಳಿಸಂಚಾರ ಹೊರಟಾಗ ನಡುವೆ ಕಲೆಗೆ ಸಂಬಂಧಪಟ್ಟ ಯಾವುದಾದರೂ ಭಾವ ಹೊಳೆದಕೂಡಲೇ ಮೋತಿಖಾನೆ ಮಹಡಿಯಲ್ಲಿದ್ದ ತಮ್ಮ ಚಿತ್ರಾಗಾರಕ್ಕೆ ಧಾವಿಸಿ ಬರುತ್ತಿದ್ದರಂತೆ. ಎಷ್ಟೋ ವೇಳೆ ರಾತ್ರಿ ನಿದ್ರೆಯ ಸಮಯದಲ್ಲಿಯೂ ಎದ್ದು ಕುಳಿತು ಕಲಾರಚನೆಯಲ್ಲಿ ತೊಡಗುತ್ತಿದ್ದರಂತೆ. ಕಲಾರಚನೆಯ ಕಾಲದಲ್ಲಿ ಬೇಕಾದ ಏಕಾಂತಕ್ಕೋಸ್ಕರ ಇವರು ಏನೇನೋ ಉಪಾಯಗಳನ್ನು ಹುಡುಕಬೇಕಾಯಿತು. "The studio is closed for public until further notice. Please do not disturb," ಎಂದು ಮುಂಬಾಗಿಲಿನ ಮೇಲೆ ಬೋರ್ಡು ಹಾಕಿ, ಹೊರಗೆ ಬೀಗ ಹಾಕಿಸಿ, ಹಿಂಬಾಗಿಲಿನಿಂದ ಒಳಗೆ ಸೇರಿ ಕಾರ್ಯಮಗ್ನರಾಗುತ್ತಿದ್ದರು! ಅನಗತ್ಯವಾಗಿ ಒಂದು ಕ್ಷಣವನ್ನೂ ವ್ಯರ್ಥವಾಗಿ ಕಳೆಯುತ್ತಿರಲಿಲ್ಲ. ಅಪ್ಪಟ ಶುದ್ಧಹೃದಯ, ನಿಷ್ಕಪಟ ಸ್ವಭಾವ, ವ್ಯಕ್ತಿತ್ವದಲ್ಲಿ ಸಾಧಿಸಿಕೊಂಡಿದ್ದ ಹಿರಿಮೆ – ಇವು ಕಲೆಯಲ್ಲಿ ಮೂಡಿಬಂದಿದ್ದವು. ಕಲಾಯೋಗಿ, ಕಲಾತಪಸ್ವಿ ಎಂಬೆಲ್ಲ ಮಾತುಗಳ ಸಾರ್ಥಕ್ಯ ಇವರಂಥ ಹಿರಿಯ ಆದರ್ಶಜೀವಿಗಳಿಂದಲೇ ಎನ್ನಬೇಕು. ಹಿರಿಮೆಗೆ ಒಪ್ಪುವಂಥ ನಿಯಮ ಅವರದು. ಕೊನೆಗಳಿಗೆಯ ತನಕ ತಮ್ಮನ್ನು 'ಕಲಾ ವಿದ್ಯಾರ್ಥಿ' ಎಂದೇ ಕರೆದುಕೊಳ್ಳುತ್ತಿದ್ದರು. ಸಾಗರೋಪಮವಾದ ಲಲಿತಕಲೆಯಲ್ಲಿ ನನ್ನ ಜ್ಞಾನವೆಂಬುದು ಒಂದು ಹನಿ – ಎಂದು ಅವರು ಅನೇಕ ಸಾರಿ ಹೇಳುತ್ತಿದ್ದುದುಂಟು. ನಾಲ್ವಡಿ ಕೃಷ್ಣರಾಜ ಒಡೆಯರು ದಿವಂಗತರಾದಮೇಲೆ ಅರಮನೆಯಲ್ಲಿ ಕಲೆಗೆ ಸರಿಯಾದ ಪ್ರೋತ್ಸಾಹವಿಲ್ಲದೆ

ಕೆ.ವಿ.ಯವರು ಬೆಂಗಳೂರಿಗೆ ಹೋಗಿ ನೆಲಸಬೇಕಾಯಿತು.

ಚಿತ್ರ, ಶಿಲ್ಪ ಮತ್ತು ಸಂಗೀತ ಕಲೆಗಳಲ್ಲಿ ತಳೆದಿದ್ದಷ್ಟೇ ಅಭಿರುಚಿಯನ್ನು ನಾಟಕ ಕಲೆಯಲ್ಲಿ ಪಡೆದಿದ್ದ ಕೆ.ವಿ.ಯವರು ವರದಾಚಾರ್ಯರ ಅಪೂರ್ವ ಅಭಿನಯ ಕಲೆಗೆ ಮಾರುಹೋಗಿದ್ದರು. ವರದಾಚಾರ್ಯರಿಗೆ ನೇರವಾಗಿ ಹಣ ಕೈಸೇರಲೆಂದು ಅವರೇ ಮೈಸೂರಿನಲ್ಲಿ ಬೂತಿನಲ್ಲಿ ಕೂತು ಟಿಕೆಟುಗಳನ್ನು ಮಾರಿದ ಪ್ರಸಂಗಗಳೂ ಉಂಟು.

ವೆಂಕಟಪ್ಪನವರ ಅತ್ಮಾಭಿಮಾನ ಬಹು ದೊಡ್ಡದು. ಕಲೆಗೆ, ಕಲಾವಿದರಿಗೆ ಅಪಚಾರವಾದರೆ ಧೈರ್ಯವಾಗಿ ಪ್ರತಿಭಟಿಸುವ ಕೆಚ್ಚಿನ ವ್ಯಕ್ತಿಯಾಗಿದ್ದ ಇವರು ಒಮ್ಮೆ ಕಲ್ಕತ್ತದ ರಾಮಕೃಷ್ಣ ಆಶ್ರಮದ ಕಾರ್ಯಾಲಯದವರು ತಮ್ಮ ಪತ್ರಿಕೆಯಲ್ಲಿ ಇವರ ಕಲಾಕೃತಿಯ ಭಾವಚಿತ್ರವೊಂದನ್ನು ಹಿಂದುಮುಂದಾಗಿ ಮುದ್ರಿಸಿದ್ದುದರಿಂದ ಅಲ್ಲಿಯ ಉಚ್ಚನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿ ಜಯಗಳಿಸಿದರು. ತಮ್ಮ ಪ್ರತಿವಾದಿಗೆ ಕೇವಲ ಒಂದೇ ರೂಪಾಯಿಯ ದಂಡವನ್ನು ವಿಧಿಸಿದ್ದರೂ ಸೋದರ ಕಲಾವಿದರಿಗೆ ಒಂದು ಗೌರವಪ್ರತಿಷ್ಠೆಗಳನ್ನು ತಂದುಕೊಟ್ಟಂತಾಯಿತೆಂದು ಇವರ ಐರೋಪ್ಯ ವಕೀಲರು ಪ್ರಶಂಸೆಯ ಮಾತುಗಳನ್ನಾಡಿದ್ದರು. ತಮ್ಮ ಹಕ್ಕುಬಾಧ್ಯತೆಗಾಗಿ ಯಾರನ್ನಾದರೂ ಪ್ರತಿಭಟಿಸುವ ಧೈರ್ಯ ಅವರಿಗಿತ್ತು.

ವೆಂಕಟಪ್ಪನವರನ್ನು ಅವರ ಕೊನೆಗಾಲದಲ್ಲಿ ಸೋದರಳಿಯ ರಾಮರಾಜು ಸೇವಿಸಿದರು. ವೆಂಕಟಪ್ಪನವರು ದಿವಂಗತರಾದ ಮೇಲೆ ರಾಮರಾಜು ಅವರು ವೆಂಕಟಪ್ಪನವರ ಸಮಸ್ತ ಕಲಾಕೃತಿಗಳನ್ನೂ ಅವರು ಬಳಸುತ್ತಿದ್ದ ವಸ್ತುಗಳನ್ನೂ ಮೈಸೂರು ಸರ್ಕಾರ ಬೆಂಗಳೂರಿನಲ್ಲಿ ವೆಂಕಟಪ್ಪನವರ ಹೆಸರಿನಲ್ಲಿ ರೂಪಿಸುತ್ತಿರುವ ಕಲಾಸಂಗ್ರಹಾಲಯಕ್ಕೂ ಮೈಸೂರು ವಿಶ್ವ ವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಸಾಂಸ್ಕೃತಿಕ ವಸ್ತು ಸಂಗ್ರಹಾಲಯಕ್ಕೂ ನೀಡಿದರು. ಕೇಂದ್ರ ಲಲಿತ ಕಲಾ ಅಕೆಡಮಿಯವರು ವೆಂಕಟಪ್ಪನವರ ಅಪೂರ್ವ ಸುಂದರ ಕೃತಿಗಳೊಡನೆ ಪರಿಚಯಾತ್ಮಕ ಕೈ ಹೊತ್ತಿಗೆಯೊಂದನ್ನು ಪ್ರಕಟಿಸಿದ್ದಾರೆ.

ಭಾರತೀಯ ಕಲಾವಿದರ ಶ್ರೇಣಿಯಲ್ಲಿ ವೆಂಕಟಪ್ಪನವರ ಸ್ಥಾನ ಅಗ್ರಗಣ್ಯವಾದುದು. ಭಾರತೀಯ ಕಲಾಪರಂಪರೆಗೆ ಅವರು ಅರ್ಪಿಸಿದ ಕೃತಿಗಳೂ ಅನರ್ಘ್ಯವಾದಂಥವು. ವೆಂಕಟಪ್ಪನವರ ಪರಿಶುದ್ಧ ನಿಷ್ಕಪಟ ಜೀವನ ಇತರ ಕಲಾವಿದರಿಗೆ ಆದರ್ಶವಾದದ್ದು. ಕರ್ನಾಟಕದ ಕಲೆಗೆ, ಕಲಾವಿದರಿಗೆ ಒಂದು ಘನತೆಯನ್ನು, ಒಂದು ಗೌರವವನ್ನು ಅವರು ತಂದುಕೊಟ್ಟರು. ಕೆ.ವಿ.ಯವರ ಖ್ಯಾತಿ ಭಾರತ ವ್ಯಾಪಿಯದಲ್ಲ; ಅದು ವಿಶ್ವವ್ಯಾಪಿ. ಇವರು ಕನ್ನಡಿಗರು – ಎಂಬುದು ನಾಡಿಗೇ ಹೆಮ್ಮೆಯ ಸಂಗತಿ.

ಸಾಭಾರ : ಮಾನವಿಕ ಕರ್ನಾಟಕ

***

ಹಂಸ ನೀರಕ್ಷೀರ ವಿವೇಕ : ಒಂದು ವಿವೇಚನೆ

–ಮಹಾವೀರ ಪ್ರಸಾದ ದ್ವಿವೇದಿ

ಪಕ್ಷಿಗಳೆಲ್ಲೆಲ್ಲಾ ಹಂಸ ಪಕ್ಷಿಯಷ್ಟು ಅದೃಷ್ಟಶಾಲಿಯೂ ದುರದೃಷ್ಟಶಾಲಿಯೂ ಆದ ಪಕ್ಷಿ ಇನ್ನೊಂದಿಲ್ಲ. ಈ ಮಾತು ಸೋಜಿಗದಂತೆ ಕಂಡರೂ ಸತ್ಯವಾದ ವಿಷಯ. ಒಮ್ಮೆ ಹಂಸವು ಸಾಹಿತ್ಯದಲ್ಲೊಂದು ಉತ್ತಮ ಸ್ಥಾನವನ್ನು ಕಲ್ಪಿಸಿಕೊಂಡಿತ್ತು. ಆದರೆ ಇಂದಿನ ಸಾಹಿತ್ಯದಲ್ಲಿ ಅದಕ್ಕೆ ಸ್ಥಾನಮಾನಗಳೇನೂ ಇಲ್ಲದಿರುವುದರ ಜೊತೆಗೆ ಹಿಂದೆ ಅದು ಗಳಿಸಿದ ಹೆಸರು ಇಂದು ಪಂಡಿತರ ವಿವಾದಾಸ್ಪದ ವಿಷಯವಾಗಿದೆ.

ಹಳೆಯ ಕಾಲದಲ್ಲಿ ಕವಿಗಳು ಹಂಸದ ಗುಣವಿಶೇಷವನ್ನು ಮರೆಯದೇ ತಮ್ಮ ಕಾವ್ಯಗಳಲ್ಲಿ ಹೊಗಳುತ್ತಿದ್ದರು. "ಹಂಸವು ಹಾಲಿನಲ್ಲಿ ಮಿಶ್ರವಾಗಿರುವ ನೀರನ್ನು ವಿಭಜಿಸಿ ಕೇವಲ ಹಾಲನ್ನೇ ಕುಡಿಯುತ್ತದೆ" ಎಂಬುದು ಒಂದು ಹಳೆಯ ಹೇಳಿಕೆ. ಈ ಗುಣವಿಚಿತ್ರದ ಹೇಳಿಕೆಯು ವೇದಗಳಷ್ಟೇ ಹಳೆಯದು. ಯಜುರ್ವೇದದ ತೈತ್ತಿರೀಯ ಬ್ರಾಹ್ಮಣದ ಎರಡನೇ ಅಧ್ಯಾಯದಲ್ಲಿ ಒಂದು ಕಡೆ ಇಂದ್ರನನ್ನು ಹೊಗಳುವಾಗ "ಇಂದ್ರನು ಕ್ರೌಂಚ ಪಕ್ಷಿಯು ಜಲಮಿಶ್ರಿತ ಹಾಲಿನಲ್ಲಿ ಕೇವಲ ಹಾಲನ್ನೇ ಗ್ರಹಿಸಿ ನೀರನ್ನು ಬಿಟ್ಟುಬಿಡುವಂತೆ, ನೀರಿನಿಂದ ಸೋಮವನ್ನು ವಿಭಜಿಸಿ ಗ್ರಹಿಸುತ್ತಾನೆ" – ಎಂದು ಹೇಳಲಾಗಿದೆ. ಭರ್ತೃಹರಿಯು ತನ್ನ ನೀತಿಶತಕದಲ್ಲೊಂದು ಕಡೆ ಹೀಗೆ ಹೇಳುತ್ತಾನೆ –

ಅಂಭೋಜಿನೀ ವನನಿವಾಸ ವಿಲಾಸಮೇವ
ಹಂಸಸ್ಯ ಹಂತಿ ನಿತರಾಂ ಕುಪಿತೋ ವಿಧಾತಾ।
ನ ತ್ವಸ್ಯ ದುಗ್ಧಜಲಭೇದವಿಧೌ ಪ್ರಸಿದ್ಧಾಂ
ವೈದಗ್ಧ್ಯ ಕೀರ್ತಿಮಪಹರ್ತುಮಸೌ ಸಮರ್ಥಃ॥

ಎಂದರೆ "ಬ್ರಹ್ಮ ಮುನಿದರೆ ಹಂಸಕ್ಕೆ ಕಮಲವನವಾಸದ ಆನಂದವನ್ನು ಮಾತ್ರ ಸಂಪೂರ್ಣವಾಗಿ ತಪ್ಪಿಸಿಬಿಡಬಹುದು. ಆದರೆ ನೀರು–ಹಾಲು ಬೇರ್ಪಡಿಸುವುದರಲ್ಲಿ ಹಂಸಕ್ಕಿರುವ ಪ್ರಸಿದ್ಧವಾದ ಪಾಂಡಿತ್ಯದ ಕೀರ್ತಿಯನ್ನು ಅಪಹರಿಸಲು ಎಂದೂ ಸಮರ್ಥನಾಗಲಾರ" ಎನ್ನುತ್ತಾನೆ.

ಪಂಚತಂತ್ರದಲ್ಲಿ ಒಂದು ಕಡೆ –

"ಸಾರಂ ತತೋ ಗ್ರಾಹ್ಯಮುಪಾಸ್ಯ ಫಲ್ಗು ಹಂಸೋ ಯಥಾ ಕ್ಷೀರಮಿವಾಂಬುಮಧ್ಯಾತ್॥" ಎಂಬ ಮಾತು ಬಂದಿದೆ. ಶಾಕುಂತಲ ನಾಟಕದಲ್ಲೂ "ಹಂಸೋ ಹಿ ಕ್ಷೀರಮಾದತ್ತೇ ತನ್ಮಿಶ್ರಾ ವರ್ಜಯತ್ಯಪಃ (೬–೨೭) ಎಂದು ಕಾಳಿದಾಸ ಹೇಳುತ್ತಾನೆ.

ಭಾಮಿನೀವಿಲಾಸದಲ್ಲಿ ಜಯದೇವರಾಯನು –

ನೀರಕ್ಷೀರವಿವೇಕೇ ಹಂಸಾಲಸ್ಯಂ ತ್ವಮೇವ ತನುಷೇ ಚೇತ್।
ವಿಶ್ವಸ್ಮಿನ್ನಧುನಾನ್ಯಃ ಕುಲವ್ರತಂ ಪಾಲಯಿಷ್ಯತಿ ಕಃ॥

"ಹೇ ಹಂಸ! ಹಾಲನ್ನು ನೀರಿನಿಂದ ಬೇರ್ಪಡಿಸುವ ವಿವೇಕವನ್ನು ನೀನೇ ಶಿಥಿಲಗೊಳಿಸಿದಲ್ಲಿ ಇನ್ನು ಈ ಜಗತ್ತಿನಲ್ಲಿ ಮತ್ತಿನ್ನಾರು ಕುಲವ್ರತವನ್ನು ಪಾಲಿಸುತ್ತಾರೆ" ಎಂದು ಪ್ರಶ್ನಿಸುತ್ತಾನೆ.

ವ್ಯಾಸರು ಮಹಾಭಾರತದ ಆದಿಪರ್ವದಲ್ಲಿ ಹಂಸದ ಗುಣವನ್ನು ಉಪಯೋಗಿಸಿ

ಪ್ರಾಜ್ಞಾಸ್ತು ಜಲ್ಪತಾ ಪುಂಸಾಂ ಶ್ರುತ್ವಾ ವಾಚಃ ಶುಭಾಶುಭಾಃ।

ಗುಣವದ್ವಾಕ್ಯಮಾದತ್ತೇ ಹಂಸಃ ಕ್ಷೀರಮಿವಾಂಭಸಃ॥

ಎಂದು ಪ್ರಾಜ್ಞರನ್ನು ಹೊಗಳಿದ್ದಾರೆ.

ಶ್ರೀಕಂಠ ಚರಿತದಲ್ಲಿ ಕವಿಯು –

ವಿತೀರ್ಣ ಶಿಕ್ಷಾ ಇವ ಹೃತ್ಪದಸ್ಥ ಸರಸ್ವತೀವಾಹನ ರಾಜಹಂಸ್ಯೈಃ।
ಯೇ ಕ್ಷೀರನೀರ ಪ್ರವಿಭಾಗದಕ್ಷಾ ಯಶಸ್ವಿನಸ್ತೇ ಕವಯೋ ಜಯಂತಿ॥

"ಹೃದಯದಲ್ಲಿ ಸ್ಥಿತವಾಗಿರುವ ಸರಸ್ವತಿಯ ವಾಹನಗಳಾದ ರಾಜಹಂಸಗಳು ಅವರಿಗೆ (ಕವಿಗಳಿಗೆ) ವಿಶೇಷ ಗುಣವನ್ನು ಕಲಿಸಿಯೋ ಎಂಬಂತೆ ಕ್ಷೀರ–ನೀರ ವಿಭಾಗ ಕ್ರಿಯೆಯಲ್ಲಿ ದಕ್ಷರಾದ ಕವಿಜನರ ಮಹಿಮೆಯು ಚೆನ್ನಾಗಿ ಪ್ರಕಾಶಿಸುತ್ತದೆ" ಎನ್ನುತ್ತಾನೆ.

ಹೀಗೆ ಹಲವಾರು ಬಗೆಯಲ್ಲಿ ಅನೇಕಾನೇಕ ಕವಿಜನರಿಂದ ಹೊಗಳಿಸಿಕೊಂಡ ಹಂಸವು ಈಚಿನ ವಿಮರ್ಶಕರನೇಕರ ಕಟು ಟೀಕೆಗಳಿಗೆ ತುತ್ತಾಗಿದೆ. ಪ್ರಾಯಶಃ ಪಾಶ್ಚಿಮಾತ್ಯ ಪಂಡಿತರುಗಳಿಂದ ಹಂಸಕ್ಕೆ ಆಘಾತವು ಆರಂಭವಾಯಿತು. ಪಾಶ್ಚಿಮಾತ್ಯ ಪಂಡಿತರುಗಳಿಂದ ತರ್ಕಬದ್ಧವೂ ಪ್ರತ್ಯಕ್ಷ ಪ್ರಮಾಣಗಳಿಂದಲೇ ಸಮಾಧಾವವನ್ನು ಹೊಂದುವ ಮನವು ಹಿಂದೂದೇಶದ ಪ್ರಾಚೀನವಾದ ಕವಿಗಳಿಂದ ಹೊಗಳಲ್ಪಟ್ಟ ಹಂಸದ ಕ್ಷೀರ–ನೀರ ವಿಭಜನಶಕ್ತಿಯನ್ನು ಬಡಪೆಟ್ಟಿಗೆ, ಕವಿಜನ ಮಾನ್ಯವೆಂದು ಒಪ್ಪಲಿಲ್ಲ. ಸಾಗರದಾಚೆಯ ಪಂಡಿತರುಗಳೊಡ್ಡುವ ಪ್ರಮುಖ ಪ್ರಶ್ನೆಗಳಿವು: ಹಂಸದ ಅದ್ಭುತ ಶಕ್ತಿಯನ್ನು ಕಂಡವರು ಯಾರುಂಟು? ಅಥವಾ ಕಂಡೆವೆಂದು ಹೇಳುವ ಲಿಖಿತ ಆಧಾರಗಳೆಲ್ಲಿ? ಈ ಪ್ರಶ್ನೆಗಳು ಅತಿ ಕಠಿಣವಾದುವು.

ಪೂಜ್ಯ ಸಾಯಣರು ತಮ್ಮ ಭಾಷ್ಯದಲ್ಲಿ ಯಜುರ್ವೇದದ ತೈತ್ತಿರೀಯ ಬ್ರಾಹ್ಮಣದ ಎರಡನೆಯ ಅಧ್ಯಾಯದಲ್ಲಿನ ಈ ಅದ್ಭುತ ಶಕ್ತಿಯನ್ನು ಹೀಗೆಂದು ವಿವರಿಸುತ್ತಾರೆ –

"ಕ್ಷೀರಪಾತ್ರೇ ಸ್ವಮುಖೇ ಪ್ರಕ್ಷಿಪತೇ ಸತಿ ಮುಖಗತರಸಂಪರ್ಕಾತ್ ಕ್ಷೀರಾಂಶೋ ಜಲಾಂಶಶ್ಚೌಭೌ ವಿವಿಚ್ಯೇತೇ" ಜಲಮಿಶ್ರಿತ ಹಾಲಿಗೆ ಹಂಸವು ಕೊಕ್ಕು ಹಾಕಿದೊಡನೆ ಅದರ ಮುಖದಲ್ಲಿರುವ ರಸವಿಶೇಷದ ಸಂಪರ್ಕ ಮಾತ್ರದಿಂದ ಹಾಲು ನೀರು ವಿಭಜಿಸಲ್ಪಡುತ್ತವೆ. ಅಥವಾ ಬೇರೆ ಬೇರೆಯಂತೆ ಕಾಣುತ್ತದೆ.

ಇನ್ನು ಅಮೆರಿಕಾದ ಹಾರ್ವರ್ಡ್ ವಿಶ್ವವಿದ್ಯಾನಿಲಯದಲ್ಲಿನ ಅಧ್ಯಾಪಕರಾದ ಲಾಂಗ್‌ಮನ್ ಸಾಹೇಬರು ಪ್ರಪಂಚದ ನಾನಾ ವಿಭಾಗಗಳಿಂದ ಹಂಸಗಳನ್ನೂ ಅವುಗಳಿಗೆ ಸಮಿಪದ ತಳಿಯ ಪಕ್ಷಿಗಳನ್ನೂ ತರಿಸಿ ನಾನಾ ಪರೀಕ್ಷೆಗಳನ್ನು ಮಾಡಿ ಅವುಗಳನ್ನು ಸಾಕಿ ಪರೀಕ್ಷೆ ಮಾಡಿದರು. ಆದರೆ ಹಂಸ ರಹಸ್ಯವು ಅವರಿಗೆ ಅರ್ಥಶೂನ್ಯವೆಂದು ತಿಳಿದುಬಂತು.

ಅಮೆರಿಕಾದ ವಾಶಿಂಗ್‌ಟನ್ನಿನ ಡಾಕ್ಟರ್ ಕಾಮ್ಮನ್ ಅವರು ಒಂದು ನಿರ್ಧಾರಕ್ಕೆ ಬಂದರು. ಹಂಸದ ಮುಖರಚನೆ ವಿಶೇಷರೀತಿಯದಾಗಿರಬಹುದು. ಅದು ಆಹಾರವನ್ನು ತಿನ್ನುವಾಗ ಆಹಾರದ ರಸಮಯ ಜಲಾಂಶವು ಮುಖದಿಂದ ಬಿದ್ದು ಉಳಿದ ಗಟ್ಟಿಯಾದ ಅಂಶವು ಹೊಟ್ಟೆಯೊಳಗೆ ಹೋಗುತದೆ.

ಮಹಾವೀರ ಪ್ರಸಾದ ದ್ವಿವೇದಿಯವರು ಈ ವಿಚಾರವನ್ನು ವಿಮರ್ಶಿಸುತ್ತಾ ಯಾವುದಾದರೂ ಪದಾರ್ಥದ ಗಟ್ಟಿ ಅಂಶವನ್ನು ಹಾಲು ಎನ್ನಲು ಸಾಧ್ಯವೇ ಎಂದು ಪ್ರಶ್ನಿಸುತ್ತಾರೆ.

ಭುಕ್ತಾ ಮೃಣಾಲ ಪಟಲೀ ಭವತಾ ನಿಪೀತಾ
– ನ್ಯಮ್ಬಾನಿ ಯತ್ರ ನವಿನಾನಿ ನಿಷೇವಿತಾನಿ।
ರೇ ರಾಜಹಂಸ! ವದ ತಸ್ಯ ಸರೋವರಸ್ಯ
ಕೃತ್ಯೇನ ಕೇನ ಭವಿತಾಸಿ ಕೃತೋಪಕಾರಃ?

– ಭಾಮಿನೀ ವಿಲಾಸ

ಆಕೈಲಾಸಾದ್ ಬಿಸಕಿಸಲಯಚ್ಛೇದ ಪಾಥೇಯವಂತಃ।
ಸಮ್ಪತ್ಸಂತೇ ನಭಸಿ ಭವತೋ ರಾಜಹಂಸಾಃ ಸಹಾಯಾಃ॥

– ಮೇಘದೂತ

ಸುರಾಂಗನಾ ಕರ್ಷತಿ ಖಂಡಿತಾಗ್ರಾತ್ ಸೂತ್ರಂ ಮೃಣಾಲಾದಿವ ರಾಜಹಂಸೀ

– ವಿಕ್ರಮೋರ್ವಶೀಯ

ಇವನ್ನು ಉದ್ಧರಿಸುತ್ತಾ – "ಹಂಸಗಳು ನಿರನ್ನು ಕುಡಿಯುತ್ತವೆ. ಜಲಜನ್ಯ ಗಿಡಗಳ ಫಲ ಪುಷ್ಪ ಮೂಲ ನಾಳ, ಮೃಣಾಲ ಮತ್ತು ಬಿಸತಂತುಗಳನ್ನು ತಿನ್ನುತ್ತವೆ. ಕಮಲದ ದಂಟುಗಳಲ್ಲಿ ಒಂದು ಬಗೆಯ ಮಧುರವಾದ ನಾರಾದ ಬಿಳುಪಾದ ಸ್ನಿಗ್ಧರಸ ವಿಶೇಷವಿರುತ್ತದೆ. ಅದನ್ನು ಹಂಸಗಳು ತಿನ್ನುತ್ತವೆ. ಪ್ರಾಯಶಃ ಪ್ರಾರಂಭದಲ್ಲಿ ನಿರಿನೊಳಗಣ ಹಾಲನ್ನು (ದಂಟಿನ ಅಂಟನ್ನು) ಕುಡಿಯುತ್ತಿದ್ದುದನ್ನು ಕಂಡ ಪಂಡಿತರು ಹಂಸಕ್ಕೆ ನೀರ–ಕ್ಷೀರ ವಿವೇಕ ಗುಣವನ್ನು ಆರೋಪಿಸಿರಬಹುದು. ಮುಂದೆ ಕವಿಗಳು ಈ ಮೂಲವಿಷಯವನ್ನು ಗ್ರಹಿಸದೆ ಯಥಾವತ್ತಾಗಿ ವರ್ಣಿಸುತ್ತಾ ಬಂದು ಬಿಟ್ಟರು" ಎನ್ನುತ್ತಾರೆ.

ಸಿದ್ಧಾಂತ ಕೌಮುದಿಯ ಪ್ರಕಾರ ಹಂಸಃ ಪದವು 'ಹಸ್' ಧಾತುವಿನಿಂದ ಉಂಟಾಗಿದೆ. "ಭವೇದ್ವರ್ಣಾಗಮಾದ್ ಹಂಸಃ"

ಹಂಸ ಪದಕ್ಕೆ ಸಾಮಾನ್ಯವಾಗಿ ಒಂದು ಜಲಚರ ಪಕ್ಷಿ ವಿಶೇಷವೆಂದರ್ಥವುಂಟು. ಈ ಪಕ್ಷಿ ವಿಶೇಷವು ಸೃಷ್ಟಿಕರ್ತನಾದ ಬ್ರಹ್ಮನ ವಾಹನವೆಂದೂ, ಸರಸ್ವತಿಯ ವಾಹನವೆಂದೂ ಪುರಾಣಗಳಲ್ಲಿ ಹೇಳಲಾಗಿದೆ. ಮಾನಸ ಸರೋವರವೇ ಹಂಸಗಳ ಮೂಲಸ್ಥಾನ. ಇದಲ್ಲದೆ ಹಂಸಪದಕ್ಕೆ ವಿಶೇಷಾರ್ಥವಾಗಿ ಬ್ರಹ್ಮನೆಂದೂ, ಆತ್ಮನೆಂದೂ, ಸೂರ್ಯ, ಶಿವ, ವಿಷ್ಣು, ಕಾಮದೇವ, ರಾಜರ್ಷಿ, ಯೋಗಿ, ಪರಿಶುದ್ಧ ಜೀವಿ, ಪರ್ವತಗಳೆಂದೂ ಅರ್ಥವುಂಟು.

ವೈಜ್ಞಾನಿಕ ದೃಷ್ಟಿಯಿಂದ ಗಮನಿಸಿದಲ್ಲಿ ಈ ಸಮಸ್ಯೆಯನ್ನು ಸುಲಭವಾಗಿ ಬಿಡಿಸಬಹುದು. ವೇದಗಳ ಕಾಲದಲ್ಲಿ ಸೋಮವನ್ನು ತಯಾರಿಸಿ ಯಜ್ಞ ವಿಶೇಷ ಸಮಯಗಳಲ್ಲಿ ಆರ್ಯರು ಕುಡಿಯುತ್ತಿದ್ದರು. ಆರ್ಯರಿಗೆ ಭಟ್ಟಿ ಇಳಿಸುವುದು ಬಹು ಚೆನ್ನಾಗಿ ತಿಳಿದ ವಿಷಯವಾಗಿತ್ತು. ವೈದ್ಯ ವಿಜ್ಞಾನ (ಆಯುರ್ವೇದ)ದಲ್ಲಿ ಭಟ್ಟಿ ಇಳಿಸುವುದು ಪ್ರಚಲಿತ ಕ್ರಿಯೆಯಾಗಿತ್ತು. ಭಟ್ಟಿ ಪಾತ್ರೆಯ ವಿನ್ಯಾಸವನ್ನು ಗಮನಿಸಿದಲ್ಲಿ ಸ್ವಾರಸ್ಯವೂ, ವೈಚಿತ್ರವೂ ಆದ ವಿಚಾರವೊಂದು ಹೊಳೆಯುತ್ತದೆ. ಭಟ್ಟಿ ಪಾತ್ರೆಯು ಒಂದು ಪಕ್ಷಿಯ ಆಕಾರದಲ್ಲಿಯೇ ಇರುತ್ತದೆ. ಅದರ ಆಕೃತಿ ಹೆಚ್ಚು ಕಡಿಮೆ, ಸಂನ್ಯಾಸಿಗಳು ಉಪಯೋಗಿಸುವ ಪಾಣಿಪಾತ್ರೆ ಅಥವಾ ಕಮಂಡಲಿನಂತೆಯೇ ಇರುತ್ತದಲ್ಲವೆ! ಇಂಗ್ಲಿಷಿನಲ್ಲಿ 'ರಿಟಾರ್ಟ್' ಎಂದು ಕರೆಯಲಾಗುವ ಈ ಪಾತ್ರೆಯನ್ನು ಅನುವಾದಕರು ರಸಭಾವವಿಲ್ಲದೆ 'ಬಕಪಾತ್ರೆ' ಎಂದು ಅನುವಾದಿಸಿರುವುದನ್ನು ಪ್ರತಿಯೊಬ್ಬ ವಿಜ್ಞಾನ ವಿದ್ಯಾರ್ಥಿಯೂ ಬಲ್ಲನಷ್ಟೆ! ಅವರಿಗೆ 'ಬಕ'ವೇ ಹೊಳೆಯಿತೇಕೆ? 'ಹಂಸ' ಎಂಬ ಸುಂದರವಾದ ಹೆಸರು ಏಕೆ ಹೊಳೆಯಲಿಲ್ಲ ಎಂಬುದನ್ನು ಬಿಡಿಸಲಾಗುವುದಿಲ್ಲ. ಸಾದೃಶ್ಯ ಭಾವದಿಂದ ಬಕವನ್ನು ಪ್ರಯೋಗಿಸಿದರೂ ರಸಾಭಾವದಿಂದ 'ಹಂಸ'ವನ್ನು ಪ್ರಯೋಗಿಸಲಿಲ್ಲವೆಂದು ಕಾಣಬರುತ್ತದೆಯೇ?

ಹಂಸದ ಶರೀರದಂಥ ದುಂಡನೆಯ ಮುಖ್ಯಭಾಗ, ಹಂಸದ ಕೊರಳಿನಂತೆಯೇ ನೀಳಾಗಿ ದುಂಡಾಗಿದ್ದು ಕೊಂಚ ಬಾಗಿರುವ ನಳಿಕೆ, ಹಂಸದ ಬಾಯಿಯಂತೆಯೇ ನಳಿಕೆಯ ತುದಿಯಲ್ಲಿ ಬಾಯಿ! ಇಷ್ಟು ಸಾದೃಶ್ಯಗಳನ್ನು ಕಂಡ ಪ್ರಾಚೀನ ಋಷಿಗಳು ಆ

ಪಾತ್ರೆಗೆ ಕ್ರೌಂಚವೆಂದೋ ಹಂಸವೆಂದೋ ನಾಮಕರಣ ಮಾಡಿರಬಹುದು ಎಂದು ಊಹಿಸಲು ಅಡ್ಡಿಯೇನು? ಕ್ಷೇತ್ರಗಣಿತದಲ್ಲಿ ಸಾದೃಶ್ಯ ಭಾವದಿಂದ ಅಹಿ, ಜ್ಯಾ, ಕರ್ಣ ಚಾಪ ಇತ್ಯಾದಿ ಅನೇಕ ಪದಗಳು ಪ್ರಯೋಗಿಸಲ್ಪಟ್ಟಿಲ್ಲವೇ? ಹಾಗೆಯೇ ತಾವು ಭಟ್ಟಿ ಇಳಿಸಲು ಉಪಯೋಗಿಸುತ್ತಿದ್ದ ಪಾತ್ರೆಯನ್ನು ಹಂಸವೆಂದೇ ಆರ್ಯರು ಕರೆದಿರಬಹುದೇ? "ಆರ್ಯರದು ಎಲ್ಲವನ್ನೂ ವರ್ಣಿಸುವ ಹೊಗಳುವ ಸ್ವಭಾವ" ಎಂದು ವೈದಿಕ ಸಾಹಿತ್ಯದ ಪರಿಚಯವುಳ್ಳವರೆಲ್ಲರೂ ಒಪ್ಪಿಕೊಳ್ಳುತ್ತಾರೆ. ಅಲಂಕಾರಯುತವಾದ ಮಾತುಗಳೇ ಆರ್ಯರ ವೈಶಿಷ್ಟ್ಯ. ಸೋಮವನ್ನು ಕುಟ್ಟುವ ಕಲ್ಲನ್ನೂ ವರ್ಣಿಸುತ್ತಾರೆ. ಸೋಸುವ ಬಟ್ಟೆಯನ್ನೂ ಹೊಗಳುತ್ತಾರೆ. ಈ ಸರಣಿಯಲ್ಲಿಯೇ ಹಂಸಪಾತ್ರೆಯನ್ನೂ ಕಾವ್ಯಮಯವಾಗಿ ಹೊಗಳಿರಬಹುದು. ಆ ಯಂತ್ರವಿಶೇಷದ ಹೊಗಳಿಕೆಯನ್ನು ಪರಂಪರೆಯಲ್ಲಿ ಹೇಳುತ್ತಾ ಬಂದಾಗ ಅದರ ವಿಭಜನ ಶಕ್ತಿಯನ್ನು ಸಾದೃಶ್ಯವುಳ್ಳ ಹಂಸ ಪಕ್ಷಿಗೆ ಅರಿತೋ ಅರಿಯದೆಯೋ ಆರೋಪಿಸಬಹುದು. ಪರಂಪರೆಯಲ್ಲಿ ವಿವೇಚನೆ ನಡೆಸದೆ ಅನುಕರಣೆಯಿಂದ ಆಡುತ್ತಾಬಂದ ಮಾತು ವಿವಾದವಾಗಿ ರೂಪಾಂತರಗೊಂಡಿರಬಹುದೇ?

ಆದುದರಿಂದ ಹಂಸಕ್ಷೀರ ನ್ಯಾಯುವನ್ನು ವೈಜ್ಞಾನಿಕವಾಗಿಯೂ ತರ್ಕಯುತವಾಗಿಯೂ ಬಿಡಿಸಲು ಉಳಿದಿರುವ ಮಾರ್ಗವು ಇದೊಂದೇ. ಜಲಮಿಶ್ರವಾದ ದ್ರವ ವಿಶೇಷವನ್ನು ಹಂಸಪಾತ್ರೆಯು 'ಸೇವಿಸಿದಾಗ' ಜಲವನ್ನು (ನ್ಯಾಯವಾಗಿ ನೋಡಿದರೆ ಭಟ್ಟಿ ಇಳಿದ ಶುದ್ಧಸಾರವನ್ನು) ಬೇರ್ಪಡಿಸಿ 'ಉಗುಳಿಬಿಡುತ್ತದೆ'. ಸಾದೃಶ್ಯವುಳ್ಳ ಹಂಸವೆಂಬ ಹೆಸರುಳ್ಳ ಪಕ್ಷಿ ವಿಶೇಷವು ಈ ತಂತ್ರವನ್ನು ಮಾಡಲು ಶಕ್ಯವಿಲ್ಲ.

ಸಂಪ್ರದಾಯ ಸೆಳೆತದಲ್ಲಿಯೇ ಸಾಗುತ್ತಿರುವ ಸಮಸ್ಯೆಯನ್ನೂ ಸ್ವತಂತ್ರವಾಗಿ ಸರಿದೂಗಿಸುವುದನ್ನು ಸಂಪ್ರದಾಯಸ್ಥರು ಸಮ್ಮತಿಸುತ್ತಾರೆಯೇ? ಇನ್ನೂ ಅನೇಕ ಸಾಹಿತ್ಯ ಸಮಸ್ಯೆಗಳನ್ನು ಹೀಗೆಯೇ ವೈಜ್ಞಾನಿಕವಾಗಿ ವಿಶ್ಲೇಷಿಸಬಹುದು. ಆದರೆ ಹಂಸ ಪದಕ್ಕೆ ಬ್ರಹ್ಮವೆಂದೂ, ಆತ್ಮನೆಂದೂ, ಸೂರ್ಯನೆಂದೂ, ಶಿವನೆಂದೂ, ವಿಷ್ಣುವೆಂದೂ, ಯೋಗಿಯೆಂದೂ ಅರ್ಥವಿದೆಯಲ್ಲ! ಎಂದು ಶಂಕಿಸಿದರೆ ಅದಕ್ಕೂ ಮೇಲಿನ ಸರಣಿಯಲ್ಲಿಯೇ ಸಮಾಧಾನವನ್ನು ನೀಡಬಹದು.

ಸೂರ್ಯನಾದರೋ ಪ್ರಪಂಚದಲ್ಲಿನ ತನ್ನ ನೀರನ್ನು ದಹನಶಕ್ತಿಯಿಂದ ವಿಭಜಿಸುತ್ತಾನೆ. ಯೋಗಿಯಾದರೋ ಪ್ರಪಂಚದೊಳಗಣ ಮಿಶ್ರ ವ್ಯಾಪಾರ, ಮಿಶ್ರ ಜ್ಞಾನ, ಮಿಶ್ರ ಸ್ವಭಾವಗಳಲ್ಲಿ ಆಧ್ಯಾತ್ಮಿಕ ಅಂಶಗಳನ್ನಷ್ಟೇ ವಿಭಜಿಸಿ ಗ್ರಹಿಸುತ್ತಾನೆ. ಈಶ್ವರನಾದರೋ ಪಶುವಾಚಿ ಜೀವರಾಶಿಗಳಲ್ಲಿ ಸಮ್ಯಕ್ ಜ್ಞಾನವುಳ್ಳವರನ್ನೇ ವಿಭಜಿಸಿ ಗ್ರಹಿಸುತ್ತಾನೆ. ವಿಷ್ಣುಪದದ ಸೂಚಕವಾದ ಆಕಾಶವಾದರೋ ನೀರನ್ನು ವಿಭಜಿಸಿ ತ್ಯಜಿಸುತ್ತದೆ. ಇವುಗಳು ಉದಾಹರಣೆಯ ರೂಪದ ಸ್ಥೂಲ ವಿಶ್ಲೇಷಣೆಗಳು.

ಹೀಗೆ 'ಹಂಸ' ಪದವೇ ವಿಭಜನೆಯ ಸೂಚಕವಾಗಿ ಪ್ರಯೋಗಿಸಲ್ಪಟ್ಟಿರಲಿಕ್ಕೆ ಸಾಕು! ಈ ವಿಶ್ಲೇಷಣೆಗಳನ್ನು ಒರೆಗೆ ಹಚ್ಚಿ ಯುಕ್ತವೆನಿಸಿದರೆ ಒಪ್ಪಿಕೊಳ್ಳುವುದು ಸಂಶೋಧಕರ ಪಾಲಿನ ಕೆಲಸವೆಂದೂ ಹೇಳಬಹುದು.

ಸಾಭಾರ : ಪ್ರಬುದ್ಧ ಕರ್ನಾಟಕ
ಸಂಗ್ರಹ : ಪಿ.ಎಂ. ಗಿರಿರಾಜು

***

ಹಿಂದೂ ಧರ್ಮಕ್ಕೆ ಗ್ರಂಥದ ಬಂಧನವಿಲ್ಲ

– ವಿನೋಬಾ

ಋಗ್ವೇದವೂ ಸೇರಿದಂತೆ ಇರುವ ನಾಲ್ಕೂ ವೇದಗಳು, ಬ್ರಾಹ್ಮಣ, ಉಪನಿಷತ್ತುಗಳು, ಸ್ಮೃತಿಗಳು, ಮಹಾಭಾರತಾದಿ ಇತಿಹಾಸಗಳು, ಪುರಾಣಗಳು ಸೂತ್ರಗಳು, ದರ್ಶನಗಳು, ಭಾಷ್ಯಗಳು ಇತ್ಯಾದಿ ಸಂಸ್ಕೃತ ಗ್ರಂಥಗಳಂತೆಯೇ ನಾನಕರ ಗ್ರಂಥ ಸಾಹಿಬ್, ಕಬೀರರ ಬೀಜಕ ಗ್ರಂಥ, ತುಲಸಿದಾಸರ ರಾಮಾಯಣ, ತುಕಾರಾಮರ ಗಾಥೆಯಂಥ ಭಾಷಾ ಗ್ರಂಥಗಳೆಲ್ಲವೂ ಸ್ವಲ್ಪ ಹೆಚ್ಚು ಕಡಿಮೆ ಹಿಂದೂ ಧರ್ಮದ ಗ್ರಂಥಗಳಾಗಿವೆ. ಆದರೆ ವಿಶೇಷತೆಯೇನೆಂದರೆ ಇವುಗಳಲ್ಲಿಯ ಯಾವ ಗ್ರಂಥದೊಂದಿಗೂ ಹಿಂದೂ ಧರ್ಮದ ನೇರ ಸಂಬಂಧವಿಲ್ಲದಿರುವಿಕೆ. ಈ ಗ್ರಂಥ ಮತ್ತು ಹಿಂದೂಧರ್ಮದ ಮಧ್ಯ ದ್ವೈತ ಭಾವನೆಯಿರದೆ ಅದ್ವೈತ ಭಾವನೆಯಿದೆ. ಈ ಭಾವನೆ ಶಂಕರಾಚಾರ್ಯರು ತಮ್ಮ ಷಟ್ಪದಿಯಲ್ಲಿ ವ್ಯಕ್ತಪಡಿಸಿರುವ ಅದ್ವೈತದ ಮಾದರಿಯಾಗಿದೆ.

ಸತ್ಯಪಿ ಭೇದಾಪಗಮೆ ನಾಥ ತವಾಹಂ ನ ಮಾಮಕೀನಸ್ತ್ವಂ
ಸಮುದ್ರೋ ಹಿ ತರಂಗಃ ಕ್ವಚನ ಸಮುದ್ರೋ ನ ತಾರಂಗಃ

ದೇವರೆ, ನಿನ್ನ ಮತ್ತು ನನ್ನ ಸಂಬಂಧ ಅದ್ವೈತವಾಗಿದೆ. ಆದಾಗ್ಯೂ ನಾನು ನಿನ್ನವನು, ನೀನು ನನ್ನವನಲ್ಲ! ನಿಸರ್ಗದಲ್ಲಿ ನೋಡಿ, ಸಮುದ್ರ ಅಲೆಗಳದೋ, ಅಲೆಗಳದು ಸಮುದ್ರವೋ. ಇಂಥದೇ ಸಂಬಂಧ ಹಿಂದೂ ಧರ್ಮ ಹಾಗೂ ಅದರ ಗ್ರಂಥಗಳದ್ದಾಗಿದೆ. ಈ ಸಂಬಂಧ ಸೂಕ್ತವಾಗಿದ್ದರೆ ವೇದಪ್ರಮಾಣವೆಂಬುದರ ಅರ್ಥವೇನು? ವೇದಗಳ ವಿಷಯದಲ್ಲಿರುವ ಪ್ರಾಮಾಣ್ಯ ಬುದ್ಧಿಯು ಹಿಂದೂ ಧರ್ಮದ ವಿಶೇಷ ಲಕ್ಷಣವೆಂದು ಪಂಡಿತರು ತಿಳಿದಿದ್ದಾರೆ. ಕೆಲವೊಮ್ಮೆ ಭಗವಂತನ ಮೇಲೆ ವಿಶ್ವಾಸವಿಲ್ಲದಿದ್ದರೂ ನಡೆದೀತು, ಆದರೆ ವೇದದ ಮೇಲೆ ವಿಶ್ವಾಸ ವಿರಬೇಕೆಂದು ಹೇಳಲಾಗುವ ಮಾತಿನ ಅರ್ಥವಾದರೂ ಏನು? ಆಸ್ತಿಕ ಷಡ್‌ದರ್ಶನ ಮತ್ತು ನಾಸ್ತಿಕ ಷಡ್‌ದರ್ಶನ ಎಂದು ಭೇದ ಮಾಡುವಾಗ ವೇದ ವಿಷಯಕವಾಗಿರುವ ಶ್ರದ್ಧೆಯನ್ನೇ ಅಳತೆಗೋಲನ್ನಾಗಿ ಸ್ವೀಕರಿಸುವುದರ ಹಿಂದೆ ಯಾವ ಉದ್ದೇಶ್ಯವಿದೆ? ಪುರಾಣಗಳ ಪುಣ್ಯ ತಿಥಿಯನ್ನು ಒಪ್ಪುವುದಕ್ಕಾಗಿ ಉತ್ಸುಕರಾಗಿರುವ ಸಮಾಜವಾದಿಗಳಿಗೂ ಕೂಡ ವೇದಗಳ ಜನ್ಮದಿನವನ್ನು ಒಪ್ಪುವುದು ಇಷ್ಟವಾಗುತ್ತದಲ್ಲ, ಅದು ಏಕೆ? ಇಂಥ ಪ್ರಶ್ನೆಗಳೇನೋ ಹುಟ್ಟುತ್ತವೆ. ಆದರೆ ಸ್ವಲ್ಪ ಆಲೋಚಿಸಿದಲ್ಲಿ ಇವುಗಳಿಗೆ ಉತ್ತರ ದೊರೆಯುತ್ತದೆ.

ಆರ್ಯಸಮಾಜಕ್ಕೆ ವೇದಗಳು ಏಕೆ ಪ್ರಿಯವಾಗಿವೆಯೆಂಬುದಕ್ಕೆ 'ಈಶ್ವರೇಚ್ಛಾ ಬಲೀಯಸೀ' ಎಂಬುದಂತೂ ಇದ್ದೇ ಇದೆ. ಇದಕ್ಕೆ ಇನ್ನೊಂದು ಕಾರಣ ಹೀಗೂ ಇರಲು ಸಾಧ್ಯ. "ಪುರಾಣಾದಿ ಗ್ರಂಥಗಳ ಅರ್ಥವೇನೋ ಆಗುತ್ತದೆ. ವೇದಗಳ ಅರ್ಥ ತಿಳಿಯುವುದಿಲ್ಲ, ಮತ್ತು ಅದರ ಅರ್ಥವನ್ನೂ ಮಾಡಿಕೊಳ್ಳಲಾರರು. ಜೊತೆಗೆ ವೇದಗಳ ಅರ್ಥವನ್ನೇ ಮಾಡಕೂಡದೆಂಬ ಮಾತೂ ಇದೆ. ಇಷ್ಟೇ ಅಲ್ಲ, ವೇದಗಳಿಗೆ ಸ್ವತಃ

ಯಾವ ಅರ್ಥವೇ ಇಲ್ಲ". ಇಷ್ಟರ ಮಟ್ಟಿಗೆ ಗಂಭೀರತಾ ಪೂರ್ವಕವಾಗಿ ಪ್ರತಿಪಾದಿಸುವ ಎಷ್ಟೋ ಮೀಮಾಂಸಕರು ಭಾರತದಲ್ಲಿ ಈ ಮೊದಲು ಆಗಿ ಹೋದರು. ಆ ಮೀಮಾಂಸಕರ ಬಗ್ಗೆಯೇ ಈ ರೀತಿ ಮೀಮಾಂಸೆ ಮಾಡಲಾಗುತ್ತದೆ. ಏನೆಂದರೆ ಅವರ ಉದ್ದೇಶ್ಯ ವೇದಾರ್ಥದ ಅಜ್ಞೇಯತ್ವ ಎಂಬುದು. ತದ್ವಿಷಯಕ ಪ್ರಾಮಾಣ್ಯ ಬುದ್ಧಿಯ ಕವಚವಾಗಲಿ ಎಂಬುದು. ಆರ್ಯ ಸಮಾಜವು ವೇದವನ್ನು ಸ್ವತಃ ಸಿದ್ಧ ಪ್ರಮಾಣವೆಂದು ತಿಳಿಯುತ್ತದೆಂಬುದಾಗಿ ಹೇಳುವುದೇ ಸರಿಯಲ್ಲ. ಆರ್ಯ ಸಮಾಜವು ವೇದವನ್ನು ಪ್ರಮಾಣವೆಂದು ಸ್ವೀಕರಿಸಲು ಕಾರಣವೇನೆಂದರೆ ಅದು ಸ್ವತಂತ್ರ ರೂಪದಲ್ಲಿ ತಾನು ತರ್ಕಮಾಡಿ ಯಾವಧರ್ಮ ಸಿದ್ಧಾಂತವನ್ನು ಮೊದಲೇ ನಿಶ್ಚಿತ ಮಾಡಿಕೊಂಡಿತ್ತೋ ಅದು ವೇದದಲ್ಲಿ ಸಿಗುತ್ತದೆಯೇ ಇಲ್ಲವೆ ಎಂಬುದಕ್ಕಾಗಿ. ವೇದಪ್ರಮಾಣ ಏಕೆ? ಏಕೆಂದರೆ ಅದು ಸ್ವತಃ ಪ್ರಮಾಣವಾಗಿದೆಯಾದ್ದರಿಂದ! ಇದೇ ವೇದದ ಸ್ವತಃ ಪ್ರಾಮಾಣ್ಯ. ಇಂಥ ಪ್ರಾಮಾಣ್ಯ ಆರ್ಯಸಮಾಜದಲ್ಲಿ ಇರಬಹುದೆಂದು ಅನಿಸುವುದಿಲ್ಲ.

ವೇದಪ್ರಾಮಾಣ್ಯವಾದಿಗಳು ತಿಳಿದುಕೊಂಡಿದ್ದಂಥ ಎಲ್ಲ ಪೂರ್ವ ಆಸ್ತಿಕ ದರ್ಶನ ವೇದ ಸ್ವತಃ ಪ್ರಾಮಾಣ್ಯ ಎಂದು ತಿಳಿಯುತ್ತೇವೆಂದೇನೂ ಅಲ್ಲ. ಉದಾಹರಣಾರ್ಥವಾಗಿ ಅಭಾವದ ಶೋಧನೆ ಮಾಡುವವರನ್ನು ವೈಶೇಷಿಕ ಆಸ್ತಿಕರೆಂದು ತಿಳಿಯಲಾಗುತ್ತದೆ. ಅವರ ಸೂತ್ರ ಗ್ರಂಥದಲ್ಲಿ **ತದ್ವಚನಾದಾಮ್ನಾಯಷ್ಯ ಪ್ರಾಮಾಣ್ಯಂ**. ಆದ್ದರಿಂದ ವೇದದಲ್ಲಿ ಧರ್ಮವನ್ನು ಹೇಳಿರುವುದರಿಂದ ವೇದವು ಪ್ರಮಾಣ. ಆದರೆ ಮೊದಲನೆಯ ಮಾತೇನೆಂದರೆ ಧರ್ಮವನ್ನು ಹೇಗೆ ನಿಶ್ಚಿತ ಮಾಡಲಾಯಿತು. ಇದಕ್ಕೆ ವೈಶೇಷಿಕರ ಉತ್ತರ "ಪ್ರತ್ಯಕ್ಷ ಮತ್ತು ಅನುಮಾನದ ಸಹಾಯದಿಂದ" ಇದರಿಂದ ಗಮನಕ್ಕೆ ಬರುವುದೇನೆಂದರೆ ಎಲ್ಲ ಆಸ್ತಿಕ ದರ್ಶನಗಳು ವೇದಗಳನ್ನು ಸ್ವತಂತ್ರ ಪ್ರಮಾಣವೆಂದು ಒಪ್ಪುವಂತಾಗಿವೆಯೆ. ದರ್ಶನಗಳಲ್ಲಿರುವಂಥ ಆಸ್ತಿಕ-ನಾಸ್ತಿಕ ಭೇದವು ಉಂಟಾಗುವುದಕ್ಕೆ ಕಾರಣ ಆತ್ಮದ ಅಸ್ತಿತ್ವವನ್ನು ಒಪ್ಪುವ ಅಥವಾ ಒಪ್ಪದೆ ಇರುವುದರಿಂದಾಗಿ. ವೇದ ಪ್ರಾಮಾಣ್ಯದ ಜೊತೆಗೆ ಅದರ ನೇರ ಸಂಬಂಧವಿಲ್ಲ. ಭಗವಂತನಿಗಿಂತ ಹೆಚ್ಚು ಮಹತ್ವ ವೇದದ ಮೇಲಿನ ವಿಶ್ವಾಸದ್ದಾಗಿದೆ. ಇದೇ ಅರ್ಥದ ಧಾಟಿಯಲ್ಲಿ ವೇದಕ್ಕಿಂತಲೂ ಗುರುವಿನ ಮತ್ತು ಗುರುವಿಗಿಂತಲೂ ಸ್ವಂತ ಆತ್ಮದ ಮಹತ್ವ ಹೆಚ್ಚೆಂದು ಹೇಳಬಹುದು. **ಉಪಾಯೇಧಿಕೊ ಯತ್ನಃ ಕರ್ತವ್ಯೋ ನೋಪಪೆಯೆ** (ತೈ ಭಾಷ್ಯ ೧.೧೧)- ಸಾಧಕನ ದೃಷ್ಟಿಯಿಂದ ಸಾಧ್ಯಕ್ಕಿಂತಲೂ ಸಾಧನೆಯು ಮಹತ್ವದ್ದಾಗಿರುತ್ತದೆ. ಆ ದೃಷ್ಟಿಯಿಂದ ಶಾಸ್ತ್ರಗಳಲ್ಲಿ ಅನೇಕ ಅರ್ಥವಾದಾತ್ಮಕ ವಾಕ್ಯಗಳು ಬರುತ್ತವೆ. ಅವುಗಳ ಅರ್ಥವನ್ನು ಅಕ್ಷರಷಃ ಮಾಡಕೂಡದು. ಪಂಡಿತರು ವೇದ ಪ್ರಾಮಾಣ್ಯದ ಸಂಬಂಧವನ್ನು ಹಿಂದುತ್ವದ ಲಕ್ಷಣದೊಂದಿಗೆ ಜೋಡಿಸಿದ್ದಾರೆ. ಅದು ಕೂಡ ಆಳವಾಗೇನೂ ಇಲ್ಲ.

ವೇದಗಳ ಅರ್ಥವನ್ನೇ ಮಾಡಕೂಡದು ಮತ್ತು ಆ ವಿಷಯದಲ್ಲಿ ಪ್ರಾಮಾಣ್ಯ ಬುದ್ಧಿಯನ್ನು ಇಟ್ಟುಕೊಳ್ಳಬೇಕೆಂಬ ಮಾತಿನಲ್ಲಿ ಕೊಂಚ ಸಿದ್ಧಾಂತವಿದೆ. ಏಕೆಂದರೆ ವೇದಗಳ ಅರ್ಥ ಅತ್ಯಂತ ಪವಿತ್ರವೂ ಅಷ್ಟೇ ಗೂಢವೂ ಆಗಿದೆ. ಇಂಥ ಶ್ರದ್ಧೆಯಿಂದ ವೇದಗಳ ವಿಷಯದಲ್ಲಿ ಪ್ರಾಮಾಣ್ಯ ಬುದ್ಧಿಯನ್ನಿಡುವುದು ಮನಃಶಾಸ್ತ್ರದ ದೃಷ್ಟಿಯಿಂದ ಅಸಂಭವವೇನಲ್ಲ. ಯಾರಿಗೆ ಸ್ವಸ್ತಿಕದ ಆಕೃತಿಯಲ್ಲಿ ಬ್ರಹ್ಮ ದರ್ಶನವಾಗುತ್ತದೋ ಅಂಥವರಿಗೆ

ವೇದಗಳಲ್ಲಿ ಬ್ರಹ್ಮದರ್ಶನ ಆಗುವುದರಲ್ಲಿ ಯಾವುದೇ ಆಕ್ಷೇಪಣೆ ಇರಕೂಡದು. ಅರ್ಥಾತ್ ಇದು ಮೂರ್ತಿಪೂಜೆಯಾಯಿತು. ಶಾಲಗ್ರಾಮದ ಪೂಜೆ ಮಾಡುವ ಸಮಯದಲ್ಲಿ ಒಂದು ವೇಳೆ ಶಾಲಗ್ರಾಮವು ದುಂಡಾಗಿ ಕಂಡುಬಂದಲ್ಲಿ ಮೂರ್ತಿಪೂಜೆ ವ್ಯರ್ಥವಾದಂತೆ. ಶಾಲಗ್ರಾಮದ ದುಂಡಗಿನ ಆಕಾರವನ್ನು ನೋಡುವುದು ಭೌತಿಕ ಜ್ಞಾನವೆ ಹೊರತು ಮೂರ್ತಿಪೂಜೆಯಲ್ಲ. ಮೂರ್ತಿ ಪೂಜೆಯಲ್ಲಿ ಮೂರ್ತಿಯ ಭೌತಿಕ ರೂಪ ಕಂಡ ಮೇಲೂ ಅದನ್ನು ಭಾವಿಸಕೂಡದು. ಅದೇ ರೀತಿ ವೇದದ ಪ್ರಾಮಾಣ್ಯ. ಮೂರ್ತಿ ಪೂಜೆಯ ಸಿದ್ಧಾಂತದ ಆಧಾರವನ್ನು ಸ್ವೀಕರಿಸಿದ ನಂತರ ವೇದಗಳ ಅರ್ಥವನ್ನು ಮಾಡದೇ ಹೋದರೂ ನಡೆಯುತ್ತದೆ. ಆದರೆ ಅರ್ಥವನ್ನೆ ಮಾಡಕೂಡದು ಮತ್ತು ಇದಕ್ಕಾಗಿ ಅಗ್ನಿಮೀಳೆ ಪುರೋಹಿತಮ್‌ದ ಬದಲಾಗಿ ಬ್ರಾಹ್ಮೀಮೀಳೆ ಪುರೋಹಿತಮ್ ಎಂಬುದು ಕೂಡ ನಡೆಯಲಾರದು ಆದರೆ ನಾನು ಅಗ್ನಿರೂಪಿ ಪುರೋಹಿತನ ಸ್ತವನ ಮಾಡುತ್ತೇನೆ, ಎಂಬ ಅನುವಾದದ ಸಂಗತಿಯೇ ದೂರ! ಒಳ್ಳೆಯದೇ ಆಯಿತು. ಇದು ಪೂಜ್ಯ ಬುದ್ಧಿಯ ಪ್ರಶ್ನೆ. ಇಲ್ಲಿ ಅನುವಾದ ನಡೆಯಲಾರದು, ರೂಪಾಂತರ ನಡೆಯಲಾರದು. ಇಷ್ಟೇ ಅಲ್ಲ ತಪ್ಪಾಗಿಯೂ ಕೂಡ ಮನಸ್ಸಿನಲ್ಲಿ 'ಅಗ್ನಿಂ ಅಂದರೆ ಅಗ್ನಿಗೆ' ಎಂದೂ ಅನಿಸಕೂಡದು.' ಅಗ್ನಿಂ ಎಂದರೆ ಏನು? ಬ್ರಹ್ಮ, ಮೀಳೆ ಎಂದರೆ ಏನು? ಬ್ರಹ್ಮ ಪುರೋಹಿತಮ್ ಎಂದರೆ ಏನು? ಬ್ರಹ್ಮ. ಹೀಗೆ ಅಖಂಡ ಬ್ರಹ್ಮ ಧಾರೆ ಹರಿಯುತ್ತಿರಬೇಕು. ಇತ್ತೀಚಿನ ದಿನಗಳಲ್ಲಿ ಈ ವಿಚಾರಸರಣಿ ಬಹಳ ಕಡಿಮೆ ನಡೆಯುತ್ತದೆಂಬುದು ನನಗೆ ಗೊತ್ತಿದೆ. ಆದರೆ ಒಂದು ವೇಳೆ ಎಂದಾದರೂ, ಯಾರಾದರೂ ವೇದದ ನಿಜವಾದ ಅರ್ಥ ತಿಳಿಯಲು ಸಮರ್ಥರಾದರೆ ಅವರು ಈ ಪದ್ಧತಿಯಿಂದಲೇ ಅದನ್ನು ತಿಳಿಯುವರು.

ಆದರೆ ಒಂದು ವೇಳೆ ವೇದ ಪ್ರಾಮಾಣ್ಯದ ಅರ್ಥವನ್ನು ಎತ್ತಿಕೊಳ್ಳುವುದಾದಲ್ಲಿ ಅದರ ಸಮಾವೇಶ ಮೂರ್ತಿಪೂಜಾ ವಿಭಾಗದಲ್ಲಿಯೆ ಆಗುತ್ತದೆ. ಉಪಾಸನೆಗಾಗಿ ಯಾವ ಮೂರ್ತಿ ಇರಬೇಕೆಂಬ ವಿಷಯದಲ್ಲಿ ಹಿಂದೂ ಧರ್ಮದಲ್ಲಿ ಯಾವ ಬಂಧನವನ್ನೂ ಇಟ್ಟಿಲ್ಲವಾದ ಕಾರಣದಿಂದಾಗಿ ಯಾರಾದರೂ ವೇದದ ಬದಲಿಗೆ ಗೀತಾ ಮೂರ್ತಿಯನ್ನು ಇಷ್ಟಪಟ್ಟರೆ? ಅಂಥವನಿಗೆ ಗೀತೆಯ ಅರ್ಥ ಗೊತ್ತಿಲ್ಲ ಸಂಸ್ಕೃತ ಭಾಷೆಯೂ ಕೂಡ ಬರುವುದಿಲ್ಲ. ಅವನು ನಿತ್ಯ ಗೀತೆಯ ಪುಸ್ತಕದ ಪೂಜೆ ಮಾಡುತ್ತಾನೆ. ಅವನ ಅನುಭವದ ಪ್ರಕಾರ ಗೀತೆಯ ಪೂಜೆಯಿಂದ ಅವನ ಭಾವನೆ ಪವಿತ್ರವಾಗುತ್ತದೆ. ಒಂದು ವೇಳೆ ಸರ್ಕಾರವು ನಾಳೆ ಗೀತಾ ಗ್ರಂಥವನ್ನು ಪ್ರತಿಬಂಧಗೊಳಿಸಿದರೆ ಅವನು ಗೀತೆಗಾಗಿ ಪ್ರಾಣವನ್ನೆ ಅರ್ಪಿಸಲು ಸಿದ್ಧನಾದಾನು. ಇಂಥ ಒಬ್ಬ ಮನುಷ್ಯನ ಕಲ್ಪನೆಯನ್ನು ಮಾಡಿ. ಗೀತೆಯಲ್ಲಿ ಏನಿದೆಯೆಂದು ಅವನನ್ನು ಕೇಳಿದಾಗ ಅವನು ಸ್ವಯಂ ಸ್ಫೂರ್ತಿಯಿಂದ ಉತ್ತರಕೊಡುವನು – "ಗೀತೆ ಸತ್ಯ ಹೇಳಲು ಪ್ರೇಮದಿಂದ ವ್ಯವಹರಿಸಲು ಭಗವಂತನನ್ನು ಮರೆಯಕೂಡದು ಎಂದೆಲ್ಲ ಹೇಳುವನು." ಅವನಿಗೆ ವೇದ ಪ್ರಾಮಾಣ್ಯದ ಹುಚ್ಚಿಲ್ಲ. ಅದಕ್ಕಾಗಿ ಗೀತೆಯ ಎದುರಿಗೆ ಎಲ್ಲವೂ ತುಚ್ಛಯೋಗ್ಯವೆ ಅಂದರೆ ವೇದ ಕೂಡ ತುಚ್ಛವೆಂದೇ ಸಿದ್ಧವಾಯಿತು. ಅವನು ವೇದದ ನಿಂದೆಯನ್ನು ಮಾಡುವುದಿಲ್ಲ ಒಂದು ವೇಳೆ ಮಾಡಿದ್ದೇ ಆದರೆ ಅದನ್ನು ಕೇವಲ ಗೀತೆಯ ಮೇಲಿನ ಪ್ರೇಮದ ಕಾರಣದಿಂದಾಗಿಯೇ! ಉದಾಹರಣೆಗೆ ಜ್ಞಾನೇಶ್ವರ ಮಹಾರಾಜರು ವೇದವನ್ನು 'ಕೃಪಣ'

ಎಂದು ಕರೆದಿದ್ದಾರೆ. ಅವನಿಗೆ ನೀವು ವೇದ ಈಶ್ವರನ ನಿಃಸ್ವಾಸಿತ ಎಂದು ಹೇಳಿದರೆ ಅವನು ಗೀತೆ ಪರಮೇಶ್ವರನ ಮುಖದಿಂದ ಬಂದ ವಾಣಿ ಎಂದು ಹೇಳುವನು. ಇಂಥ ಮನುಷ್ಯನನ್ನು ಹಿಂದುತ್ವದಿಂದ ಯಾರು ಮತ್ತು ಹೇಗೆ ಬೇರ್ಪಡಿಸಬಲ್ಲರು.

ವೇದವು ಸಾಹಿತ್ಯದ ಆದಿ ಗ್ರಂಥವಾಗಿದೆ ಪವಿತ್ರ ಬ್ರಾಹ್ಮಣರು ಮೂಳೆಗಳನ್ನು ಸವೆಸಿ ಬೀಸಿ ಅದರ ರಕ್ಷಣೆ ಮಾಡಿದ್ದಾರೆ. ವೇದದ ಅರ್ಥ ಅತ್ಯಂತ ಗೂಢವಾಗಿದೆ ಇತ್ಯಾದಿ ಅನೇಕ ಕಾರಣಗಳು ವೇದ ಪ್ರಾಮಾಣ್ಯಕ್ಕೆ ಅನುಕೂಲವಾಗಿದ್ದರೂ ಕೂಡ ವೇದ ಪ್ರಾಮಾಣ್ಯದ ಅಥವಾ ಪೂಜ್ಯ ಭಾವವನ್ನು ಯಾರ ಮೇಲೂ ಬಲವಂತವಾಗಿ ಹೇರಲಾಗದು. ಆದ್ದರಿಂದ ವೇದದ ಸ್ಥಳದಲ್ಲಿ ಗೀತೆಯಷ್ಟೇ ಅಲ್ಲ ಯಾರಿಗಾದರೂ ಬೈಬಲ್ ಪ್ರಮಾಣವೆಂದೆನಿಸಿದರೆ ಅದರ ಅರ್ಥವನ್ನು ತಿಳಿಯದಿದ್ದರೂ ಪರವಾಗಿಲ್ಲ ಎಂಬ ನಿಯಮವನ್ನಿಟ್ಟುಕೊಂಡು ಆಗಲೂ ಅದು ಮೂರ್ತಿಪೂಜೆಗೆ ಮಾನ್ಯವಾಗುತ್ತದೆ. ಹಿಂದೂ ಧರ್ಮ ಬುದ್ಧನನ್ನು ಪರಮಾತ್ಮನ ಒಂಭತ್ತನೆಯ ಅವತಾರವೆಂದು ಒಪ್ಪುವುದಾದರೆ ಏಸುವನ್ನು ಅವತಾರವೆಂದು ತಿಳಿದು ದಿನಾಲೂ ಬೆಳಿಗ್ಗೆ ಸ್ನಾನ ಸಂಧ್ಯಾ ಮಾಡಿದ ನಂತರ ಬೈಬಲ್ ಅಂದರೆ ಬ್ರಹ್ಮ ಎಂದು ಉಪಾಸನೆ ಮಾಡುತ್ತಾನೆ. ಹಿಂದುತ್ವ ಭಾವಿಸಿರುವ ಬಾಹ್ಯ ಆಚಾರವನ್ನು ಮರೆಯದಲೆ ಪಾಲಿಸಿದಾಗ ಯಾವ ಕಾರಣದಿಂದ ಅವನು ಹಿಂದುತ್ವದಿಂದ ಹೊರಗಿರಬೇಕು? ಇಂಥ ಪ್ರಶ್ನೆಯನ್ನು ಯಾರಾದರೂ ಕೇಳಬಹುದು. ಈ ವಿಚಾರ ಅಸ್ವಾಭಾವಿಕವಾಗಿಯೇ ಇದೆ. ಆದರೆ ಅಸಂಭವವಲ್ಲ. ಅವನ ಮೇಲೆ ಗುಲಾಮಗಿರಿಯ ಪ್ರಭಾವವಿದೆ. ಅವನು ಮಿಷನರಿಗಳ ಬಲೆಯಲ್ಲಿ ಸಿಕ್ಕಿದ್ದಾನೆಂದು ನೀವು ಕೇಳಬಹುದು ಆದರೆ ಈ ರೀತಿ ಯಾವುದೂ ಆಗಿಲ್ಲ. ಅವನು ಓರ್ವ ಸತ್ಪುರುಷನ ಮುಖದಿಂದ ಜೀವನ ಚರಿತ್ರೆಯನ್ನು ಕೇಳಿ ಅವನಿಗೆ ಬೈಬಲ್ ಮತ್ತು ಏಸುವಿನ ಬಗ್ಗೆ ಭಕ್ತಿ ಹುಟ್ಟಿತೆಂದು ನೀವು ತಿಳಿಯಿರಿ. ಅವನಿಗೆ ಇಸಾಯಿ ಆಗುವ ಇಚ್ಛೆ ಸ್ವಲ್ಪವೂ ಇಲ್ಲವೆಂದು ತಿಳಿಯಿರಿ. ಅವನನ್ನು ಅಹಿಂದು ಎಂದು ಹೇಳಲಾಗುವುದಿಲ್ಲವೆಂಬ ಮಾತು ಸ್ಪಷ್ಟವಾಗಿಯೆ ಇದೆ. ಆದರೆ ವೇದ ಪ್ರಾಮಾಣ್ಯವಾದಿಗಳು ಅವನನ್ನು ಅಹಿಂದು ಎಂದೇ ತಿಳಿಯುವರು. ಈ ಎಲ್ಲ ಕಲ್ಪನೆಗಳು ಒಟ್ಟಿಗೆ ಸೇರುವುದು ಅಸಂಭವವೆ. ಆದರೆ ಈ ಕಲ್ಪನೆಗಳನ್ನು ಮಾಡುವ ಉದ್ದೇಶ ವೇದ ಪ್ರಾಮಾಣ್ಯವಾದ ಮೂರ್ತಿಪೂಜೆ ದೇವತೆಗಳ ವಿಷಯದಲ್ಲಿ ಹಿಂದೂ ಧರ್ಮದ ಆಗ್ರಹವಿಲ್ಲ ಎಂಬುದನ್ನು ಹೇಳುವುದಕ್ಕಾಗಿ. ಅಲ್ಲದೆ ವೇದ ಪ್ರಾಮಾಣ್ಯದ ವಿಷಯದಲ್ಲಿ ಆಗ್ರಹ ಇಟ್ಟುಕೊಂಡಾಗ ಎಂಥ ಕಷ್ಟ ಉದ್ಭವಿಸುತ್ತದೆ ಎಂಬದನ್ನು ಗಮನ ತರುವುದಕ್ಕಾಗಿ. ವೇದ ಎಂಬ ಶಬ್ದಕ್ಕೆ ವ್ಯಾಪಕಾರ್ಥವನ್ನು ಕೊಟ್ಟು ಅದರಲ್ಲಿ ಎಲ್ಲ ಸದ್ಗ್ರಂಥಗಳನ್ನೂ ಸಮಾವೇಶಮಾಡಿದಲ್ಲಿ ಸಮಸ್ಯೆಯಿರುವುದಿಲ್ಲ. ಇದರಿಂದ ಸಿದ್ಧವಾಗುವುದೇನೆಂದರೆ ಹಿಂದೂ ಧರ್ಮದಲ್ಲಿ ಮೂರ್ತಿ ಪೂಜೆಯೇನೋ ಇದೆ ಆದರೆ ಅದರಿಂದ ಗ್ರಂಥ ಪ್ರಾಮಾಣ್ಯ ನಿಶ್ಚಿತವಾಗುವುದಿಲ್ಲ.

***

ಜನಪದ ನಿಲಯದ ಅಂತರಂಗದಲ್ಲಿ ೪೧

– ಸುರೇಂದ್ರ ಕೌಲಗಿ

ನನ್ನ ದೃಷ್ಟಿಗೆ ಇತಿಹಾಸಕ್ಕಿಂತ ಕಲ್ಪನೆ ದೊಡ್ಡದು. – ಗಾಂಧೀ



ಹೊಸ ಜೀವನ ದಾರಿ ಕೇಂದ್ರದ ಹಿಂದೆ ಇದ್ದ ಕಲ್ಪನೆಯನ್ನು ಸಾಕಾರಗೊಳಿಸುವ ಪ್ರಯತ್ನವನ್ನು ನಿರಂತರವಾಗಿ ಮಾಡಲಾಗುತ್ತಿತ್ತು. ಅದೊಂದು ವಿಶಾಲವಾದ ಕಲ್ಪನೆ. ಕರ್ನಾಟಕ ರಾಜ್ಯದಲ್ಲಿ ಅಂಥ ಕಲ್ಪನೆಯನ್ನು ಹೊಂದಿದ್ದ ಸಂಸ್ಥೆ ಗ್ರಾಮೀಣ ಪ್ರದೇಶದಲ್ಲಿ ಬೇರೊಂದು ಇದ್ದಿರಲಿಕ್ಕಿಲ್ಲ. ಈ ಕಲ್ಪನೆ ಆಗಿನ ಕಾಲಕ್ಕೆ ಮತ್ತು ಈಗಲೂ ಸಹ ವಿಶಿಷ್ಟವಾಗಿದೆಯೆಂದೆ ಹೇಳಬಹುದು. ದೇಶಕ್ಕೆ ಸ್ವಾತಂತ್ರ್ಯ ಬಂದು ಪಂಚವಾರ್ಷಿಕ ಯೋಜನೆಗಳ ಮೂಲಕ ಅಭಿವೃದ್ಧಿಯ ಯುಗ ಪ್ರಾರಂಭವಾಯಿತು. ಈ ಅಭಿವೃದ್ಧಿಯೆಂಬ ಮರೀಚಿಕೆ ಗ್ರಾಮೀಣ ಯುವಕರನ್ನು ಕಾಡದೆ ಬಿಡಲಿಲ್ಲ. ಅಭಿವೃದ್ಧಿಯ ದೆಶೆಯಿಂದಾಗಿ ಯುವಕರು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವುದಕ್ಕಾಗಿ ನಗರಗಳತ್ತ ಹೆಜ್ಜೆ ಇಡಬೇಕೆಂಬುದು ಗ್ರಾಮದಲ್ಲಿಯ ಜನರಿಗೆ ಮುಖ್ಯವಾಗಿ ಯುವಕರಿಗೆ ಬಂದಿತು. ಇದು ಗ್ರಾಮೀಣ ಪ್ರದೇಶದಲ್ಲಿರುವ ಅಂಗವಿಕಲರನ್ನೂ ತಟ್ಟದೆ ಇರಲಿಲ್ಲ. ನಗರಗಳತ್ತ ವಲಸೆ ಹೋಗುವ ಪ್ರಮಾಣ ಕ್ರಮೇಣ ಎಷ್ಟೊಂದು ದೊಡ್ಡದಾಗುತ್ತಾ ಬಂದಿತೆಂದರೆ ಅದನ್ನು ಗಂಗೆಯಲ್ಲಿ ಹರಿಯುವ ಪ್ರವಾಹಕ್ಕೆ ಹೋಲಿಸಬಹುದಾದಷ್ಟು ದೊಡ್ಡದಾಗಿತ್ತು. ಇಂಥ ಪ್ರವಾಹದ ವಿರುದ್ಧ ಬೇರೊಂದು ರೀತಿಯಲ್ಲಿ ಕೆಲಸ ಮಾಡುವುದು ಕಷ್ಟಸಾಧ್ಯವಾಗಿತ್ತು. ಆದರೆ ಈ ಕಷ್ಟಸಾಧ್ಯ ಕೆಲಸವನ್ನು ಸಾಧ್ಯ ಮಾಡಬೇಕೆಂಬ ಇಚ್ಛೆಯೂ ಅಷ್ಟೇ ಬಲವತ್ತರವಾಗಿತ್ತು. ಇದಕ್ಕೆ ಕಾರಣ, ಮತ್ತೆ ಅದೇ ಗಾಂಧಿ, ವಿನೋಬಾ ಮತ್ತು ಜಯಪ್ರಕಾಶ ನಾರಾಯಣರ ವಿಚಾರಗಳ ಅನೇಕ ವರ್ಷಗಳ ಪ್ರಭಾವ. ಈ ಮೂವರು ಭಾರತ ದೇಶದ ಉದ್ಧಾರವನ್ನು ಗ್ರಾಮಗಳ ಉದ್ಧಾರದಲ್ಲಿಯೆ ಕಂಡುಕೊಂಡಿದ್ದರು. ಆದ್ದರಿಂದ ಯಾವ ಕಾಲಕ್ಕೂ, ಯಾವ ಕಾರಣಕ್ಕೂ ಗ್ರಾಮಗಳ ಮತ್ತು ಗ್ರಾಮಗಳಲ್ಲಿಯ ಜನರ ಏಳಿಗೆ ವಿಷಯವನ್ನು ಟ್ರಸ್ಟ್ ಮರೆಯಲು ಸಾಧ್ಯವಿಲ್ಲ. ಹೀಗಾಗಿ ಹೊಸ ಜೀವನ ದಾರಿ ಕೇಂದ್ರ ಗ್ರಾಮೀಣ ಯುವ ಅಂಗವಿಕಲರ ನಗರ ವಲಸೆಯನ್ನು ತಡೆಯಬೇಕೆಂಬ ಉದ್ದೇಶದಿಂದ ಪ್ರಾರಂಭಿಸಲಾಯಿತು. ಗ್ರಾಮೀಣ ಪ್ರದೇಶದ ಜನರ ಜೀವನದ ಚಟುವಟಿಕೆಗಳ ಕೇಂದ್ರ ಬಿಂದು ವ್ಯವಸಾಯ. ವ್ಯವಸಾಯದ ನಂತರ ಉಳಿದ ಇತರ ಚಟುವಟಿಕೆಗಳಿಗೆ ಸ್ಥಾನ. ಆದ್ದರಿಂದ ಹೊಸ ಜೀವನ ದಾರಿ ಕೇಂದ್ರವು ಸುಮಾರು ೨೦ ಎಕರೆಯಷ್ಟು ವಿಶಾಲವಾದ ಭೂಮಿಯನ್ನೇನೋ ಹೊಂದಿತು. ಆದರೆ ಅದೆಲ್ಲ ಒಣ ಪ್ರದೇಶ. ಬಾವಿ ತೋಡಿದರೂ ಸಹ ನೀರು ದೊರೆಯುವುದು

ದುಸ್ತರ. ಇಂಥ ಒಣ ಪ್ರದೇಶದಲ್ಲಿ ಅಂಗವಿಕಲರಲ್ಲಿ ವ್ಯವಸಾಯದ ಬಗ್ಗೆ ಆಸಕ್ತಿ ಮೂಡಿಸಿ ಅವರು ಸ್ವತಃ ವ್ಯವಸಾಯ, ಕೋಳಿಸಾಕಣೆ, ಪಶುಸಂಗೋಪನೆ, ಮತ್ತು ಹಲವು ಗ್ರಾಮೋದ್ಯೋಗಗಳಲ್ಲಿ ಪರಿಣಿತಿಯನ್ನು ಪಡೆದು ಪುನಃ ತಮ್ಮ ಗ್ರಾಮಗಳಿಗೆ ಹಿಂದಿರುಗಿ ಅಲ್ಲಿ ತಮ್ಮ ಬಂಧು ಬಾಂಧವರ ನೆರವಿನೊಂದಿಗೆ ಗ್ರಾಮದಲ್ಲಿಯೆ ನೆಲಸುವಂತೆ ಮಾಡುವ ಉದ್ದೇಶವಾಗಿತ್ತು. ಹೊಸ ಜೀವನ ದಾರಿಯಲ್ಲಿ ವಿಶೇಷವಾದ ಮೂಲಭೂತ ಸೌಕರ್ಯಗಳಿರಲಿಲ್ಲ. ಆ ಸಮಯದಲ್ಲಿ ಹೊಸ ಜೀವನ ದಾರಿಯ ಕಲ್ಪನೆಯ ಅನುಷ್ಠಾನಕ್ಕೆ ಅನುಗುಣವಾದ ವಿತ್ತೀಯ ಬೆಂಬಲವೂ ಇರಲಿಲ್ಲ. ಇಂಥ ಪರಿಸ್ಥಿತಿಯಲ್ಲಿ ಒಂದು ಉದಾತ್ತವಾದ ಕಲ್ಪನೆಯನ್ನು ಸಾಕಾರಗೊಳಿಸುವುದು ವಿಶೇಷ ಪರಿಶ್ರಮದ ಸಂಗತಿಯೆ ಆಗಿತ್ತು. ಆದಾಗ್ಯೂ ಆಗ ಟ್ರಸ್ಟಿನಲ್ಲಿದ್ದ ಕೆಲವೇ ಕಾರ್ಯಕರ್ತರು ಹೊಸ ಜೀವನ ದಾರಿಗೆ ಸಂಬಂಧಿಸಿದ ಹಲವಾರು ಕಾರ್ಯಕ್ರಮಗಳನ್ನು ನಡೆಸಲು ಪ್ರಯತ್ನಿಸಿದರು. ಪ್ರಾರಂಭದಲ್ಲಿ ಕೆಲವು ಅಂಗವಿಕಲ ಮಕ್ಕಳು ಟ್ರಸ್ಟಿನಲ್ಲಿಯೆ ಬೆಳೆದ ಕಾರಣದಿಂದಾಗಿ ಹೊಸ ಜೀವನ ದಾರಿ ಕೇಂದ್ರಕ್ಕೆ ಹೋಗಲು ಸಮ್ಮತಿಸಿದರು. ದೂರದ ಗ್ರಾಮಗಳಲ್ಲಿರುವ ಅಂಗವಿಕಲರನ್ನು ಬರಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. ಅಲ್ಲದೆ ಈಗಾಗಲೇ ಹಳ್ಳಿಯ ಜೀವನದ ಕಷ್ಟವನ್ನು ಅನುಭವಿಸುತ್ತಿದ್ದ ತಂದೆ-ತಾಯಿಗಳು ತಮ್ಮ ಅಂಗವಿಕಲ ಮಕ್ಕಳಾದರೂ ಈ ಕಷ್ಟದಿಂದ ಪಾರಾಗಿ ಒಳ್ಳೆಯ ಜೀವನ ನಡೆಸಲೆಂದು ಬಯಸುತ್ತಿದ್ದುದು ಸ್ವಾಭಾವಿಕವಾಗಿತ್ತು. ಆದ್ದರಿಂದ ಅವರು ತಮ್ಮ ಮಕ್ಕಳನ್ನು ಹೊಸ ಜೀವನ ದಾರಿ ಕೇಂದ್ರಕ್ಕೆ ಕಳುಹಿಸುವ ಬಗ್ಗೆ ಉತ್ಸುಕರಾಗುತ್ತಿರಲಿಲ್ಲ. ಹೀಗಾಗಿ ಹೊಸ ಜೀವನ ದಾರಿಯಲ್ಲಿ ಯಾವ ಅಂಗವಿಕಲರ ಪುನರ್ವಸತಿಯ ಯೋಚನೆಯನ್ನು ಮಾಡಲಾಗಿತ್ತೋ ಅದು ತೀವ್ರಗತಿಯಲ್ಲಿ ಸಾಧ್ಯವಾಗಲಿಲ್ಲ. ಕರುಣಾಗೃಹದಿಂದ ಹೊಸ ಜೀವನ ದಾರಿಗೆ ಬಂದಿದ್ದಂಥ ವಿದ್ಯಾರ್ಥಿಗಳಲ್ಲಿ ಪ್ರಮುಖರಾಗಿದ್ದವರು ಕುಮಾರಸ್ವಾಮಿ, ರಾಚಪ್ಪ, ನರಸಿಂಹ, ರುದ್ರಮೂರ್ತಿ, ಮಲ್ಲಿಕಾರ್ಜುನ, ಹನುಮಂತ ಮುಂತಾದವರು. ಇವರಲ್ಲಿ ಕುಮಾರಸ್ವಾಮಿಯವರಿಗೆ ಹೊಸ ಜೀವನ ದಾರಿ ವಿಚಾರ ಮತ್ತು ರಚನೆ ಮನಸ್ಸಿನಾಳಕ್ಕೆ ಹೋಗಿತ್ತು. ಆದರೆ ಅವರು ತಮ್ಮ ಯುವಾವಸ್ಥೆಯಲ್ಲಿಯೆ ತೀರಿಕೊಂಡರು ಇದರಿಂದಾಗಿ ಹೊಸ ಜೀವನ ದಾರಿಯ ಬೆಳವಣಿಗೆಗೆ ದೊಡ್ಡ ಆಘಾತವಾಯಿತು. ಆ ಕೇಂದ್ರದ ಹಿಂದೆ ಇದ್ದ ವಿಚಾರ ಮತ್ತು ಆದರ್ಶಕ್ಕೆ ಅವರು ಒಂದು ರೀತಿಯಲ್ಲಿ ತಮ್ಮನ್ನು ಸಮರ್ಪಿಸಿ ಕೊಂಡಿದ್ದರು. ಇದಕ್ಕೆ ಮುಖ್ಯ ಕಾರಣ ಅವರು ಕರುಣಾಗೃಹಕ್ಕೆ ಬಂದು ಸೇರಿದ ಹೊಸತರಲ್ಲಿ ಅಲ್ಲಿದ್ದ ವಿಶೇಷವಾದ ಕಾರ್ಯಕ್ರಮಗಳು ಮತ್ತು ವಾತಾವರಣ. ಇದೆಲ್ಲವೂ ಅವರ ಮನಸ್ಸಿನ ಮೇಲೆ ಗಾಢವಾದ ಪ್ರಭಾವವನ್ನು ಬೀರಿದ್ದವು . ಇನ್ನುಳಿದ ನಿವಾಸಿಗಳು ಪಟ್ಟಣಕ್ಕೆ ಹೋಗಿ ತಮ್ಮ ಜೀವನವನ್ನು ರೂಪಿಸಿಕೊಳ್ಳಬೇಕೆಂಬ ಆಸೆಯನ್ನು ಇಟ್ಟುಕೊಂಡಿದ್ದರು ಅವರ ಆಸೆಯನ್ನು ಮೊಟಕುಗೊಳಿಸುವ ಪ್ರಶ್ನೆಯೇ ಇರಲಿಲ್ಲ. ಯಥಾಶಕ್ತಿ ಅದಕ್ಕೂ ಪ್ರೋತ್ಸಾಹ ಮತ್ತು ಮಾರ್ಗದರ್ಶನ ನೀಡುವುದು ಟ್ರಸ್ಟಿನ ಕರ್ತವ್ಯವಾಗಿತ್ತು. ಅವರಲ್ಲಿ ರಾಚಪ್ಪ ಮತ್ತು ನರಸಿಂಹ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ನಗರದತ್ತ ಪಯಣ ಬೆಳೆಸಿದರು ಮತ್ತು ತಮ್ಮ ಜೀವನವನ್ನು ವಿಶೇಷವಾದ ರೀತಿಯಲ್ಲಿ ರೂಪಿಸಿಕೊಂಡರು. ಇನ್ನುಳಿದ ಕೆಲವರು ತಮ್ಮ ಹಳ್ಳಿಗಳಿಗೆ ಹಿಂದಿರುಗಿದರು. ಹೀಗೆ

ಹೊಸ ಜೀವನ ದಾರಿ ಕೇಂದ್ರದಲ್ಲಿದ್ದು ವಿವಿಧ ಬಗೆಯಲ್ಲಿ ಶ್ರಮಿಸಿ ಅನುಭವ ಪಡೆದಂಥ ಅಂಗವಿಕಲರಿಗೂ ಅದು ಹೊಸ ಜೀವನ ದಾರಿಯಾಗಿಯೇ ಪರಿಣಮಿಸಿತೆಂಬುದು ಕಾರ್ಮೋಡದ ಅಂಚಿನಲ್ಲಿ ಮೂಡಿದ ಬೆಳ್ಳಿ ರೇಖೆಯೆಂದು ಹೇಳಬಹುದು.

ಉದಾಹರಣಾರ್ಥ ರಾಜಪ್ಪನವರ ಮುಂದಿನ ಜೀವನಬೆಳವಣಿಗೆಯನ್ನೇ ನೋಡಬಹುದು. ಅವರು ಹೊಸ ಜೀವನ ದಾರಿ ಕೇಂದ್ರದ ನಿರ್ಮಾಣದಲ್ಲಿ ಪಟ್ಟ ಶರೀರಶ್ರಮ ಅಗಾಧವಾದದ್ದು. ಅವರು ತಮ್ಮ ಅಂಗವಿಕಲತೆಯನ್ನೇ ಮರೆತು ಕೆಲಸ ಮಾಡಿದ್ದರೆಂದರೆ ಹೊಸ ಜೀವನ ದಾರಿ ಹೇಗೆ ಅವರಿಗೇ ಗೊತ್ತಾಗದಂತೆ ಅವರಲ್ಲಿ ಎಷ್ಟೊಂದು ಆತ್ಮಸ್ಥೈರ್ಯ ಮೂಡಿಸಿತೆಂಬುದನ್ನು ಗಮನಿಸಿದರೆ ಆಶ್ಚರ್ಯವಾಗುತ್ತದೆ. ಭಗವಂತನ ಕೃಪೆಯಿದ್ದಲ್ಲಿ ಮೂಕನೂ ಮಾತನಾಡುತ್ತಾನೆ, ಅಂಗವಿಕಲನೂ ಬೆಟ್ಟವನ್ನು ದಾಟುತ್ತಾನೆ ಎಂಬ ಸನಾತನ ಉಕ್ತಿ ವರ್ತಮಾನದಲ್ಲಿಯೂ ಸಿದ್ಧವಾಗಿ ಆ ಉಕ್ತಿಗೇ ಪುನಶ್ಚೈತನ್ಯ ಬಂದಿತೆಂದು ಹೇಳಿದರೆ ಅದು ಎಳ್ಳಷ್ಟೂ ಅತಿಶಯೋಕ್ತಿಯಾಗಲಾರದು. ಟ್ರಸ್ಟಿನ ಕರುಣಾಗೃಹದಲ್ಲಿ ಇದ್ದುಕೊಂಡು ಪ್ರಾಥಮಿಕ ವಿದ್ಯಾಭ್ಯಾಸ ಪ್ರಾರಂಭಿಸಿ, ಹೊಸ ಜೀವನ ದಾರಿ ಕೇಂದ್ರದಲ್ಲಿ ತಮ್ಮ ಯೌವನಾವಸ್ಥೆ ಕಳೆದು, ಮೈಸೂರಿನಲ್ಲಿ ಇದ್ದುಕೊಂಡು ಮುಂದಿನ ವ್ಯಾಸಂಗ ಮಾಡಿ ಪದವೀಧರರಾಗಿ ವಿಕ್ರಾಂತ್ ಟೈರ್ ಕಂಪನಿಯಲ್ಲಿ ಕೆಲಸ ಪಡೆದು ಅಲ್ಲಿ ಓರ್ವ ಒಳ್ಳೆಯ ಕೆಲಸಗಾರನೆಂದು ಹೆಸರು ಪಡೆದರು, ಅಷ್ಟೇ ಅಲ್ಲ ಕರುಣಾಗೃಹ ಮತ್ತು ಹೊಸ ಜೀವನ ದಾರಿ ಕೇಂದ್ರದಲ್ಲಿ ಬೆಳಸಿಕೊಂಡಿದ್ದ ನಾಯಕತ್ವದ ಗುಣಗಳನ್ನು ಅಲ್ಲಿ ಉಪಯೋಗಿಸಿಕೊಂಡು ಕಾರ್ಮಿಕರು ಹಾಗೂ ಆಡಳಿತ ಮಂಡಳಿಯ ಸದಸ್ಯರಿಗೆ ವಿಶೇಷ ಸಾಮರ್ಥ್ಯದ ವ್ಯಕ್ತಿಯಾಗಿ ಕಂಡರು. ಇದಕ್ಕೆ ಕಾರಣ ರಾಜಪ್ಪನವರು ಕರುಣಾಗೃಹದಲ್ಲಿ ಗಿರಿಜಮ್ಮನವರ ಮಾರ್ಗದರ್ಶನದಲ್ಲಿ ತೋಟದ ಕೆಲಸ ಮಾಡಿದ್ದು, ಅಡಿಗೆ ಮನೆ ಕೆಲಸದಲ್ಲಿ ಸಹಾಯಮಾಡಿದ್ದು, ಹೊಸ ಜೀವನ ದಾರಿಯ ವಿಶಾಲ ಕ್ಷೇತ್ರದಲ್ಲಿ ಮಾಡಿದ ವಿವಿಧ ಬಗೆಯ ಕೃಷಿ ಮತ್ತು ತೋಟಗಾರಿಕೆ ಮತ್ತು ಕಟ್ಟಡ ನಿರ್ಮಾಣದಂಥ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದು. ಶರೀರ ಶ್ರಮ ಕೀಳಲ್ಲವೆಂಬ ಭಾವನೆ ಅವರಲ್ಲಿ ಮೂಡಿದ್ದು. ಅಷ್ಟರಲ್ಲಿ ಅವರು ತಮ್ಮ ಶಾರೀರಿಕ ತೊಂದರೆಯನ್ನು ನಿವಾರಿಸಿಕೊಳ್ಳಲು ಸಿದ್ಧರಾದದ್ದು ದೇವರ ಕೈವಾಡವೆಂದೇ ಹೇಳಬಹುದು. ಪೂರ್ತ ತಿರುಚಿಕೊಂಡಿದ್ದ ಎರಡು ಕಾಲುಗಳನ್ನು ನೇರ ಮಾಡಿಸಿಕೊಳ್ಳುವ ಶಸ್ತ್ರಕ್ರಿಯೆಯ ನೋವು ಸಾಮಾನ್ಯವಾದುದಲ್ಲ. ಎರಡು ವರ್ಷ ಹಾಸಿಗೆಗೇ ಬಂಧಿತವಾಗಬೇಕಾಯಿತು. ಅವರ ಗುರುಹಿರಿಯರ ಸಹಾಯದಿಂದ ದೈಹಿಕವಾಗಿ ಮತ್ತು ಮಾನಸಿಕವಾಗಿ ಹೊಸ ಮನುಷ್ಯರಾಗಿ ಆಸ್ಪತ್ರೆಯಿಂದ ಹೊರ ಬಂದರು. ಕರುಣಾಗೃಹದಲ್ಲಿಯೇ ಇನ್ನೋರ್ವ ಅಂಗವಿಕಲ ಹುಡುಗಿಯೊಂದಿಗೆ ಮದುವೆಯಾದರು. ಅದೂ ಅಂತರ್ಜಾತಿಯ ವಿವಾಹ. ಅಂತರ್ರಾಜಾತಿಯ ವಿವಾಹದ ಮಾತು ಇಂದಿನಷ್ಟು ರಭಸವಾಗಿ ಕೇಳಿ ಬರದೇ ಇದ್ದ ಕಾಲದಲ್ಲಿ. ನಂತರ ಮೈಸೂರಿನಲ್ಲಿಯೂ ಅಂಗವಿಕಲರ ಏಳಿಗೆಗೆ ಬಹಳಷ್ಟು ಕೆಲಸಮಾಡಿದರು. ಈ ಕೆಲಸದಲ್ಲಿ ಅವರಿಗೆ ಬಿ.ಆರ್. ಪ್ರಾಣೇಶ್‌ರಾವ್, ಪ್ರೊ॥ ಕೆ. ಶ್ರೀನಿವಾಸನ್, ಪ್ರೊ॥ ಪದ್ಮಕುಮಾರ್ ಮುಂತಾದ ಹಿರಿಯರಲ್ಲದೆ ಅನೇಕ ಅಂಗವಿಕಲ ಯುವಕರೂ ನೆರವಾದರು. ಮೈಸೂರಿನಲ್ಲಿ ನೆಲಸಿ ಕ್ರಿಯಾಶೀಲರಾಗಿ ಜೀವನ ನಡೆಸುತ್ತಿದ್ದಾರೆ.

ಹೊಸ ಜೀವನ ದಾರಿ ಕೇಂದ್ರವು ಅಂಗವಿಕಲ ಯುವಕರನ್ನು ಗ್ರಾಮೀಣ ಪ್ರದೇಶದಲ್ಲಿಯೇ ಪುನರ್ ವಸತಿಗೊಳಿಸಬೇಕೆಂದುಇಟ್ಟುಕೊಂಡಿದ್ದ ಆದರ್ಶ ನೇರವಾಗಿ ನೇರವೇರದೇ ಇದ್ದರೂ ಹೊಸ ಜೀವನ ದಾರಿ ಕೇಂದ್ರದಲ್ಲಿದ್ದು ಗ್ರಾಮೀಣ ಬದುಕಿನ ಅನುಭವದ ಕೆಚ್ಚು ವಿಶೇಷ ಬಗೆಯ ಜೀವನ ಪದ್ಧತಿಯ ನಗರ ಜೀವನದಲ್ಲಿ ಬದುಕಿಬಾಳುವ ದಾರಿಬುತ್ತಿಯನ್ನು ಕೊಟ್ಟದ್ದು ಆ ಕೇಂದ್ರದ ಹೆಗ್ಗಳಿಕೆ ಎಂದು ಭಾವಿಸಬಹುದು.

ಇನ್ನೊಂದು ಉದಾಹರಣೆ ನರಸಿಂಹರವರದು. ಮೇಲುಕೋಟೆ ಹತ್ತಿರದ ಚಂದ್ರೆ ಗ್ರಾಮದವರು. ಎರಡೂ ಪಾದಗಳು ತಿರುಚಿವೆ. ಬಾಲಕನಾಗಿದ್ದಾಗ ಶಾರೀರಿಕ ದೃಢತೆ ಇಲ್ಲದ್ದರಿಂದ ನಡೆಯುವುದು ಕಷ್ಟವಾಗುತ್ತಿತ್ತು. ಕರುಣಾಗೃಹ ಪ್ರಾರಂಭವಾದ ಹೊಸದರಲ್ಲಿಯೇ ವಿದ್ಯಾರ್ಥಿಯಾಗಿ ಬಂದು ಸೇರಿದರು. ಅದೊಂದು ಶ್ರಾವಣ ಶನಿವಾರ. ಅವರು ತಮ್ಮ ತಂದೆಯೊಂದಿಗೆ ಮೇಲುಕೋಟೆಗೆ ಬಂದಿದ್ದರು. ಅವರನ್ನು ನೋಡಿದ ಯಾರೋ ಒಬ್ಬರು ಈ ಬಾಲಕನ ಪಾದಗಳಲ್ಲಿಯ ತೊಂದರೆಯನ್ನು ಗಮನಿಸಿ ಅವರ ತಂದೆಗೆ ಕರುಣಾಗೃಹದ ವಿಷಯ ತಿಳಿಸಿದರು. ನರಸಿಂಹನವರನ್ನು ಅವರ ತಂದೆ ಕರುಣಾಗೃಹಕ್ಕೆ ತಂದು ಸೇರಿಸಿದರು. ಕರುಣಾಗೃಹದಲ್ಲಿ ಅವರಿಗೆ ಜೀವನ ಶಿಕ್ಷಣ ಮಾದರಿಯಲ್ಲಿ ಶಿಕ್ಷಣ ಸಿಕ್ಕಿತು. ತೋಟದ ಕೆಲಸ, ನೂಲುಗಾರಿಕೆ, ಪ್ರಾರ್ಥನೆ, ಆವರಣದ ಸ್ವಚ್ಛತೆ ಇತ್ಯಾದಿಗಳು ಕರುಣಾಗೃಹ ಜೀವನದ ದೈನಂದಿನ ಕಾರ್ಯಕ್ರಮಗಳಾಗಿದ್ದವು. ಅದೇ ಸಮಯದಲ್ಲಿ ವಯಸ್ಕ ಮಹಿಳೆಯರ ಸಂಕ್ಷಿಪ್ತ ಶಿಕ್ಷಣ ಶಾಲೆ ನಡೆಯುತ್ತಿತ್ತು. ಅವರೆಲ್ಲ ಖಾಸಗಿ ವಿದ್ಯಾರ್ಥಿನಿಯರಾಗಿ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಸಿದ್ಧರಾಗುತ್ತಿದ್ದುದ್ದರಿಂದ ನರಸಿಂಹರವರೂ ಖಾಸಗಿ ವಿದ್ಯಾರ್ಥಿಯಾಗಿ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತು ತೇರ್ಗಡೆ ಹೊಂದಿದ ನಂತರ ಹೊಸ ಜೀವನ ದಾರಿ ಕೇಂದ್ರದಲ್ಲಿ ಕೆಲವಾರು ತಿಂಗಳು ಇದ್ದು ಅಲ್ಲಿ ಅನೇಕ ಬಗೆಯ ಕೆಲಸಗಳನ್ನು ಮಡುತ್ತಾ ತಮ್ಮ ಅನುಭವವನ್ನೂ, ಚಿಂತನೆಯನ್ನೂ ಹೆಚ್ಚಿಸಿಕೊಂಡರು. ಆ ಸಮಯದಲ್ಲಿಯೇ ಅವರಿಗೆ ಸಾಹಿತ್ಯಾಭಿರುಚಿಯೂ ಬೆಳೆಯಿತು. ಕವಿತೆಗಳನ್ನು ಬರೆಯುವುದು ಮತ್ತು ರಾಗವಾಗಿ ಹಾಡುವುದನ್ನು ಅಭ್ಯಾಸ ಮಾಡಿಕೊಂಡರು. ಕಂಠ ಮಧುರವಾಗಿತ್ತು. ಆಗ ಅವರು ಬರೆದ ಕವನಗಳ ಸಂಗ್ರಹವನ್ನು 'ಇಂದಲ್ಲ-ನಾಳೆ' ಎಂಬ ಹೆಸರಿನಲ್ಲಿ ಪ್ರಕಟಿಸಲಾಯಿತು. ಮುಂದೆ ಅವರು ಮೈಸೂರಿಗೆ ಹೋಗಿ ಕನ್ನಡದಲ್ಲಿ ಎಂ.ಎ ಮಾಡಿಕೊಂಡರು. ಆ ಸಮಯಕ್ಕೆ ಸರಿಯಾಗಿ ಟ್ರಸ್ಟ್ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಿತ್ತು. ನರಸಿಂಹರವರು ಕನ್ನಡ ಉಪನ್ಯಾಸಕರಾಗಿ ಆಯ್ಕೆಯಾದರು. ಈಗ ಅವರು ಕಾಲೇಜಿನ ಪ್ರಾಂಶುಪಾಲರಾಗಿದ್ದಾರೆ. ಟ್ರಸ್ಟ್ ನಡೆಸುತ್ತಿದ್ದ ವಯಸ್ಕರ ಶಿಕ್ಷಣ ತರಗತಿಗಳಲ್ಲಿ ಉಪಧ್ಯಾಯಿನಿಯಾಗಿದ್ದ ಪ್ರೇಮ ಎಂಬುವವರನ್ನು ಕನ್ಯೆಯಾಗಿ ಆರಿಸಿ ನರಸಿಂಹ ಮತ್ತು ಪ್ರೇಮರವರ ಮದುವೆಯನ್ನು ಕರುಣಾಗೃಹದಲ್ಲಿಯೇ ನೆರವೇರಿಸಲಾಯಿತು. ಈಗ ಅವರು ತುಂಬಿದ ಸಂಸಾರದೊಂದಿಗೆ ಸುಖವಾಗಿದ್ದಾರೆ. ಹೀಗೆ ಅನೇಕರ ಯಶಸ್ಸಿನೊಂದಿಗೆ ಕರುಣಾಗೃಹ ಮತ್ತು ಹೊಸ ಜೀವನ ದಾರಿ ಕೇಂದ್ರದ ಉದ್ದೇಶ್ಯ ನೆರವೇರಿದವು.

(ಮುಂದುವರಿಯುವುದು)

* * *

ಸನ್ಮಾನ್ಯರಿಂದ

೨೦೦೭ ಫೆಬ್ರವರಿಯ ಜನಪದ ವಿಚಾರ ಓದಿದೆ. ಲೇಖನಗಳು ಮನಕಲಕಿದವು. ಗೋವಿನ ಬಗ್ಗೆ, ರೈತರ ಬಗ್ಗೆ, ಶಾಸ್ತ್ರಿಯವರ ಬಗ್ಗೆ ಎಲ್ಲವೂ ಸಾಕಷ್ಟು ಚಿಂತನೆಗೆ ಗ್ರಾಸ. ಪತ್ರಿಕೆಯ ಹೊರಪುಟದ ಮೇಲೆ ಇರುವ ಕಾಮಧೇನುವಿನ ಚಿತ್ರ ತುಂಬ ಆಕರ್ಷಣೀಯ. **'ಆಕಳು ಕರುಣೆಯ ಕಾವ್ಯ'** – ಗಾಂಧಿ ಮಾತಿಗೆ ಸೊಗಸಾದ ಚಿತ್ರಣ!

–ನಿಲತ್ತಹಳ್ಳಿ ಕಸ್ತೂರಿ, ಬೆಂಗಳೂರು.

ಸಂತಾಪ

'ಪುತ್ತೂರು ಅಜ್ಜ' ಎಂದೇ ಪ್ರಸಿದ್ಧರಾದ ನೆಟ್ಟಾರು ರಾಮಚಂದ್ರ ಭಟ್ಟ ದೇಹತ್ಯಾಗ ಮಾಡಿದ್ದಾರೆ.

೧೧–೦೩–೨೦೦೭ ರ ಭಾನುವಾರ ಮಧ್ಯರಾತ್ರಿ 'ಈ ದೇಹ ನಾನಲ್ಲ' ಎಂಬ ವಿಶಿಷ್ಟ ಸಿದ್ಧಾಂತದ ಪ್ರತಿಪಾದಕರಾದ ಭಟ್ಟರು ದೇಹ ತ್ಯಜಿಸಿದರು.

೧೯೧೬ರಲ್ಲಿ ಹುಟ್ಟಿದ ಇವರು ಮದುವೆಯಾಗಿ, ಮಗ ಹುಟ್ಟಿ ಸಂಸಾರಸ್ಥರಾಗಿದ್ದಾಗ ೧೯೫೨ ರಲ್ಲಿ ಅಂದರೆ ತಮ್ಮ ೩೬ರ ವಯಸ್ಸಿನಲ್ಲಿ ತಮ್ಮ ಮನೆಯನ್ನು ಬಿಟ್ಟು ಹೋದರು. ಆ ಸಮಯದಲ್ಲಿ ಅವರಿಗೆ ವಿಪರೀತ ಎದೆನೋವು ಕಾಣಿಸಿಕೊಂಡಿತ್ತು. ಅದ್ಭುತ ಕೃಷಿಕರಾಗಿ ತೋಟ–ಹೊಲ–ಗದ್ದೆ ಎಂದು ಮಣ್ಣಿನ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಭಟ್ಟರು ಎದೆನೋವಿನಿಂದ ಕಂಗಾಲಾದರು.

ಯಾವ ಔಷಧಿಯಲ್ಲೂ ಗುಣವಾಗದ ನೋವು ಪದೇ ಪದೇ ಕಾಡುತ್ತಿದ್ದಂತೆ, ಆ ನೋವಿಗೆ ತಮ್ಮ ಮನಸ್ಸನ್ನು ತೊಡಗಿಸಿಕೊಳ್ಳುವ ಮೂಲಕ 'ಸ್ವೀಕಾರವೇ ದಾಟುವ ದಾರಿ' ಎಂಬ ಸ್ವಯಂ ಸಿದ್ಧಾಂತವನ್ನು ಅನ್ವೇಷಿಸಿದರು.

'ಈ ದೇಹ ನಾನಲ್ಲ' ಎಂದ ಅವರನ್ನು ಹುಚ್ಚ ಎಂದೇ ಜನ ಗೇಲಿ ಮಾಡಿದರು. ಅವರು ಆ ಬಳಿಕ ೧೮ವರ್ಷಗಳ ಕಾಲ ಯಾರ ಸಂಪರ್ಕಕ್ಕೂ ಬಾರದೆ ಏಕಾಂತದಲ್ಲಿ ಕಳೆದರು. ಆ ವೇಳೆಗೆ ಅವರಿಗೆ 'ನಾವು ಈ ತನಕ ತಿಳಿದುಕೊಂಡಿದ್ದು ಸತ್ಯವಲ್ಲ ಎಂಬುದನ್ನು ತಿಳಿಯುವದೇ ಸತ್ಯ' ಎಂಬ ಅನುಭವ ಸಾಕ್ಷಾತ್ಕಾರವಾಗಿತ್ತು. ಬದಲಾವಣೆಯ ಬಳಿಕ ಕೊನೆ ಉಸಿರಿನವರೆಗೂ ತಾನು ತಾನಲ್ಲ ಎಂಬ ನೇತಿ ಸಿದ್ಧಾಂತವನ್ನು ಪ್ರತಿಪಾದಿಸಿದರು. ಇಂಥ ಸಾಧಕರ ಅಗಲುವಿಕೆಗಾಗಿ ಜನಪದ ವಿಚಾರವು ತನ್ನ ಸಂತಾಪವನ್ನು ವ್ಯಕ್ತಪಡಿಸುತ್ತದೆ ಮತ್ತು ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತದೆ.

* * *

ಸಣ್ಣ ಕತೆಗಾರರಾಗಿ ಕನ್ನಡ ಸಾಹಿತ್ಯಕ್ಕೆ ದೊಡ್ಡ ಕೊಡುಗೆಯನ್ನು ಕೊಟ್ಟು ೧೯–೩–೨೦೦೭ರಂದು ನಿಧನರಾದ ಶ್ರೀ **ರಾಘವೇಂದ್ರ ಖಾಸನೀಸ್**ರವರಿಗೆ ಜನಪದ ವಿಚಾರ ತನ್ನ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

* * *

'ಜನಪದ ವಿಚಾರ' ಪತ್ರಿಕೆಯ ಒಡೆತನ ಮತ್ತಿತರ ವಿವರಗಳ ಪ್ರಕಟಣೆ
ಪ್ರಾರೂಪ ೪ (ವಿಧಿ ೮)

೧. ಪ್ರಕಟಣೆಯ ಸ್ಥಳ : ಮೇಲುಕೋಟೆ

೨. ಪ್ರಕಟಣೆಯ ನಿಯತಕಾಲಿಕೆ : ಮಾಸಿಕ

೩. ಮುದ್ರಕರ ಹೆಸರು : ಬಾಲಕೃಷ್ಣ
ಭಾರತದ ಪ್ರಜೆಯೆ? : ಹೌದು
ವಿಳಾಸ : ಇಂದೀವರ ಮುದ್ರಣಾಲಯ,
ನಾಗಮಂಗಲ, ಮಂಡ್ಯ ಜಿಲ್ಲೆ.

೪. ಪ್ರಕಾಶಕರ ಹೆಸರು : ಸುರೇಂದ್ರ ಕೌಲಗಿ
ಭಾರತದ ಪ್ರಜೆಯೆ? : ಹೌದು
ವಿಳಾಸ : ಜನಪದ ಸೇವಾ ಟ್ರಸ್ಟ್
ಕಲ್ಯಾಣಿ ಬೀದಿ
ಮೇಲುಕೋಟೆ – ೫೭೧ ೪೩೧
ಮಂಡ್ಯ ಜಿಲ್ಲೆ.

೫. ಸಂಪಾದಕರ ಹೆಸರು : ಸುರೇಂದ್ರ ಕೌಲಗಿ
ಭಾರತದ ಪ್ರಜೆಯೆ? : ಹೌದು
ವಿಳಾಸ : ಜನಪದ ಸೇವಾ ಟ್ರಸ್ಟ್
ಕಲ್ಯಾಣಿ ಬೀದಿ
ಮೇಲುಕೋಟೆ – ೫೭೧ ೪೩೧
ಮಂಡ್ಯ ಜಿಲ್ಲೆ.

೬. ಮಾಲೀಕರ ಹೆಸರು ಮತ್ತು ವಿಳಾಸ : ಜನಪದ ಸೇವಾ ಟ್ರಸ್ಟ್
ಕಲ್ಯಾಣಿ ಬೀದಿ
ಮೇಲುಕೋಟೆ – ೫೭೧ ೪೩೧
ಮಂಡ್ಯ ಜಿಲ್ಲೆ

ಈ ಕೆಳಗೆ ರುಜು ಮಾಡಿರುವ ಸುರೇಂದ್ರ ಕೌಲಗಿ ಆದ ನಾನು ಮೇಲೆ ತಿಳಿಸಲಾದ ವಿವರಗಳು ನಮಗೆ ತಿಳಿದ ಮಟ್ಟಿಗೆ ಸತ್ಯ.

ದಿನಾಂಕ ೨೮–೦೨–೨೦೦೬
ಸ್ಥಳ : ಮೆಲುಕೋಟೆ.

ಸಹಿ
(ಸುರೇಂದ್ರ ಕೌಲಗಿ)
ಪ್ರಕಾಶಕ

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ *(–ಸಂಪಾದಕರು)*

ತೆರೆದ-ಅಂಚೆ



KA / SK / MND / 470 / 2006-2008
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

jANAPADA VICHARA **-** Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431.DTP Sanketh, Melkote. Printed at INDIVARA, Nagamangala
Phone : 08236 – 298754 e-mail : janapada@yahoo.com